# ಶ್ರೀ ಗುರೂಜಿ

# INDEX


1 ಶ್ರೀ ಗುರೂಜಿ ..... 5

1.1 ಶ್ರೀ ಗುರೂಜಿ ಯಾರು? ..... 5

1.2 ಜನ್ಮಜಾತ ಬುದ್ಧಿ ಪ್ರತಿಭೆ ..... 5

1.3 ಅಸಾಮಾನ್ಯ ಸಹನಶಕ್ತಿ ..... 6

1.4 ಅನುಶಾಸನಪ್ರಿಯತೆ ..... 6

1.5 'ಗುರೂಜಿ' ಹೆಸರು ಏಕೆ ಬಂತು? ..... 7

1.6 ವಂಶ ನಿರ್ವಂಶವಾದರೇನು? ..... 7

1.7 ಜೀವನ ದಿಕ್ಕಿನ ಹುಡುಕಾಟದಲ್ಲಿ ..... 8

1.8 ಅಪ್ರತಿಮ ಸೇವಾಮೂರ್ತಿ ..... 8

2 ಜನ್ಮಜಾತ ದೇಶಭಕ್ತ ಡಾ | ಹೆಡಗೇವಾರ್ ..... 10

2.1 ಸಂಘ ಸ್ಥಾಪನೆ ..... 10

2.2 ಶ್ರೀ ಗುರೂಜಿಯವರ ಪರೀಕ್ಷೆ – ನಿಯುಕ್ತಿ ..... 11

3 ಸಂಘದ ಪ್ರಮುಖರಾಗಿ ..... 12

3.1 'ಭಾರತ ಛೋಡೋ' : ಶ್ರೀ ಗುರೂಜಿಯವರ ಯೋಗ್ಯ ದೃಷ್ಟಿ ..... 12

3.2 ೧೯೪೭ ರ ಭೀಕರ ಸಮಯದಲ್ಲಿ ಅದ್ವಿತೀಯ ನೇತೃತ್ವ ..... 13

3.3 ಸಾಮರಸ್ಯದ ಕರೆ ..... 14

3.4 ಸಂಘದ ಮೇಲೆ ನಿರ್ಬಂಧ : ಗಾಂಧೀಜಿ ಹತ್ಯೆ – ಒಂದು ನೆಪ ..... 15

3.5 ಅಗ್ನಿ ಪರೀಕ್ಷೆಯಲ್ಲಿ ವಿಜಯಿ ..... 16

3.6 ಅಭೂತಪೂರ್ವ ಸತ್ಯಾಗ್ರಹ ..... 16

3.7 ವಿಶ್ವದಲ್ಲೇ ಸಾಟಿಯಿಲ್ಲದ ಉದಾಹರಣೆ ..... 17

3.8 ಅದ್ಭುತ ಮಾನಸಿಕ ಸ್ಥೈರ್ಯ ..... 17

3.9 ಸಮಾಜದೇವನ ಪರೀಕ್ಷೆ ..... 18

3.10 ಕಾಶ್ಮೀರವನ್ನು ರಕ್ಷಿಸುವಲ್ಲಿ ........ 19

4 ಸ್ಮೃತಿಮಂದಿರ : ಶ್ರೀ ಗುರೂಜಿಯವರ ಬಹುಮುಖ ಪ್ರತಿಭೆ ........ 20

4.1 ಮಾತೃ ವಿಯೋಗ : ಶಂಕರಾಚಾರ್ಯರಿಂದ ಸಾಂತ್ವನ ........ 20

4.2 ಚೀನಾದ ಆಕ್ರಮಣ : ಭವಿಷ್ಯದರ್ಶಿ ........ 21

4.3 ನಿತ್ಯ ಪ್ರೇರಣೆಯ ಆ ಸ್ಮಾರಕ ........ 21

4.4 ನೇಪಾಳದ ಜೊತೆ ಭಾವಬಂಧನ ........ 22

4.5 ನಿರ್ಭೀತ ಅಸಂದಿಗ್ಧ ವಿಶ್ಲೇಷಣೆ ........ 23

4.6 ೧೯೭೧ - ನಮ್ಮ ಸೈನ್ಯದ ವಿಶ್ವದಾಖಲೆ ........ 23

5 ಸ್ವತಂತ್ರ ಭಾರತದಲ್ಲಿ ಸಂಘದ ಪಾತ್ರ ........ 25

5.1 ಸರ್ವಸ್ಪರ್ಶಿ ಸ್ವದೇಶೀ ಜೀವನ ಪದ್ಧತಿ ........ 25

5.2 ಶ್ರದ್ಧಾಬಿಂದು ಗೋರಕ್ಷಣೆಗಾಗಿ ........ 26

5.3 ಭಾಷಾವಾರು ಪ್ರಾಂತಗಳ ಬಗ್ಗೆ ಅಪಾಯದ ಘಂಟೆ ........ 26

5.4 ಗೋವಾ ಮುಕ್ತಿ ........ 27

5.5 ಒಂದು ಹೊಸ ಬೆಳವಣಿಗೆ ........ 27

5.6 ಡಾ || ಅಂಬೇಡ್ಕರರ ವಿಧಾಯಕ ದೃಷ್ಟಿಕೋಣ ........ 27

5.7 ಇಂದೂರಿನ ಶಿಬಿರ : ಸಾಮಯಿಕ ಮಾರ್ಗದರ್ಶನ ........ 28

5.8 ರಾಜಕಾರಣದೊಂದಿಗೆ ಸಂಬಂಧವಿಲ್ಲ ........ 28

5.9 ಹಿಂದು ಸಮಾಜಕ್ಕೊಂದು ಅಪೂರ್ವ ಕೊಡುಗೆ ........ 28

5.10 ನ ಹಿಂದುಃ ಪತಿತೋ ಭವೇತ್ ........ 29

5.11 ಅಖಂಡಭಾರತ ಆಗುತ್ತದೆ ........ 29

5.12 ವನವಾಸಿಗಳೆಲ್ಲರೂ ಹಿಂದುಗಳೇ ........ 30

5.13 ವನವಾಸಿ ಬಂಧುಗಳ ವಿಕಾಸಕ್ಕಾಗಿ ........ 30

5.14 ‘ಹಿಂದವಃ ಸೋದರಾಃ ಸರ್ವೇ’ ........ 30

6 ಅನುಪಮ ಪತ್ರವ್ಯವಹಾರ ........ 32

7 ಸಂಧ್ಯಾಕಾಲದ ಪ್ರಾರಂಭ ........ 33

7.1 **ಠಾಣೆ ಶಿಬಿರದಲ್ಲಿ ಚಿಂತನೆ** ........ 33

7.2 **ಸರ್ವತ್ರ ವಿಜಯ** ........ 34

7.3 **ಪೂರ್ವ ಸಂಕೇತ** ........ 34

7.4 **ಅವರ್ಣನೀಯ ದುಃಖದ ಕ್ಷಣ** ........ 35

8 ರಾಷ್ಟ್ರವ್ಯಾಪಿ ಶ್ರದ್ಧಾಸುಮನ ........ 36

9 ಆಧುನಿಕ ಭಗೀರಥ - ಆಧುನಿಕ ಗಂಗೆ ........ 37

# 1 ಶ್ರೀ ಗುರೂಜಿ

` ಶ್ರೀ ಗುರೂಜಿ' ಎಂಬ ಹೆಸರು ಕೇಳಿದ ಕೂಡಲೇ ಸ್ವಾಭಾವಿಕವಾಗಿ ಅವರು ಯಾರು? ಅವರ ವಿಶೇಷ ಗುಣಗಳೇನು? ಯಾವುದಾದರೂ ಸಂಘಟನೆಯ ಪ್ರಮುಖರಾಗಿದ್ದರೆ? ದೇಶಕ್ಕಾಗಿ ಏನಾದರೂ ಒಳ್ಳೆಯ ಕೆಲಸ ಮಾಡಿದ್ದರೆ? ಇತ್ಯಾದಿ ಪ್ರಶ್ನೆಗಳು ಮನಸ್ಸಿಗೆ ಬರುತ್ತವೆ.

## 1.1 ಶ್ರೀ ಗುರೂಜಿ ಯಾರು?

ಈ ಎಲ್ಲಾ ಪ್ರಶ್ನೆಗಳ ಸಂಕ್ಷಿಪ್ತ ಉತ್ತರವನ್ನೀಗ ನೋಡೋಣ. ಶ್ರೀ ಗುರೂಜಿ ಸಂಘದ ಎರಡನೆಯ ಸರಸಂಘಚಾಲಕರು - ಎಂದರೆ ಅಖಿಲ ಭಾರತೀಯ ಪ್ರಮುಖರಾಗಿದ್ದರು. ಅವರ ಜನ್ಮ ಕ್ರಿ.ಶ. ೧೯೦೬ ರಲ್ಲಿ ಆಯಿತು. ಈಗ ಅವರ ಜನ್ಮಶತಾಬ್ದಿಯ ವಿಶೇಷ ಸಂದರ್ಭ. ಶ್ರೀ ಗುರೂಜಿ ಎಂಬುದು ಅವರ ಮೂಲ ಹೆಸರಲ್ಲ. ಅವರು ಕಾಶಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದಾಗ ವಿದ್ಯಾರ್ಥಿಗಳು ಅವರನ್ನು ಆದರದಿಂದ `ಶ್ರೀ ಗುರೂಜಿ' ಎಂದು ಕರೆಯುತ್ತಿದ್ದರು. ಆಗಿನಿಂದ ಅದೇ ಹೆಸರು ಸಂಘದಲ್ಲಿ ಮತ್ತು ಇಡೀ ದೇಶದಲ್ಲಿ ಬಳಕೆಯಲ್ಲಿದೆ. ಅವರ ಹೆಸರು `ಮಾಧವ ಸದಾಶಿವರಾವ್ ಗೋಳವಲಕರ್'. ಸದಾಶಿವರಾವ್ ಎಂಬುದು ಅವರ ತಂದೆಯ ಹೆಸರು ಮತ್ತು ಲಕ್ಷ್ಮೀಬಾಯಿ ಎಂಬುದು ತಾಯಿಯ ಹೆಸರು. ಅವರು ನಾಗಪುರದಲ್ಲಿ ವಾಸವಾಗಿದ್ದರು. ಬಾಲ್ಯದಲ್ಲಿ ಗುರೂಜಿಯವರನ್ನು `ಮಧು' ಎಂದು ಕರೆಯುತ್ತಿದ್ದರು. ಅವರ ತಂದೆ-ತಾಯಿಗಳ ಎಂಟು ಮಕ್ಕಳು ಅಕಾಲ ಮೃತ್ಯುವಿಗೆ ಈಡಾಗಿದ್ದರು. ಆ ದಿನಗಳಲ್ಲಿ ನಾಗಪುರ ಈಗಿನ ಮಧ್ಯಪ್ರದೇಶದಲ್ಲಿ ಇತ್ತು. ತಂದೆ ಅಧ್ಯಾಪಕರಾಗಿದ್ದರು. ತಂದೆಯವರ ವರ್ಗಾವಣೆ ಹಿಂದಿ ಭಾಷಾ ಪ್ರದೇಶಗಳಲ್ಲೇ ಆಗುತ್ತಿತ್ತು. ಮನೆಮಾತು ಮರಾಠಿ ಆಗಿದ್ದರೂ ಹೊರಗಡೆ ಹಿಂದಿಯಲ್ಲಿಯೇ ಮಾತನಾಡುತ್ತಿದ್ದರಿಂದ ಮಧುವಿಗೆ ಹಿಂದಿ ಭಾಷೆಯ ಮೇಲೆ ಒಳ್ಳೆಯ ಹಿಡಿತವಿತ್ತು.ಹಾಗೆಯೇ ಕ್ರೈಸ್ತ ಮಿಶನರಿಗಳು ನಡೆಸುತ್ತಿದ್ದ ವಿದ್ಯಾಲಯದಲ್ಲಿ ಕಲಿತಿದ್ದರಿಂದ ಮಾಧವರಾಯರು (ವಿದ್ಯಾಲಯದಲ್ಲಿ ಅವರ ಹೆಸರು) ಆಂಗ್ಲಭಾಷೆಯಲ್ಲಿಯೂ ಪ್ರಾವೀಣ್ಯ ಹೊಂದಿದ್ದರು.

ಮಾಧವರಾಯರ ಮನೆಯಲ್ಲಿ ಒಳ್ಳೆಯ ಸಾತ್ವಿಕ ಮತ್ತು ಧಾರ್ಮಿಕ ವಾತಾವರಣವಿತ್ತು.ಬಾಲ್ಯದಲ್ಲಿ ತಾಯಿ ಅವರನ್ನು ಎಬ್ಬಿಸುವಾಗ ಮಧುರ ಕಂಠದಿಂದ ಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಅವರ ಮನಸ್ಸಿನ ಮೇಲೆ ಅದರ ಪ್ರಭಾವ ಅಳಿಸಲಾಗದಂತಹದು. ತಾಯಿ ಹೇಳಿದ ಹಾಡುಗಳನ್ನು ದೊಡ್ಡವರಾದ ಮೇಲೂ ಭಾವಪೂರ್ಣರಾಗಿ ನೆನಪಿಸಿಕೊಳ್ಳುತ್ತಿದ್ದರು.

## 1.2 ಜನ್ಮಜಾತ ಬುದ್ಧಿ ಪ್ರತಿಭೆ

ಬಾಲ್ಯದಿಂದಲೇ ಮಾಧವರಾಯರ ತೀಕ್ಷ್ಣ ಬುದ್ಧಿ ಮತ್ತು ಅಸಾಧಾರಣ ನೆನಪಿನ ಶಕ್ತಿಯ ಪರಿಚಯ ಆಗತೊಡಗಿತು. ಒಮ್ಮೆ ಅವರ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ.ಗಾರ್ಡಿನರ್ ಬೈಬಲ್ ಪಾಠಮಾಡುತ್ತಿದ್ದರು. ಪಾಠದ ಮಧ್ಯದಲ್ಲಿ ಮಾಧವರಾಯರು ಎದ್ದುನಿಂತು ಪ್ರಾಧ್ಯಾಪಕರಿಗೆ “ಈ ವಾಕ್ಯದ ಸಂದರ್ಭ ನೀವು ಹೇಳಿದ್ದು ಸರಿ ಇಲ್ಲ,

ಈ ರೀತಿ ಇರಬೇಕು" ಎಂದು ಇನ್ನೊಂದು ವಾಕ್ಯವನ್ನು ಹೇಳಿದರು. ತರಗತಿಯ ವಿದ್ಯಾರ್ಥಿಗಳೂ ಪ್ರಾಧ್ಯಾಪಕ ಗಾರ್ಡಿನರರೂ ದಂಗುಬಡೆದಂತಾದರು. ಆದರೆ ಬೈಬಲ್ ತರಿಸಿ ನೋಡಿದಾಗ ಆ ಸಂದರ್ಭ ಮಾಧವರಾಯರು ಹೇಳಿದಂತೆಯೇ ಇತ್ತು . ತರಗತಿ ಮುಗಿದ ನಂತರ ಪ್ರಾಧ್ಯಾಪಕರು ಪ್ರೀತಿಯಿಂದ ಅವರ ಬೆನ್ನು ತಟ್ಟಿದರು. ಈ ಘಟನೆಯಿಂದ ಮಾಧವರಾಯರ ನೆನಪಿನ ಶಕ್ತಿಯ ಜೊತೆಗೆ ನಿರ್ಭಯತೆ ಮತ್ತು ಆತ್ಮ ವಿಶ್ವಾಸಗಳು ಎಲ್ಲರ ಗಮನಕ್ಕೆ ಬಂತು. ದೊಡ್ಡವರಾದ ಮೇಲೂ ಶ್ರೀ ಗುರೂಜಿಯವರ ನೆನೆಪಿನಶಕ್ತಿ ಅಂತಿಮ ದಿನಗಳವರೆಗೂ ಹಾಗೆಯೇ ಉಳಿದಿತ್ತು. ಅವರ ಈ ಅಲೌಕಿಕ ಶಕ್ತಿಯ ಬಗ್ಗೆ ದೇಶಾದ್ಯಂತ ಜನ ಈಗಲೂ ಉದಾಹರಣೆಗಳನ್ನು ಕೊಡುತ್ತಾರೆ.

## 1.3 ಅಸಾಮಾನ್ಯ ಸಹನಶಕ್ತಿ

ನಾಗಪುರದಲ್ಲಿ ಇಂಟರ್ ವರೆಗಿನ ಶಿಕ್ಷಣ ಮುಗಿಸಿ ಮಾಧವರಾಯರು ೧೯೨೪ರಲ್ಲಿ ಬಿ.ಎಸ್ಸಿ. ಓದುವುದಕ್ಕಾಗಿ ದೇಶದಲ್ಲಿಯೇ ಪ್ರಖ್ಯಾತವಾದ ಕಾಶಿ ವಿಶ್ವವಿದ್ಯಾಲಯಕ್ಕೆ ಹೋದರು. ಅಲ್ಲಿನ ಗ್ರಂಥಾಲಯದಲ್ಲಿನ ವಿಪುಲವಾದ ಪುಸ್ತಕಭಂಡಾರ ಅವರ ಜ್ಞಾನದಾಹವನ್ನು ತಣಿಸಲಿಕ್ಕಾಗಿಯೇ ಕಾದುಕುಳಿತಂತಿತ್ತು.ಮಾಧವರಾಯರು ಅಲ್ಲಿಗೆ ಹೋಗಿ ಏಕಾಗ್ರಚಿತ್ತದಿಂದ ಒಂದಾದಮೇಲೆ ಒಂದರಂತೆ ಪುಸ್ತಕಗಳನ್ನು ಓದಿ ಮುಗಿಸುತ್ತಿದ್ದರು. ಒಂದು ದಿನ ಅವರ ಕಾಲ್ಬೆರಳಿಗೆ ಚೇಳು ಕುಟುಕಿತು. ಆದರೆ ಮಾಧವರಾವ್ ಅವರು ಆ ಭಾಗವನ್ನು ಸ್ವಲ್ಪ ಕೊಯಿದು ಪೊಟ್ಯಾಸಿಯಂ ಪರ್ಮಾಂಗನೇಟ್ ಹಾಕಿದ ನೀರಿನಲ್ಲಿ ಕಾಲನ್ನು ಇಟ್ಟು ಮೊದಲಿನಂತೆ ಓದುವುದರಲ್ಲಿ ಮಗ್ನರಾದರು. ಅವರ ಮಿತ್ರನೊಬ್ಬ ಆಶ್ಚರ್ಯದಿಂದ ಇಷ್ಟು ಭಯಾನಕ ನೋವಿನಲ್ಲೂ ಹೇಗೆ ಓದುತ್ತಿರುವೆ ಎಂದು ಕೇಳಿದ. ಅದಕ್ಕೆ ಮಾಧವರಾವ್ ಅವರ ಸಹಜವಾದ ಉತ್ತರ"ಚೇಳು ಕುಟುಕಿದ್ದು ಕಾಲಿಗೆ, ತಲೆಗಲ್ಲ". ಮುಂದೆಯೂ ತೀವ್ರತರವಾದ ನೋವುಗಳನ್ನು ಅವರು ಶಾಂತಚಿತ್ತರಾಗಿ ಸಹಿಸಿಕೊಳ್ಳುತ್ತಿದ್ದುದನ್ನು ಜನ ಅನೇಕ ಬಾರಿ ನೋಡಿದ್ದಾರೆ.

## 1.4 ಅನುಶಾಸನಪ್ರಿಯತೆ

ಕಾಶಿಯಿಂದ ಎಂ.ಎಸ್ಸಿ (ಪ್ರಾಣಿಶಾಸ್ತ್ರ) ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಮಾಧವರಾಯರು ನಾಗಪುರಕ್ಕೆ ಹಿಂದಿರುಗಿದರು.ಕೆಲವು ತಿಂಗಳುಗಳ ನಂತರ 'ಮತ್ಸ್ಯಾಲಯದಲ್ಲಿ' ಸಂಶೋಧನೆ ಮಾಡುವುದಕ್ಕಾಗಿ ಅವರು ಚೆನ್ನೈಗೆ ಹೋದರು. ಅಲ್ಲಿಯೂ ಅವರ ಕಠೋರವಾದ ಅನುಶಾಸನಪ್ರಿಯತೆ ಜನರಿಗೆ ಅನುಭವಕ್ಕೆ ಬಂತು.
ಒಮ್ಮೆ ಆ ಪ್ರಯೋಗಶಾಲೆಯ ಪ್ರದರ್ಶನ ನೋಡಲು ಹೈದರಾಬಾದಿನ ನಿಜಾಮರು ಬರುವವರಿದ್ದರು. ಎಲ್ಲರೂ ಪ್ರವೇಶಶುಲ್ಕ ಕೊಡಬೇಕಾಗಿತ್ತು. ನಿಜಾಮರಂಥ ದೊಡ್ಡವರಿಂದ ಪ್ರವೇಶಶುಲ್ಕ ತೆಗೆದುಕೊಳ್ಳಬಾರದು ಎಂದು ಅಲ್ಲಿನ ವ್ಯವಸ್ಥಾಪಕರು ಯೋಚಿಸುತ್ತಿದ್ದರು. ಆದರೆ ಮಾಧವರಾಯರ ಆಗ್ರಹದ ಕಾರಣದಿಂದಾಗಿಯೇ ನಿಜಾಮರೂ ಪ್ರವೇಶಶುಲ್ಕ ಕೊಟ್ಟೇ ಒಳಗೆ ಪ್ರವೇಶಿಸಬೇಕಾಯಿತು. ೧೯೨೯ ರಲ್ಲಿ ಅವರ ತಂದೆಯವರು ನಿವೃತ್ತರಾದ್ದರಿಂದಾಗಿ

ಮಾಧವರಾಯರ ಚೆನ್ನೈ ವಾಸ್ತವ್ಯಕ್ಕೆ ಬೇಕಾದಷ್ಟು ಹಣ ಕಳಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಮಾಧವರಾಯರು ಚೆನ್ನೈಯಲ್ಲಿನ ಶೋಧಕಾರ್ಯವನ್ನು ಅರ್ಧಕ್ಕೆ ನಿಲ್ಲಿಸಿ ನಾಗಪುರಕ್ಕೆ ಹಿಂದಿರುಗಬೇಕಾಯಿತು. ಆ ದಿನಗಳಲ್ಲಿ ಮಾಧವರಾಯರು ತಮ್ಮ ಮಿತ್ರರಿಗೆ ಬರೆಯುತ್ತಿದ್ದ ಪತ್ರಗಳಲ್ಲಿ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿರುವ ಕ್ರಾಂತಿಕಾರಿಗಳ ಉಗ್ರದೇಶಭಕ್ತಿಯ ಪ್ರಸಂಗಗಳ ಬಗ್ಗೆ ತಮ್ಮ ಮನದಲ್ಲಿ ಉಕ್ಕುತ್ತಿರುವ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದರು.

## 1.5 'ಗುರೂಜಿ' ಹೆಸರು ಏಕೆ ಬಂತು?

ಆಗಸ್ಟ್ ೧೯೩೧ ರಿಂದ ಮಾಧವರಾಯರು ಕಾಶೀ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕಾರ್ಯ ಪ್ರಾರಂಭಿಸಿದರು. ಈ ಸಮಯದಲ್ಲಿ ಮಾಧವರಾಯರ ಇನ್ನೂ ಅನೇಕ ಅಸಾಮಾನ್ಯ ಸದ್ಗುಣಗಳು ಪ್ರಕಟವಾಗತೊಡಗಿದವು. ತಮ್ಮ ವಿದ್ಯಾರ್ಥಿಗಳ ಬಗ್ಗೆ ಅಸೀಮ ಪ್ರೇಮದಿಂದಾಗಿ ಅವರ ಓದಿಗಾಗಿ ಎಲ್ಲ ತರಹದ ಸಹಾಯ ಮಾಡುತ್ತಿದ್ದರು. ಬಡ ವಿದ್ಯಾರ್ಥಿಗಳಿಗಾಗಿ ಪುಸ್ತಕ ಖರೀದಿಸಿ ಕೊಡುತ್ತಿದ್ದರು. ಪರೀಕ್ಷಾ ಶುಲ್ಕ ಕಟ್ಟಲು ಆರ್ಥಿಕ ಸಹಾಯ ಮಾಡುತ್ತಿದ್ದರು. ಅದಕ್ಕಾಗಿ ತಮ್ಮ ಸಂಬಳದ ದೊಡ್ಡ ಭಾಗವನ್ನು ಖರ್ಚು ಮಾಡುವುದರಲ್ಲಿಯೂ ಅವರಿಗೆ ಆನಂದವೇ ಆಗುತ್ತಿತ್ತು. ತಮ್ಮ ವಿಷಯದ ವಿದ್ಯಾರ್ಥಿಗಳಿಗಷ್ಟೆ ಅಲ್ಲದೆ ಅನ್ಯ ವಿಷಯಗಳ ವಿದ್ಯಾರ್ಥಿಗಳ ಓದಿಗೆ ಸಹಾಯ ಮಡುವುದಕ್ಕಾಗಿ ಸ್ವತಃ ಆ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡುತ್ತಿದ್ದರು.ಈ ರೀತಿಯ ಸಹಾಯ ಮಾಡುವಾಗ ಅವರ ಮನಸ್ಸಿನಲ್ಲಿ ಯಾವುದೇ ರೀತಿಯ ಆಸೆ ಇರುತ್ತಿರಲಿಲ್ಲ. ಈ ಕಾರಣಗಳಿಂದಾಗಿ ಅಲ್ಲಿಯವರೆಗೆ 'ಮಾಧವರಾವ್' ಎಂದು ಅವರನ್ನು ಕರೆಯುತ್ತಿದ್ದ ವಿದ್ಯಾರ್ಥಿಗಳು 'ಶ್ರೀ ಗುರೂಜಿ' ಎಂದು ಕರೆಯತೊಡಗಿದರು.

ಶ್ರೀ ಗುರೂಜಿಯವರ ಪ್ರತಿಭೆ ಮತ್ತು ವಿದ್ಯಾರ್ಥಿಗಳ ಮೇಲಿನ ಅವರ ಗಾಢವಾದ ಸ್ನೇಹ ಇವುಗಳನ್ನು ಗಮನಿಸಿದ ಪಂ| ಮದನ ಮೋಹನ ಮಾಲವೀಯರು ಅವರ ಮೇಲೆ ವಿಶೇಷ ಪ್ರೀತಿ ಹರಿಸತೊಡಗಿದರು. ಡಾಕ್ಟರ್ ಜೀಯವರಿಂದ ಅಲ್ಲಿಗೆ ಕಳಿಸಲ್ಪಟ್ಟ ವಿದ್ಯಾರ್ಥಿ ಸ್ವಯಂಸೇವಕ ನಾಗಪುರದ ಶ್ರೀ ಭಯ್ಯಾಜಿದಾಣಿ ಮೂಲಕ ಶ್ರೀ ಗುರೂಜಿ ಸಂಘದ ಸಂಪರ್ಕಕ್ಕೆ ಬಂದರು. ಸಂಘಚಾಲಕರೂ ಆದರು.
ಅಧ್ಯಾಪನಕಾರ್ಯದ ನಿರ್ಧಾರಿತ ಅವಧಿ ಮುಗಿದ ನಂತರ ಗುರೂಜಿ ೧೯೩೩ರ ಫೆಬ್ರವರಿ ತಿಂಗಳಿನಲ್ಲಿ ನಾಗಪುರಕ್ಕೆ ಹಿಂದಿರುಗಿದರು. ೧೯೩೫ರಲ್ಲಿ ಅವರು ಕಾನೂನು ಶಿಕ್ಷಣವನ್ನು ಮುಗಿಸಿದರು.

## 1.6 ವಂಶ ನಿರ್ವಂಶವಾದರೇನು?

ಈ ಮಧ್ಯೆ ಶ್ರೀ ಗುರೂಜಿಯವರನ್ನು ಹತ್ತಿರದಿಂದ ಗಮನಿಸುವುದರ ಜೊತೆಯಲ್ಲಿ ಅವರನ್ನು ತಮ್ಮ ಸಹವಾಸದಲ್ಲಿ ಇಟ್ಟುಕೊಳ್ಳುವ ಪ್ರಯತ್ನವನ್ನು ಡಾಕ್ಟರ್ ಜೀ ಮಾಡುತ್ತಿದ್ದರು. ಅವರಲ್ಲಿದ್ದ ಅಸಾಮಾನ್ಯ ಕಾರ್ಯಕ್ಷಮತೆ ಮತ್ತು ಬುದ್ಧಿಪ್ರತಿಭೆಯನ್ನು ಗುರುತಿಸಿ ಶ್ರೀಗುರೂಜಿಯವರಿಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಡತೊಡಗಿದ್ದರು. ೧೯೩೪ ರಲ್ಲಿ ಅಕೋಲಾದಲ್ಲಿ ನಡೆದ ಸಂಘಶಿಕ್ಷಾವರ್ಗದ ಶಿಬಿರ ಸರ್ವಾಧಿಕಾರಿಯ ಜವಾಬ್ದಾರಿಯನ್ನು ಶ್ರೀಗುರೂಜಿಯವರು ಅತ್ಯಂತ ಕುಶಲತೆ ಮತ್ತು ತತ್ಪರತೆಯಿಂದ ನಿಭಾಯಿಸಿದರು. ಆ ದಿನಗಳಲ್ಲಿ ತಂದೆ-ತಾಯಿಯರ ಮನಸ್ಸಿನಲ್ಲಿ 'ಮಧು'ವಿನ ಮದುವೆಯ ಬಗ್ಗೆ ಸಹಜವಾಗಿಯೇ ಯೋಚನೆ ಇತ್ತು. ಗುರೂಜಿಯವರ ತಾಯಿ ಅವರ ಮುಂದೆ

ಮದುವೆಯ ಪ್ರಸ್ತಾಪ ಮಾಡುವಾಗ ಅವರು ಮದುವೆಯಾಗದಿದ್ದರೆ ಗೋಳವಲಕರ್ ವಂಶವೇ ನಿರ್ವಂಶವಾಗುತ್ತದೆ ಎಂದರು. ಆಗ  ಶ್ರೀ ಗುರೂಜಿಯವರು ಕಠಿಣ ಶಬ್ದಗಳಲ್ಲಿಯೇ ಉತ್ತರ ಕೊಟ್ಟರು- "ಇಂದಿನ ಪರಿಸ್ಥಿತಿಯಲ್ಲಿ ನನ್ನಂತಹ ಅನೇಕರ ವಂಶವು ನಿರ್ವಂಶವಾಗಿ ಸಮಾಜದ ಏಳಿಗೆಯಾಗುವುದಿದ್ದರೆ ಅದು ಒಳ್ಳೆಯದೇ. ಅದಕ್ಕಾಗಿ ವಂಶ ನಷ್ಟವಾಗುವ ಬಗ್ಗೆ ನನಗೆ ಸ್ವಲ್ಪವೂ ಚಿಂತೆ ಇಲ್ಲ." ಅದರ ನಂತರ ಅವರ ಮದುವೆಯ ಪ್ರಸ್ತಾಪಕ್ಕೆ ಪೂರ್ಣವಿರಾಮ ಬಿದ್ದಿತು.

## 1.7 ಜೀವನ ದಿಕ್ಕಿನ ಹುಡುಕಾಟದಲ್ಲಿ

ಶ್ರೀ  ಗುರೂಜಿ ತಮ್ಮ ಜೀವನದ ದಿಕ್ಕನ್ನು ನಿಶ್ಚಯಿಸುವುದರಲ್ಲಿ ತೊಡಗಿದ್ದರು. ಆ ದಿನಗಳಲ್ಲಿ ಅವರ ಮನದಲ್ಲಿ ಎರಡು ರೀತಿಯ ಸೆಳೆತಗಳಿದ್ದವು. ಒಂದೆಡೆ ಹಿಂದು ಸಮಾಜದ ಘೋರ ದುರ್ದೆಶೆ ಮತ್ತು ದೇಶದ ದಾಸ್ಯದ ಬಗ್ಗೆ ಮನದಲ್ಲಿ ನೋವು. ಇನ್ನೊಂದೆಡೆ ಹುಟ್ಟಿನಿಂದಲೇ ಬಂದ ಆಧ್ಯಾತ್ಮಿಕ ಹಸಿವಿನ ತೀವ್ರತೆ.ಆ ದಿನಗಳಲ್ಲಿಯೇ ಶ್ರೀ ಗುರೂಜಿ ನಾಗಪುರದಲ್ಲಿನ ರಾಮಕೃಷ್ಣಾಶ್ರಮದ ಪ್ರಮುಖರಾದ ಸ್ವಾಮಿ ಭಾಸ್ಕರೇಶ್ವರಾನಂದರ ಬಳಿ ಹೋಗತೊಡಗಿದರು. ಅಲ್ಲಿ ಅವರಿಗೆ ಶ್ರೀಅಮಿತಾಭ ಮಹಾರಾಜ ಜೊತೆ ಗಾಢವಾದ ಮಿತ್ರತ್ವ ಬೆಳೆಯಿತು.ಅವರಿಂದ ಬಂಗಾಲದ ಸಾರಗಾಛಿಯಲ್ಲಿ ಪೂಜ್ಯ ರಾಮಕೃಷ್ಣ ಪರಮಹಂಸರ ನೇರ ಶಿಷ್ಯ ಸ್ವಾಮಿ ಅಖಂಡಾನಂದರ ಆಶ್ರಮ ಇರುವುದು ತಿಳಿಯಿತು.ಆಧ್ಯಾತ್ಮಿಕ ಗುರುವಿನ ಹುಡುಕಾಟದಲ್ಲಿದ್ದ ಶ್ರೀ ಗುರೂಜಿಯವರು ಅಮಿತಾಭ ಮಹಾರಜರ ಸೂಚನೆಯಂತೆ ೧೯೩೬ ರಲ್ಲಿ ಯಾರಿಗೂ ಹೇಳದೇ ಇದಕ್ಕಿದ್ದಂತೆ ಸಾರಗಾಛಿಗೆ ಹೊರಟು ಹೋದರು. ಅವರ ತಂದೆ-ತಾಯಿಯರೂ ಸೇರಿದಂತೆ ಯಾರಿಗೂ ಶ್ರಿ ಗುರೂಜಿ ಎಲ್ಲಿಗೆ ಹೋದರೆಂಬುದು ತಿಳಿಯಲಿಲ್ಲ. ಡಾಕ್ಟರ್ ಜೀ ಮುಂದಿನ ದಿನಗಳಲ್ಲಿ ಶ್ರೀ
ಗುರೂಜಿಯವರಿಗೆ ಇನ್ನೂ ಹೆಚ್ಚಿನ ಜವಾಬ್ದಾರಿ ಕೊಡುವ ಬಗ್ಗೆ ಯೋಚಿಸುತ್ತಿರುವಾಗಲೇ ಶ್ರೀ ಗುರೂಜಿ ಸಾರಗಾಛಿಗೆ ಹೊರಟುಹೋದರು. ಗುರೂಜಿಯವರ ತಂದೆತಾಯಿಯವರಷ್ಟೇ ಡಾಕ್ಟರ್ ಜೀಯವರೂ ಚಿಂತಿತರಾದರು.

## 1.8 ಅಪ್ರತಿಮ ಸೇವಾಮೂರ್ತಿ

ಸಾರಗಾಛಿಯಲ್ಲಿ ಶ್ರೀ ಗುರೂಜಿಯವರ ವ್ಯಕ್ತಿತ್ವದ ಇನ್ನೊಂದು ಉಜ್ವಲ ಮುಖ ಬೆಳಕಿಗೆ ಬಂತು. ಅಲ್ಲಿ ಅವರು ವೃದ್ಧರೂ, ಅನಾರೋಗ್ಯ ಪೀಡಿತರೂ ಆದ ಸ್ವಾಮಿ ಅಖಂಡಾನಂದರ ಸರ್ವವಿಧ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.ಅವರ ಬಟ್ಟೆ ಒಗೆಯುವುದು, ಅವರಿಗೆ ಸ್ನಾನ ಮಾಡಿಸುವುದು, ಊಟದ, ಮಲಗುವ ವ್ಯವಸ್ಥೆಗಳನ್ನು ಮಾಡುವುದು ಶ್ರೀ ಗುರೂಜಿಯವರ ನಿತ್ಯದ ಕೆಲಸವೇ ಆಗಿತ್ತು. ಸ್ವಾಮೀಜಿಯವರ ತಲೆಯ ಬಳಿ ಕುಳಿತು ಅವರ ಸೇವೆ ಮಾಡುತ್ತಿದ್ದರು. ಈ ಪ್ರಕಾರ ಐದಾರು ತಿಂಗಳು ಕಳೆಯಿತು.ಪೂಜ್ಯ ಸ್ವಾಮೀಜಿಯವರು ಶ್ರೀ ಗುರೂಜಿಯವರ ಬಿಡುವಿಲ್ಲದ ಮತ್ತು ಶ್ರದ್ಧಾಪೂರ್ಣ ಸೇವೆಯಿಂದ ಪ್ರಸನ್ನರಾಗಿ ಒಂದು ದಿನ ಅವರಿಗೆ ದೀಕ್ಷೆ ಕೊಡಲು ನಿಶ್ಚಯ ಮಾಡಿದರು. ೧೩ ಜನವರಿ ೧೯೩೭ರ ಮಕರ ಸಂಕ್ರಮಣದ ಶುಭದಿನ ಶ್ರೀ ಗುರೂಜಿ ದೀಕ್ಷೆ ಪಡೆದರು. ದೀಕ್ಷೆ ಪಡೆದು ಶ್ರೀಗುರೂಜಿ ಭಾವುಕರಾದರು."ಅಸಂಖ್ಯ ಜನ್ಮಗಳ ನಂತರ ದೊರೆಯುವ ಸೌಭಾಗ್ಯ ಇಂದು ನನಗೆ ದೊರೆತಿದೆ. ನನ್ನ ಇಡೀ ಶರೀರ ರೋಮಾಂಚನಗೊಂಡಿದೆ. ನಾನು ಸಂಪೂರ್ಣ ಬದಲಾದ ವ್ಯಕ್ತಿ ಎಂದು ಅನಿಸಿದೆ"

ಎಂದು ಶ್ರೀ ಗುರೂಜಿ ಅದನ್ನು ವರ್ಣಿಸಿದ್ದಾರೆ. ನಂತರ ಜನವರಿ ೨೪ರಂದು ಗುರು ಮಹಾರಾಜರು ಶ್ರೀ ಗುರೂಜಿಯವರಿಗೆ ಆಶೀರ್ವಾದ ಮಾಡುತ್ತಾ" ನನ್ನಲಿರುವ ಒಳ್ಳೆಯದನ್ನೆಲ್ಲ ನಿನಗೆ ಕೊಟ್ಟಿದ್ದೇನೆ, ನಿನ್ನಲಿರುವ ಕೆಟ್ಟದ್ದನ್ನೆಲ್ಲ ನನಗೆ ಕೊಡು" ಎಂದರು. ಆ ದಿನ ಸ್ವಾಮೀಜಿಯವರು ಶ್ರೀ ಗುರೂಜಿ ಮತ್ತು ಅಮಿತಾಭ ಮಹಾರಾಜರಿಬ್ಬರನ್ನು ಹತ್ತಿರ ಕೂರಿಸಿಕೊಂಡು ರಾತ್ರಿ ಮೂರುವರೆ ಗಂಟೆಯವರೆಗೆ ಆಧ್ಯಾತ್ಮದ ಎಲ್ಲ ರಹಸ್ಯಗಳನ್ನು ತಿಳಿಸಿದರು. ಒಂದು ದಿನ ಸ್ವಾಮೀಜಿ ಅಮಿತಾಭ ಮಹಾರಾಜರಿಗೆ "ಗೋಲವಲಕರರು ಡಾ|| ಹೆಡಗೇವಾರರ ಜೊತೆಯಲ್ಲಿದ್ದು ಕೆಲಸ ಮಾಡುವಂತೆ ಕಾಣುತ್ತದೆ" ಎಂದರು. ತಮ್ಮ ನೆನೆಪಿಗಾಗಿ ಸ್ವಾಮೀಜಿ ತಮ್ಮ ಕಮಂಡಲ ಇತ್ಯಾದಿ ವಸ್ತುಗಳನ್ನು ಶ್ರೀ ಗುರೂಜಿಯವರಿಗೆ ಕೊಟ್ಟರು. ಕೆಲವೇ ದಿನಗಳ ನಂತರ ಫೆಬ್ರವರಿ ೧೯೩೭ ರಲ್ಲಿ ಪೂಜ್ಯ ಸ್ವಾಮೀಜಿಯವರ ಶರೀರ ಪಂಚಭೂತಗಳಲ್ಲಿ ಸೇರಿಹೋಯ್ತು. ನಂತರ ಶ್ರೀ ಗುರೂಜಿ ರಾಮಕೃಷ್ಣಾಶ್ರಮದ ಬೇಲೂರು ಮಠದಲ್ಲಿ ಸ್ವಲ್ಪ ದಿನಗಳಿದ್ದು ಅಮಿತಾಬ್ ಮಹಾರಾಜರ ಜೊತೆ ನಾಗಪುರಕ್ಕೆ ಹಿಂದಿರುಗಿದರು. ನಾಗಪುರದಲ್ಲಿ ಶ್ರೀ ಗುರೂಜಿಯವರ ಜೀವನಕ್ಕೆ ಒಂದು ಹೊಸ ತಿರುವು ಸಿಕ್ಕಿತು. ಡಾಕ್ಟರ್ ಜೀಯವರ ಸಾನಿಧ್ಯದಲ್ಲಿ ಅವರು ಒಂದು ಅತ್ಯಂತ ಪ್ರೇರಣಾದಾಯೀ ರಾಷ್ಟ್ರಸಮರ್ಪಿತ ವ್ಯಕ್ತಿತ್ವವನ್ನೇ ಕಂಡರು. ಒಬ್ಬ ಆತ್ಮೀಯರಿಗೆ ಈ ವಿಷಯವಾಗಿ ಶ್ರೀ ಗುರೂಜಿಯವರು  ಹೀಗೆ ಹೇಳಿದ್ದರು:

" ನನ್ನ ಒಲವು ಆಧ್ಯಾತ್ಮದ ಜೊತೆಗೆ ರಾಷ್ಟ್ರಸಂಘಟನೆಯ ಬಗ್ಗೆ ಮೊದಲಿನಿಂದಲೂ ಇದೆ. ಈ ಕಾರ್ಯವನ್ನು ಸಂಘದಲ್ಲಿದ್ದುಕೊಂಡು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಬಲ್ಲೆ ಎಂಬುದು ನನ್ನ ವಿಶ್ವಾಸ. ಆದ್ದರಿಂದ ನಾನು ಸಂಘಕಾರ್ಯದಲ್ಲಿಯೇ ನನ್ನನ್ನು ತೊಡಗಿಸಿಕೊಂಡೆ. ಸ್ವಾಮಿ ವಿವೇಕಾನಂದರ ವಿಚಾರಗಳು ಮತ್ತು ಕಾರ್ಯಪದ್ಧತಿಗೆ ನನ್ನ ಈ ನಡವಳಿಕೆ ಹೊಂದಿಕೆ ಆಗುತ್ತದೆ ಎಂದು ನನಗೆ ಅನಿಸುತ್ತದೆ."

ಈ ಕಾರ್ಯದಲ್ಲಿ ತಮ್ಮ ಶರೀರವನ್ನು ಗಂಧದ ಕೊರಡಿನಂತೆ ತೇಯುತ್ತಿರುವ ಡಾಕ್ಟರ್ ಜೀಯವರ ಜೀವನವನ್ನು ಸಹ ಗುರೂಜಿ ನೋಡುತ್ತಿದ್ದರು. ಶ್ರೀಗುರೂಜಿಯವರು ೧೯೩೮ರನಂತರ ಸಂಘಕಾರ್ಯವನ್ನೇ ತಮ್ಮ ಜೀವನಕಾರ್ಯವಾಗಿ ಸ್ವೀಕರಿಸಿದರು.ಡಾಕ್ಟರ್ ಜೀಯವರ ಜೊತೆಯಲ್ಲಿಯೇ ಯಾವಗಲೂ ಇದ್ದು ಸಂಘಕಾರ್ಯದ ಬೆಳವಣಿಗೆಗೇ ತಮ್ಮ ಪೂರ್ತಿ ಗಮನವನ್ನು ಕೊಟ್ಟರು. ಇದರಿಂದ ಡಾಕ್ಟರ್ ಜೀಯವರ ಚಿಂತೆಯೂ ದೂರವಾಯಿತು.

ಈ ಸಂದರ್ಭದಲ್ಲಿ ಡಾಕ್ಟರ್ ಜೀಯವರ ವ್ಯಕ್ತಿತ್ವವನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳುವುದು ಸಮಯೋಚಿತವಾಗುತ್ತದೆ. ಅವರ ಪೂರ್ಣ ಹೆಸರು ಡಾಕ್ಟರ್ ಕೇಶವ ಬಲಿರಾಮ ಹೆಡಗೇವಾರ್. ಬಾಲ್ಯದ ವಿದ್ಯಾರ್ಥಿ ಜೀವನದಿಂದಲೇ ಅವರಲ್ಲಿ ದೇಶಪ್ರೇಮದ, ಸ್ವಾತಂತ್ರ್ಯಾಕಾಂಕ್ಷೆಯ ಕಿಡಿಗಳು ಹಾರತೊಡಗಿದ್ದವು. ಆ ದಿನಗಳಲ್ಲಿ ದೇಶಾದ್ಯಂತ ಮೊಳಗುತ್ತಿದ್ದ 'ವಂದೇ ಮಾತರಂ' ಘೋಷಣೆಯ ಜೊತೆಗೆ ಆ ಆಂದೋಲನದಲ್ಲಿಯೂ ಬಾಲಕ ಕೇಶವ ಭಾಗವಹಿಸಿದ್ದ.ಆಮೇಲೆ ಅವರು ಡಾಕ್ಟರ್ ಪದವಿ ಗಳಿಸಲು ಕೋಲ್ಕತ್ತಾಕ್ಕೆ ಹೋದರು. ಆ ದಿನಗಳಲ್ಲಿ ಕೋಲ್ಕತ್ತಾ ಕ್ರಾಂತಿಕಾರಿಗಳ ಚಟುವಟಿಕೆ ಕೇಂದ್ರವಾಗಿತ್ತು.ಕೋಲ್ಕತ್ತಾದಲ್ಲಿದ್ದ ನಾಲ್ಕು ವರ್ಷಗಳಲ್ಲಿ ಡಾಕ್ಟರ್ ಜೀ ಅವರು ವೈದ್ಯಕೀಯ ವ್ಯಾಸಂಗದ ಜೊತೆಜೊತೆಗೆ ಕ್ರಾಂತಿಕಾರಿಗಳ ಪದ್ಧತಿಗಳು ಮತ್ತು ಸ್ವಾತಂತ್ರ್ಯ ಗಳಿಸುವುದರಲ್ಲಿ ಕ್ರಾಂತಿಕಾರಿಗಳ ಕೊಡುಗೆ ಮುಂತಾದ ವಿಷಯಗಳನ್ನು ಆಳವಾಗಿ ಅಭ್ಯಾಸ ಮಾಡಿದರು. ಇಷ್ಟೇ ಅಲ್ಲದೆ ಆ ಕಾರ್ಯದಲ್ಲಿ ಸಕ್ರಿಯವಾಗಿಯೂ  ಭಾಗವಹಿಸಿದರು.ಕ್ರಾಂತಿ ಶಿರೋಮಣಿ ಶ್ರೀ ತ್ರೈಲೋಕನಾಥ ಚಕ್ರವರ್ತಿಯವರು ಒಮ್ಮೆ ಡಾಕ್ಟರ್ ಜೀಯವರ ಬಗ್ಗೆ ಮಾತನಾಡುತ್ತಾ - "ಕೋಲ್ಕತಾದಲ್ಲಿ ವಾಸಿಸುತ್ತಿದ್ದ ಆ ದಿನಗಳಲ್ಲಿ ಕೇಶವರಾವ್ ದೇಶದ ಸಲುವಾಗಿ ಸಾಯಲು ಸಿದ್ಧರಾಗುವ ಕೇವಲ ಹಿಡಿಯಷ್ಟು ಯುವಕರಿಂದ ವಿದೇಶೀ ದಾಸ್ಯದ ಗಟ್ಟಿಯಾದ ಸರಪಳಿಯನ್ನು ತುಂಡರಿಸುವುದು ಸಾಧ್ಯವಾಗದು. ಅದಕ್ಕಾಗಿ ಇಡೀ ಸಮಾಜದ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಸ್ವಾತಂತ್ರ್ಯದ ಜ್ಯೋತಿಯನ್ನು ಬೆಳಗಿಸಬೇಕು ಎಂದು ಹೇಳುತ್ತಿದ್ದರು" ಎಂದಿದ್ದಾರೆ.

## 2.1 ಸಂಘ ಸ್ಥಾಪನೆ

ಕೋಲ್ಕತಾದಿಂದ ವೈದ್ಯಕೀಯ ಪದವಿ ಪಡೆದು ನಾಗಪುರಕ್ಕೆ ಹಿಂದಿರುಗಿದ ಡಾಕ್ಟರ್ ಜಿಯವರು ಗಾಂಧೀಜಿಯವರ ನೇತೃತ್ವದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿದ್ದ ಆಂದೋಲನದಲ್ಲಿ ಸೇರಿಕೊಂಡರು.ಅದಕ್ಕಾಗಿ ಕಾರಾಗೃಹಕ್ಕೂ ಹೋಗಿಬಂದಿದ್ದರು. ಈ ಎಲ್ಲ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾಗಲೂ ದೇಶವನ್ನು ಸದಾಕಾಲಕ್ಕೂ ಒಳಹೊರಗಿನ ಎಲ್ಲ ಸಂಕಟಗಳಿಂದಲೂ ಪಾರುಮಾಡುವ
ದಾರಿಯ ಬಗ್ಗೆ ಅವರ ಚಿಂತನೆ ಸಾಗಿತ್ತು. ನಿಧಾನವಾಗಿ ಇದಕ್ಕಾಗಿ ಈ ದೇಶದ ಮೂಲರಾಷ್ಟ್ರೀಯ ಹಿಂದು ಸಮಾಜವನ್ನೇ ಸಂಘಟಿಸಬೇಕೆಂಬ ನಿರ್ಣಯಕ್ಕೆ ಅವರು ಬಂದರು. ಇದಕ್ಕಾಗಿ ೧೯೨೫ರ ವಿಜಯದಶಮಿಯ ಶುಭದಿನದಂದು "ರಾಷ್ಟ್ರೀಯ ಸ್ವಯಂಸೇವಕ ಸಂಘ" ವನ್ನು  ಪ್ರಾರಂಭಿಸಿದರು. ತಮ್ಮ ಉಳಿದೆಲ್ಲ ಕಾರ್ಯಗಳಿಂದಲೂ ಮುಕ್ತರಾಗಿ ಏಕಾಗ್ರಚಿತ್ತರಾಗಿ ಸಂಘಕಾರ್ಯದಲ್ಲಿ ತೊಡಗಿದರು.
ಸಂಘಸ್ಥಾಪನೆಯ ನಂತರದ ಎಂಟು-ಹತ್ತು ವರ್ಷಗಳಲ್ಲಿ ಡಾಕ್ಟರ್ ಜೀಯವರ ಅತಿಮಾನವ ಪರಿಶ್ರಮದಿಂದಾಗಿ ಸಂಘಕಾರ್ಯ ದೇಶಾದ್ಯಂತ ವೇಗವಾಗಿ ಬೆಳೆಯತೊಡಗಿತು. ಆದರೆ ಅವರ ಆರೋಗ್ಯ ಕುಸಿಯತೊಡಗಿತು. ಇದರಿಂದ ತಮ್ಮ ಸ್ಥಾನದಲ್ಲಿ ಸಂಘದ ಹೊಣೆಯನ್ನು  ಯಾರ ಹೆಗಲಿಗೆ ಹೊರಿಸಿದರೆ ಸರಿಯಾಗಬಹುದು ಎಂಬ ಯೋಚನೆ ಡಾಕ್ಟರ್ ಜೀಯವರ ಮನದಲ್ಲಿ ಪ್ರಾರಂಭವಾಯಿತು. ಸ್ವಾಭಾವಿಕವಾಗಿ ಶ್ರೀ ಗುರೂಜಿಯವರ ಮೇಲೆ ಅವರ ದೃಷ್ಟಿ ಕೇಂದ್ರೀಕೃತವಾಯಿತು.

## 2.2 ಶ್ರೀ ಗುರೂಜಿಯವರ ಪರೀಕ್ಷೆ – ನಿಯುಕ್ತಿ

ನಾಗಪುರದ ಸಮೀಪದ ಸಿಂಧಿ ಗ್ರಾಮದಲ್ಲಿ ೧೯೩೯ರಲ್ಲಿ ಡಾಕ್ಟರ್ ಜೀಯವರ ಜೊತೆ ಸಂಘದ ಪ್ರಮುಖ ಸಹಕಾರಿಗಳ ಬೈಠಕ್ ನಡೆಯಿತು. ಒಂದೇ ಸಮನೆ ಎಂಟು ದಿನಗಳವರೆಗೆ ನಡೆದ ಈ ಬೈಠಕ್ ನಲ್ಲಿ ಸಂಘದ ಕಾರ್ಯಪದ್ಧತಿ,ರೂಪುರೇಖೆಗಳೂ, ಕಾರ್ಯದ ಪ್ರಗತಿ, ಪ್ರಾರ್ಥನೆ, ಆಜ್ಞೆಗಳು ಮುಂತಾದ ವಿಷಯಗಳ ಬಗೆಗೆ ಮುಕ್ತ ಚರ್ಚೆ, ವಿಚಾರ ವಿಮರ್ಶೆ ನಡೆಯಿತು. ಒಂದೊಂದು ವಿಷಯದ ಚರ್ಚೆಯ ಕೊನೆಯಲ್ಲಿ ಡಾಕ್ಟರ್ ಜೀಯವರು ಕೊಟ್ಟ ನಿರ್ಣಯಗಳನ್ನು ಎಲ್ಲರೂ ಒಪ್ಪಿಕೊಳ್ಳುವುದು ಸ್ವಾಭಾವಿಕವಾಗಿತ್ತು. ಶ್ರೀ ಗುರೂಜಿಯವರೂ ಪ್ರತಿಯೊಂದೂ ವಿಷಯದ ಬಗ್ಗೆ ತಮ್ಮ ಬುದ್ಧಿ ಮತ್ತು ತರ್ಕಗಳ ಮೂಲಕ ತಮ್ಮ ಅಭಿಮತವನ್ನು ಬಲವಾಗಿಯೇ ಹೇಳುತ್ತಿದ್ದರು. ಆದರೆ ಕೊನೆಯಲ್ಲಿ ಡಾಕ್ಟರ್ ಜೀಯೇನಾದರೂ ತಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ನಿರ್ಣಯ ಕೊಟ್ಟರೆ ಅದನ್ನು ಮನಃಪೂರ್ವಕವಾಗಿಯೇ ಸ್ವೀಕರಿಸುತ್ತಿದ್ದರು. ಇದರಿಂದಾಗಿ ಶ್ರೀ ಗುರೂಜಿಯವರಲ್ಲಿನ ಮನಸ್ಸಿನ ಸಂಯಮ ಮತ್ತು ಡಾಕ್ಟರ್ ಜೀ ಬಗೆಗಿನ ಸಂಪೂರ್ಣ ಸಮರ್ಪಣೆಯ ಭಾವನೆ ಎಲ್ಲರ ಗಮನಕ್ಕೂ ಬರತೊಡಗಿತು. ಡಾಕ್ಟರ್ ಜೀಯವರ ಉತ್ತರಾಧಿಕಾರಿಯಾಗಲು ಶ್ರೀ ಗುರೂಜಿಯವರೇ ಸಮರ್ಥರು ಎಂದು ಎಲ್ಲರಿಗೂ ಅನಿಸತೊಡಗಿತು. ೧೯೩೯ರಲ್ಲಿ ಶ್ರೀ ಗುರೂಜಿಯವರನ್ನು ಸಂಘದ ಸರಕಾರ್ಯವಾಹರಾಗಿ  ನಿಯುಕ್ತಿ ಮಾಡಲಾಯಿತು.

ಆ ದಿನಗಳಲ್ಲಿ ಡಾಕ್ಟರ್ ಜೀ ನಾಸಿಕದ ಬಳಿ ದೇವಲಾಲಿಯಲ್ಲಿ ಜ್ವರ ಪೀಡಿತರಾಗಿ ಮಲಗಿದ್ದರು. ಜ್ವರ ಹೆಚ್ಚುತ್ತಲೇ ಹೋಯಿತು. ಚಿಕಿತ್ಸೆ ಮಾಡುತ್ತಿದ್ದ ವೈದ್ಯರು ಹತಾಶರಾದರು. ಈ ವಿಷಮ ಸಂದರ್ಭದಲ್ಲಿ ಶ್ರೀ ಗುರೂಜಿಯವರು ಡಾಕ್ಟರ್ ಜೀಯವರ ಸೇವೆಯಲ್ಲಿ ತೊಡಗಿದ್ದರು. ರಾತ್ರಿ ಇಡೀ ಎಚ್ಚರವಾಗಿದ್ದು ಡಾಕ್ಟರ್ ಜೀಯವರ ಎಲ್ಲ ರೀತಿಯ ಸಣ್ಣಪುಟ್ಟ ಅವಶ್ಯಕತೆಗಳನ್ನೂ ನೋಡಿಕೊಳ್ಳುತ್ತಿದ್ದರು. ಸುದೈವದಿಂದ ಕೆಲವೇ ದಿನಗಳಲ್ಲಿ ಡಾಕ್ಟರ್ ಜೀಯವರ ಆರೋಗ್ಯ ಸುಧಾರಿಸತೊಡಗಿತು. ಡಾಕ್ಟರ್ ಜೀ ನಾಗಪುರಕ್ಕೆ ಹಿಂದಿರುಗಿದರು. ಆದರೆ ಕೆಲವೇ ತಿಂಗಳುಗಳಲ್ಲಿ ಪುನಃ ತೀವ್ರವಾದ ಜ್ವರ ಬರತೊಡಗಿತು.

೧೯೪೦ ರಲ್ಲಿ ನಾಗಪುರದಲ್ಲಿ ತೃತೀಯ ವರ್ಷದ ಸಂಘ ಶಿಕ್ಷಾ ವರ್ಗದ ಶಿಕ್ಷಾರ್ಥಿಗಳ ಮುಂದೆ ಕೆಲವೇ ನಿಮಿಷಗಳಷ್ಟು ಮಾತ್ರ ಕಷ್ಟದಿಂದ ಮಾತನಾಡಿದರು. " ಇಂದು ನಾನು ಹಿಂದುರಾಷ್ಟ್ರದ ಪುಟ್ಟ ರೂಪವನ್ನು ನೋಡುತ್ತಿದ್ದೇನೆ. ತಾವೆಲ್ಲರೂ ಸಂಘಕಾರ್ಯವನ್ನೇ ಜೀವನಕಾರ್ಯವಾಗಿ ಸ್ವೀಕರಿಸಬೇಕೆಂಬುದು ನನ್ನ ಅಪೇಕ್ಷೆ. ನಾನು ಸ್ವಯಂಸೇವಕನಾಗಿದ್ದೆ ಎಂದು ಹೇಳಿಕೊಳ್ಳುವ ಕೆಟ್ಟ ಘಳಿಗೆ ನಮ್ಮ ಜೀವನದಲ್ಲಿ ಎಂದಿಗೂ ಬಾರದಿರಲಿ" ಎಂಬ ಅವರ ಆ ಮಾತು ಸ್ವಯಂಸೇವಕರಿಗೆ ಯಾವಾಗಲೂ ಪ್ರೇರಣಾದಾಯಿ. ಡಾಕ್ಟರ್ ಜೀಯವರ ಜ್ವರ ಒಂದೇ ಸಮನೆ ಏರುತ್ತಲೇ ಹೋಯಿತು. ಡಾಕ್ಟರ್ ಗಳು ಹತಾಶರಾಗಿ ಅವರಿಗೆ ಲಂಬರ್-ಪಂಕ್ಚರ್ ಮಾಡಬೇಕೆಂದು ನಿಶ್ಚಯಿಸಿದರು. ಇದನ್ನು ಕೇಳಿದ ಕೂಡಲೇ ಡಾಕ್ಟರ್ ಜೀ ತಮ್ಮ ಅಂತ್ಯಕಾಲ ಸಮೀಪಿಸಿತೆಂದು ತಿಳಿದರು.ಅಲ್ಲಿದ್ದ ಎಲ್ಲ ಕಾರ್ಯಕರ್ತರ ಎದುರಿನಲ್ಲಿ ಶ್ರೀ ಗುರೂಜಿಯವರನ್ನು ಹತ್ತಿರ ಕರೆದು ಹೇಳಿದರು: "ನನ್ನ ನಂತರ ಇನ್ನು ನೀವೇ ಸಂಘಕಾರ್ಯವನ್ನು ಮುನ್ನಡೆಸಿ". ಲಂಬರ್ ಪಂಕ್ಚರ್ ನಂತರ ಡಾಕ್ಟರ್ ಜೀಯವರು ತಮ್ಮ ಜರ್ಜರ ದೇಹವನ್ನು ಬಿಟ್ಟು ೧೯೪೦ ರ ಜೂನ್ ೨೧ ರಂದು ಅನಂತದಲ್ಲಿ ವಿಲೀನರಾದರು.

# 3 ಸಂಘದ ಪ್ರಮುಖರಾಗಿ

ಸಂಘದ ಉಳಿದ ಪ್ರಮುಖರ ಜೊತೆ ಹೋಲಿಸಿದಲ್ಲಿ ಶ್ರೀ ಗುರೂಜಿ ಹೊಸಬರು. ದೇಶದಲ್ಲಿ ಅವರು ಹೆಚ್ಚು ಪರಿಚಿತರೂ ಆಗಿರಲಿಲ್ಲ. ಶ್ರೀ ಗುರೂಜಿಯವರ ನೇತೃತ್ವದಲ್ಲಿ ಸಂಘದ ಭವಿಷ್ಯ ಏನಾಗಬಹುದು ಎಂಬ ಚಿಂತೆ ಅನೇಕ ಹಿತಚಿಂತಕರ ಮನಸ್ಸಿಗೆ ಬರುವುದು ಸ್ವಾಭಾವಿಕವಾಗಿತ್ತು. ಕೆಲವರು ಅನೇಕ ರೀತಿಯ ಟೀಕೆ-ಟಿಪ್ಪಣಿ ಮಾಡುವುದಲ್ಲದೆ ಸಲಹೆಗಳನ್ನೂ ಕೊಡುತ್ತಿದ್ದರು. ಆದರೆ ಶ್ರೀ ಗುರೂಜಿಯವರು ಸರಸಂಘಚಾಲಕ ಜವಾಬ್ದಾರಿ ಬಂದನಂತರ ತಮ್ಮ ಪ್ರಾರಂಭದ ಭಾಷಣದಲ್ಲಿ ಹೇಳಿದ ಈ ವಿಚಾರಗಳನ್ನು ಕೇಳಿ ಎಲ್ಲರ ಬಾಯಿ ಮುಚ್ಚಿಹೋಯಿತು: “ಡಾಕ್ಟರ್ ಜೀಯವರಲ್ಲಿ ತಾಯಿಯ ವಾತ್ಸಲ್ಯ, ತಂದೆಯ ಜವಾಬ್ದಾರಿ, ಗುರುವಿನ ಮಾರ್ಗದರ್ಶನ ಈ ಮೂರರ ಸಮನ್ವಯ ಇತ್ತು. ....... ಅವರು ಸರಸಂಘಚಾಲಕರ ಕಠಿಣ ಹೊಣೆಗಾರಿಕೆ ನನಗೆ ಕೊಟ್ಟಿದ್ದಾರೆ. ಆದರೆ ಇದು ವಿಕ್ರಮಾದಿತ್ಯನ ಸಿಂಹಾಸನ. ಇದರ ಮೇಲೆ ಕುಳಿತ ಕುರಿಕಾಯುವ ಬಾಲಕನೂ ಒಳ್ಳೆಯ ನಿರ್ಣಯವನ್ನೇ ನೀಡುತ್ತಾನೆ. ...... ನಮ್ಮ ಮಹಾನಾಯಕನ ಪುಣ್ಯದ ಫಲವಾಗಿ ನನ್ನಿಂದ ಒಳ್ಳೆಯ ಸಂಗತಿಗಳೇ ಆಗುತ್ತವೆ.” ಇನ್ನೊಮ್ಮೆ ಭಾಷಣದಲ್ಲಿ “ ನಮ್ಮ ಸಂಘಟನೆಯೊಂದು ಅಭೇದ್ಯ ಕೋಟೆ. ಇದರ ಮೇಲೆ ತಮ್ಮ ಕೊಕ್ಕುಗಳಿಂದ ಆಕ್ರಮಣ ಮಾಡುವವರ ಕೊಕ್ಕುಗಳೇ ಮುರಿದುಬೀಳುತ್ತವೆ” ಎಂದರು. ಈ ರೀತಿ ಶ್ರೀ ಗುರೂಜಿಯವರ ಆತ್ಮವಿಶ್ವಾಸ ತುಂಬಿದ ಮಾತುಗಳಿಂದ ಸ್ವಯಂಸೇವಕರ ಧೈರ್ಯ ಹೆಚ್ಚಿತು.ಹಾಗೆಯೇ ಅನೇಕ ರೀತಿಯ ಟೀಕೆ ಟಿಪ್ಪಣಿ ಮಾಡುವವರ ಧ್ವನಿಯೂ ಅಡಗಿತು.

ಈ ರೀತಿ ಶ್ರೀ ಗುರೂಜಿಯವರು ಸಂಘಕಾರ್ಯವನ್ನು ತಮ್ಮ ಜೀವನದ ಏಕಮಾತ್ರ ಮಹತ್ಕಾರ್ಯ ಎಂದು ಸ್ವೀಕರಿಸಿದರು. ತಮ್ಮ ದಿನಚರಿ, ಜೀವನಶೈಲಿ, ಸ್ವಭಾವ ಎಲ್ಲದರಲ್ಲಿಯೂ ಸಂಘಕಾರ್ಯಕ್ಕೆ ಅನುಗುಣವಾಗುವ ರೀತಿಯಲ್ಲಿ ಬದಲಾವಣೆ ತರಲು ಪ್ರಯತ್ನಿಸಿದ್ದೂ ಮಹತ್ವದ ವಿಷಯವೇ. ತಮ್ಮಲಿರುವ ದೋಷಗಳು, ಕೊರತೆಗಳನ್ನು ನಿಧಾನವಾಗಿ ದೂರಮಾಡುವ ಪ್ರಯತ್ನವನ್ನು ಮಾಡತೊಡಗಿದರು. ಸ್ವಭಾವದಲ್ಲಿಯೇ ಇದ್ದ ಕಠೋರ ಅನುಶಾಸನದ ಕಾರಣದಿಂದಾಗಿ ಮಾತಿನಲ್ಲಿ ಇರುತ್ತಿದ್ದ ಉಗ್ರತೆಯೂ ನಿಧಾನವಾಗಿ ಕಡಿಮೆಯಾಗತೊಡಗಿತು. ಈ ದಿಕ್ಕಿನಲ್ಲಿ ಅವರು ಸತತ ಚಿಂತನೆಯನ್ನು ಮಾಡುತ್ತಿದ್ದರು. ಸೈದ್ಧಾಂತಿಕವಾಗಿ ಗುರೂಜಿಯವರು ಹಿಂದು ರಾಷ್ಟ್ರೀಯತೆಯನ್ನು ಪೂರ್ಣವಾಗಿ ಮೈಗೂಡಿಸಿಕೊಂಡಿದ್ದರು. ಈ ಎಲ್ಲ ವಿಷಯಗಳಲ್ಲಿ ಡಾಕ್ಟರ್ ಜೀಯವರ ಜೀವಂತ ಉದಾಹರಣೆ ಅವರ ಮುಂದೆ ಇತ್ತು.

## 3.1 ‘ಭಾರತ ಛೋಡೋ’ : ಶ್ರೀ ಗುರೂಜಿಯವರ ಯೋಗ್ಯ ದೃಷ್ಟಿ

ಶ್ರೀ ಗುರೂಜಿಯವರು ಸರಸಂಘಚಾಲಕರಾದ ಕೆಲವೇ ವರ್ಷಗಳಲ್ಲಿ ಒಂದಾದ ಮೇಲೊಂದರಂತೆ ಅವರ ಯೋಗ್ಯತೆಯ ಪರೀಕ್ಷೆಯ ಕಠಿಣ ಸಂದರ್ಭಗಳು ಬರತೊಡಗಿದವು. ದೇಶದ ನಾಲ್ಕೂ ಕಡೆಗಳಲ್ಲಿ ಮುಸಲ್ಮಾನರಿಂದ ಹಿಂದುಗಳ ಮೇಲೆ ಆಕ್ರಮಣಗಳು ಆಗತೊಡಗಿದ್ದವು.ಬ್ರಿಟಿಷ್ ಸರ್ಕಾರದಿಂದಲೂ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಅವರಿಗೇ ಸಮರ್ಥನೆ ಇರುತ್ತಿತ್ತು. ಎರಡನೆಯ ವಿಶ್ವಯುದ್ಧದಲ್ಲಿ ಬ್ರಿಟಿಷರ ಸೇನೆ ಎಲ್ಲ ಕಡೆಗಳಲ್ಲೂ ಸೋಲುತ್ತಿತ್ತು. ಆದರೆ ದೌರ್ಭಾಗ್ಯದಿಂದ ಅದರ ಲಾಭ ಪಡೆದುಕೊಳ್ಳಲು ದೇಶದಲ್ಲಿ ಯಾವುದೇ ರಾಷ್ಟ್ರವ್ಯಾಪಿ ಸಂಘಟಿತ ಶಕ್ತಿಯೂ ಇರಲಿಲ್ಲ. ಆ ಶಕ್ತಿ ಇಲ್ಲದೆಯೇ ಕಾಂಗ್ರೆಸ್ ೧೯೪೨ರ ಆಗಸ್ಟ್ ೯ ರಂದು “ಆಂಗ್ಲರೇ, ಭಾರತವನ್ನು ಬಿಡಿ(ಭಾರತ್ ಛೋಡೋ)” ಘೋಷಣೆಯೊಂದಿಗೆ ಆಂದೋಲನವನ್ನು ಪ್ರಾರಂಭಿಸಿತು. ದೇಶದಲ್ಲಿ ದೊಡ್ಡ ಆಂದೋಲನವೇನೋ ಪ್ರಾರಂಭವಾಯಿತು. ಆದರೆ ಅಸಂಘಟಿತ, ತಿಳುವಳಿಕೆಯಿಲ್ಲದ ಜನತೆಯಿಂದ ಅನೇಕ ರೀತಿಯ ವಿಧ್ವಂಸಕ

ಕೃತ್ಯಗಳು ಆಗತೊಡಗಿದವು. ಸರಕಾರ ಅತ್ಯಂತ ಕ್ರೌರ್ಯದ ದಮನನೀತಿ ಅನುಸರಿಸಿತು. ಎರಡು ಮೂರು ತಿಂಗಳುಗಳಲ್ಲಿಯೇ ಆಂದೋಲನದ ಕಿಡಿಗಳು ಶಾಂತವಾಗತೊಡಗಿದವು. ಕಾಂಗ್ರೆಸ್ಸಿನ ಎಲ್ಲ ನಾಯಕರೂ ಕಾರಾಗೃಹದಲ್ಲಿದ್ದರು. ಅವರ ಬಿಡುಗಡೆಯ ಯಾವುದೇ ಆಸೆಯೂ ಕಾಣಿಸುತ್ತಿರಲಿಲ್ಲ. ಈ ಸ್ಥಿತಿಯಲ್ಲಿ ದೇಶದ ಎಲ್ಲ ಕಡೆ ಹತಾಶತೆ ಮತ್ತು ಏನು ಮಾಡಬೇಕೆಂಬುದೇ ತೋಚದಂತಹ ಮನಸ್ಥಿತಿ ಹರಡಿತು. ಇದರ ಲಾಭ ಪಡೆಯಲು ಮುಸ್ಲಿಂ ಲೀಗ್ ಕೂಡಾ ತನ್ನ ಹಿಂದು ವಿರೋಧಿ ನೀತಿಯನ್ನು ಇನ್ನಷ್ಟು ಉಗ್ರಗೊಳಿಸಿತು.

'ಭಾರತ ಛೋಡೋ' ಆಂದೋಲನ ಪ್ರಾರಂಭ ಆಗುತ್ತಿದ್ದಂತೆಯೇ ಸಂಘದ ಮುಂದೆ ಅದರಲ್ಲಿ ಭಾಗವಹಿಸಬೇಕೇ, ಬೇಡವೇ ಎಂಬ ಪ್ರಶ್ನೆ ಬಂದಿತು. ಅದರ ಎಲ್ಲ ಮುಖಗಳ ಬಗ್ಗೆಯೂ ಯೋಚನೆ ಮಾಡಿದ ನಂತರ ಶ್ರೀ ಗುರೂಜಿಯವರು ಸಂಘವನ್ನು ನೇರವಾಗಿ ಆಂದೋಲನದಲ್ಲಿ ಇಳಿಸದೆ ಸ್ವಯಂಸೇವಕರಿಗೆ ವ್ಯಕ್ತಿಗತವಾಗಿ ಭಾಗವಹಿಸಲು ಪ್ರೋತ್ಸಾಹ ಕೊಡಬೇಕೆಂಬ ನಿರ್ಣಯಕ್ಕೆ ಬಂದರು. ಶ್ರೀ ಗುರೂಜಿಯವರ ಈ ನಿರ್ಣಯ ಡಾಕ್ಟರ್ ಜೀಯವರ ನೀತಿಗೆ ಅನುಗುಣವಾಗಿಯೇ ಇತ್ತು. ಸಂಘವು ಹಿಂದುಗಳ ಸಂಘಟಿತ ಶಕ್ತಿಯನ್ನು ವೇಗವಾಗಿ ಬೆಳೆಸುವುದರತ್ತ ತನ್ನ ಗಮನವನ್ನು ಹರಿಸಿತು. ಈ ದೃಷ್ಟಿಯಿಂದ ಶ್ರೀ ಗುರೂಜಿಯವರು ತಮ್ಮ ಪ್ರವಾಸದ ಸಂದರ್ಭದಲ್ಲಿ ಹಿಂದುಗಳನ್ನು ಆತ್ಮರಕ್ಷಣೆಗೆ ಸಿದ್ಧರಾಗುವಂತೆ ಕರೆ ಕೊಡುತ್ತಿದ್ದರು. ಪರಿಸ್ಥಿತಿ ಬಿಗಡಾಯಿಸಿತ್ತಿದ್ದಂತೆ ಶ್ರೀ ಗುರೂಜಿಯವರು ಸ್ವಯಂಸೇವಕರಿಗೆ ಕರೆಕೊಡುತ್ತಾ "ನಮ್ಮ ಸೌಭಾಗ್ಯದಿಂದ ನಾವು ಇಂತಹ ಸಂಕಟಮಯ ಪರಿಸ್ಥಿತಿಯಲ್ಲಿ ಹುಟ್ಟಿದ್ದೇವೆ.ರಾಷ್ಟ್ರಜೀವನ ನೆಮ್ಮದಿಯಲ್ಲಿ ಇರುವ ಸಂದರ್ಭಕ್ಕಿಂತಲೂ ಎಷ್ಟೋ ಪಟ್ಟು ಹೆಚ್ಚು ನಮ್ಮ ಕರ್ತವ್ಯ, ತ್ಯಾಗ, ಪೌರುಷಗಳನ್ನು ಪ್ರಕಟಿಸುವ ಅವಕಾಶ ನಮಗೆ ಇಂತಹ ಸಂಕಟದ ಕಾಲದಲ್ಲಿಯೇ ಒದಗಿಬರುತ್ತದೆ" ಎಂದರು.

ಮಹಮ್ಮದ್ ಆಲಿ ಜಿನ್ನಾ ಮುಸ್ಲಿಂ ಲೀಗಿನ ದೇಶವಿಭಜನೆಯ ನೀತಿಗೆ ಅನುಗುಣವಾಗಿ ೧೯೪೬ರ ಆಗಸ್ಟ್ ೧೬ನೇ ದಿನವನ್ನು ನೇರ ಕಾರ್ಯಚರಣೆಯ ದಿನವನ್ನಾಗಿ ಘೋಷಿಸಿ ಹಿಂದು ಹತ್ಯೆಯ ತಾಂಡವವನ್ನೇ ಹುಟ್ಟುಹಾಕಿದನು. ಆದರೆ ಒಂದೆರಡು ದಿನಗಳಲ್ಲಿಯೇ ಹಿಂದುಗಳು ಎಚ್ಚೆತ್ತರು. ಮುಸಲ್ಮಾನರಿಗೆ ಸರಿಯಾಗಿ ಉತ್ತರ ಕೊಡತೊಡಗಿದರು. ಮುಸಲ್ಮಾನರ ಆವೇಶ, ಉದ್ವೇಗಗಳೆಲ್ಲ ಉಡುಗಿಹೋದವು. ಈ ದಿನಗಳಲ್ಲಿ ಶ್ರೀ ಗುರೂಜಿ ತಮ್ಮ ಪ್ರತಿಯೊಂದು ಭಾಷಣದಲ್ಲೂ ದೇಶವಿಭಜನೆಯ ವಿರುದ್ಧ ಧೈರ್ಯವಾಗಿ ಎದ್ದು ನಿಲ್ಲುವಂತೆ ಹಿಂದು ಜನತೆಗೆ ಕರೆಕೊಡುತ್ತಿದ್ದರು. ಆದರೆ ಕಾಂಗ್ರೆಸ್ ನಾಯಕರಿಗೆ ಅಖಂಡ ಭಾರತಕ್ಕಾಗಿ ಹೋರಾಡುವ ಮನಸ್ಥಿತಿಯೇ ಇರಲಿಲ್ಲ. ಅವರೆಲ್ಲ ಮಾನಸಿಕವಾಗಿಯೇ ಸೋತು ಹೋಗಿದ್ದರು. ಆಮೇಲೆ ಪಂಡಿತ ನೆಹರೂ ಅವರೇ ಇದನ್ನು ಸ್ಪಷ್ಟ ಶಬ್ಧಗಳಲ್ಲಿ ಒಪ್ಪಿಕೊಂಡರು. ಆ ಸಮಯದಲ್ಲಿ ಹಿಂದುಗಳ ರಕ್ಷಣೆಗೆ ಸಂಘದ ಸ್ವಯಂಸೇವಕರನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ.

## 3.2 ೧೯೪೭ ರ ಭೀಕರ ಸಮಯದಲ್ಲಿ ಅದ್ವಿತೀಯ ನೇತೃತ್ವ

ಕೊನೆಗೂ ದೇಶ ವಿಭಜನೆಗೆ ಕಾಂಗ್ರೆಸ್ ನಾಯಕರು ಒಪ್ಪಿಕೊಂಡರು. ಅದರಂತೆ ೧೯೪೭ ರ ಜೂನ್ ೩ ರಂದು ಅದರ ಘೋಷಣೆ ಆಗುತ್ತಿದ್ದಂತೆಯೇ ದೇಶದ ಪರಿಸ್ಥಿತಿ ಚಿತ್ರವೇ ಬದಲಾಯಿತು. ಸ್ವಯಂಸೇವಕರಿಗೆ "ಪಾಕಿಸ್ತಾನವಾಗಲಿರುವ ಭೂಪ್ರದೇಶಗಳಿಂದ ಸಾಧ್ಯವಾದಷ್ಟು ಶೀಘ್ರವಾಗಿ ಹಿಂದುಗಳನ್ನು ಸುರಕ್ಷಿತವಾಗಿ ಭಾರತಕ್ಕೆ ಕಳಿಸಬೇಕು; ಕೊಟ್ಟಕೊನೆಯ ಹಿಂದುವು ಭಾರತಕ್ಕೆ ಬರುವ ತನಕ ಅವರೆಲ್ಲರ ರಕ್ಷಣೆಗಾಗಿ ತಾವು

ಅಲ್ಲಿಯೇ ಗಟ್ಟಿಯಾಗಿ ನಿಂತಿರಬೇಕು" ಎಂಬ ಆದೇಶ ನೀಡಲಾಯಿತು. ಆ ಭೀಷಣ ದಿನಗಳಲ್ಲಿ ಅನೇಕ ರೀತಿಯ ಹೃದಯವಿದ್ರಾವಕ, ರಕ್ತರಂಜಿತ ಪ್ರಸಂಗಗಳನ್ನು ಸ್ವಯಂಸೇವಕರು ಎದುರಿಸಿದರು.

ಆ ಕೆಲಸ ಮಾಡುವಾಗ ಸ್ವಯಂಸೇವಕರು ತೋರಿಸಿದ ಪರಾಕ್ರಮ-ರಣಕುಶಲತೆ-ತ್ಯಾಗ ಮತ್ತು ಬಲಿದಾನಗಳು ಹೋಲಿಕೆಯೇ ಇಲ್ಲದವು; ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಲು ಯೋಗ್ಯವಾದವು.ಸ್ವತಃ ಶ್ರೀ ಗುರೂಜಿಯವರದ್ದೂ ಆ ದಿನಗಳಲ್ಲಿ ಸ್ಫೂರ್ತಿದಾಯಕ ಉದಾಹರಣೆಯೇ. ಅವರೂ ಆ ಗಲಭೆ ಪೀಡಿತ ಪ್ರದೇಶಗಳಲ್ಲಿಯೇ ಪ್ರವಾಸ ಮಾಡುತ್ತಿದ್ದರು. ಆಗಸ್ಟ್ ೧೯೪೭ರ ಮೊದಲನೇ ವಾರದಲ್ಲಿ ಸಿಂಧ್ ದ ಪ್ರವಾಸ ಮುಗಿಸಿ ಪಂಜಾಬಿಗೆ ಅವರು ಬಂದಾಗ ಇಡೀ ಪಂಜಾಬ್ ಭಯ ಆತಂಕಗಳಿಂದ ಕೂಡಿತ್ತು. ಆದರೂ ಸಂಕಟಗ್ರಸ್ತ ಹಿಂದುಬಂಧುಗಳ ಮನೋಬಲ ದೃಢಗೊಳಿಸುವುದಕ್ಕಾಗಿ ಸ್ವಂತ ಪ್ರಾಣವನ್ನು ಒತ್ತೆಇಟ್ಟು ಶ್ರೀ ಗುರೂಜಿ ಬೇರೆ ಬೇರೆ ಸ್ಥಳಗಳಿಗೆ ಹೋಗುತ್ತಿದ್ದರು.

ಅಮೃತಸರದಿಂದ ಅಂಬಾಲದವರೆಗಿನ ಎಲ್ಲ ಜಿಲ್ಲೆಗಳಿಗೂ ಅವರು ಹೋಗಿದ್ದರು. ಅನೇಕಬಾರಿ ಮಳೆಯಿಂದಾಗಿ ರಸ್ತೆ ಹಾಳಾಗಿದ್ದಾಗ ಗೂಡ್ಸ್ ಗಾಡಿಯ ಡಬ್ಬಗಳಲ್ಲಿ ಅಥವಾ ಇಂಜಿನ್ ಗಳಲ್ಲಿ ಕುಳಿತೂ ಪ್ರವಾಸ ಮಾಡಿದ್ದರು. ಚಹೇಡೂ ಎಂಬ ಸೇತುವೆ ಇತ್ತು. ಅಲ್ಲಿ ಹೋದಾಗ ಮುಂದೆ ಹೋಗುವುದು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ. ಸೇತುವೆಯ ರೈಲಿನ ಪಟ್ಟಿಗಳು ನೇತಾಡುತ್ತಿದ್ದವು. ಕೆಳಗೆ ಪ್ರಚಂಡ ವೇಗದಿಂದ ಹರಿಯುವ ಪ್ರವಾಹ. ಕಾರ್ಯಕರ್ತರಿಗೆ ಮುಂದೆ ಪ್ರಯಾಣಿಸುವ ಯಾವ ದಾರಿಯೂ ಹೊಳೆಯುತ್ತಿಲ್ಲ. ಆದರೆ ಅಲ್ಲಿ ಗೆ ಬರುತ್ತಿದ್ದಂತೆಯೇ ಶ್ರೀ ಗುರೂಜಿಯವರು ನೇತಾಡುತ್ತಿದ್ದ ಅದೇ ಕಂಬಿಗಳ ಮೇಲೆ ಒಂದೊಂದೇ ಹೆಜ್ಜೆ ಮುಂದಿಡುತ್ತಾ ಉಳಿದವರೆಲ್ಲ ನೋಡುತ್ತಿದ್ದಂತೆಯೇ ಸೇತುವೆಯನ್ನು ದಾಟಿಬಿಟ್ಟರು. ಉಳಿದ ಕಾರ್ಯಕರ್ತರೂ ಹಾಗೆಯೇ ದಾಟುವ ಧೈರ್ಯ ಮಾಡಿದರು. ನಿರ್ಧಾರಿತಸ್ಥಾನವಾದ ಲೂಧಿಯಾನ ತಲುಪಿದಾಗ ಜನರಿಗೆಲ್ಲ ಆಶ್ಚರ್ಯ!
ದೇಶ ವಿಭಜನೆಯ ಆ ಭಯಾನಕ ದಿನಗಳಲ್ಲಿ ಸ್ವಯಂಸೇವಕರು ಇನ್ನೊಂದು ಕಠಿಣ ಕೆಲಸ ಮಾಡಬೇಕಾಗಿ ಬಂತು . ಪಾಕಿಸ್ತಾನದ ಪ್ರದೇಶಗಳಿಂದ ಬಂದಿದ್ದ ಲಕ್ಷಾವಧಿ ನಿರಾಶ್ರಿತರಿಗೆ ತಾತ್ಕಾಲಿಕ ವಸತಿ ಮತ್ತು ಭೋಜನಗಳ ವ್ಯವಸ್ಥೆ ಮಾಡಲಾಯಿತು.
ಆ ದಿನಗಳ ಸೇವಾಕಾರ್ಯಗಳಲ್ಲಿ ಸ್ವಯಂಸೇವಕರ ಕಷ್ಟಸಹಿಷ್ಣುತೆ, ಸಂವೇದನಶೀಲತೆ ಎಲ್ಲರಿಗೂ ತಿಳಿಯಿತು. ಗುರೂಜಿಯವರು ದೇಶವಿಭಜನೆಯನ್ನು ಮತ್ತೊಮ್ಮೆ ಅಖಂಡಗೊಳಿಸುವ ಕನಸು ಪ್ರತಿಯೊಬ್ಬ ದೇಶಭಕ್ತನ ಹೃದಯದಲ್ಲಿ ಚಿಗುರುತ್ತಿರಬೇಕೆಂಬುದೇ ಅವರ ತೀವ್ರ ಆಕಾಂಕ್ಷೆಯಾಗಿತ್ತು.

## 3.3 ಸಾಮರಸ್ಯದ ಕರೆ

ದೇಶದೆಲ್ಲೆಡೆ ಗುರೂಜಿಯವರ ಪ್ರವಾಸ ಮತ್ತು ಭಾಷಣಗಳಿಂದಾಗಿ ಸಂಘದ ಜನಪ್ರಿಯತೆ ದಿನೇ ದಿನೇ ಬೆಳೆಯತೊಡಗಿತು.ಕೆಲವು ತಿಂಗಳ ನಂತರ ಸಂಘದ ಮುಂದೆ ಇನ್ನೊಂದು ಕಠಿಣ ಪ್ರಸಂಗ ಎದುರಾಯಿತು. ದೇಶ ವಿಭಜನೆಗೆ ಒಪ್ಪಿಕೊಂಡ ನಾಯಕರ ಬಗ್ಗೆ ಸ್ವಯಂಸೇವಕರಲ್ಲಿ ಮತ್ತು ಜನತೆಯಲ್ಲಿಯೂ ತುಂಬಾ ಅಸಮಧಾನ ಕೆರಳಿತ್ತು. ಅದನ್ನು ಶಾಂತಗೊಳಿಸಲು ಶ್ರೀ ಗುರೂಜಿಯವರು ಹೇಳಿದ್ದು - " ಅನ್ಯ ವಿಚಾರಗಳನ್ನು ಹೇಳುವವರು ಹೇಗೇ ಇದ್ದರೂ ಅವರು ನಮ್ಮವರೇ. ಅವರೂ ದೇಶಕ್ಕಾಗಿ ಒಳ್ಳೆಯ ಕೆಲಸಗಳನ್ನೂ, ತ್ಯಾಗವನ್ನೂ ಮಾಡಿದ್ದಾರೆ.ಆದ್ದರಿಂದ ಅವರ ಬಗ್ಗೆ ನಮ್ಮಲ್ಲಿ ಸ್ನೇಹಪೂರ್ಣ ಬಂಧುತ್ವದ ಭಾವನೆ ಇರಬೇಕು." ಶ್ರೀ ಗುರೂಜಿಯವರ ಈ ರೀತಿಯ ಅಜಾತಶತ್ರುಭಾವನೆಗಳಿಂದ ಕೂಡಿದ ಮಧುರವಾದ ಮಾತುಗಳನ್ನು ಮತ್ತು ಅದೇ ರೀತಿಯ ಆಚರಣೆಯನ್ನು ಇಡೀ ಸಂಘಟನೆಯ ಎಲ್ಲ ಸ್ವಯಂಸೇವಕರೂ ಸ್ವೀಕರಿಸಿದರು.

೧೯೪೮ ರ  ಜನವರಿ ೧೪ರಂದು ಮುಂಬಯಿಯಲ್ಲಿ ಲಕ್ಷಾವಧಿ ಸ್ವಯಂಸೇವಕರು ಸೇರಿದ್ದ ಸಭೆಯಲ್ಲಿ ಇದೇ ರೀತಿ ಸಾಮರಸ್ಯದ ಕರೆ ನೀಡಿದರು. ಸಂಘದ ಜನಪ್ರಿಯತೆ ಬೆಳೆಯುತ್ತಿರುವುದನ್ನು ನೋಡಿ ಕಾಂಗ್ರೆಸ್ ನಾಯಕರಿಗೆ ಇವರು ಮುಂದೆ ರಾಜಕೀಯವಾಗಿ ತಮಗೆ ಸವಾಲು ಹಾಕುತ್ತಾರೆಂದು ಭಯ ಆಗತೊಡಗಿತು. ಈ ಕಾರಣದಿಂದಾಗಿ ಅವರು ಸಂಘವನ್ನು ಹತ್ತಿಕ್ಕುವ ನೀತಿಯನ್ನು ಹಿಡಿದರು. ಮಹಾರಾಷ್ಟ್ರದಲ್ಲಿ ಒಂದು ಲಕ್ಷ ಸ್ವಯಂಸೇವಕರ ಶಿಬಿರ ನಡೆಸುವುದರ  ಮೇಲೆ ಸರ್ಕಾರ ನಿರ್ಬಂಧ ಹೇರಿತು. ಅದಕ್ಕೆ ಮೊದಲೇ ೧೯೪೭ ರ ಅಕ್ಟೋಬರ್ ನಲ್ಲಿ ನಡೆದ ಕೇಂದ್ರೀಯ ಸಮಿತಿಯ ಗುಪ್ತ ಬೈಠಕ್ ನಲ್ಲಿ ಯಾವುದಾದರೂ ನೆಪ ಹಿಡಿದು ಸಂಘದ ಮೇಲೆ ನಿರ್ಬಂಧ ಹಾಕಬೇಕೆಂದು ನಿಶ್ಚಯವಾಗಿತ್ತು.

## 3.4 ಸಂಘದ ಮೇಲೆ ನಿರ್ಬಂಧ : ಗಾಂಧೀಜಿ ಹತ್ಯೆ – ಒಂದು ನೆಪ

೧೯೪೮ ರ ಜನವರಿ ೩೦ ದೇಶಕ್ಕೆ ಅತ್ಯಂತ ಕರಾಳದಿನ. ಆ ದಿವಸ ಸಂಜೆ ೫ ಘಂಟೆಗೆ ವಿಶ್ವವಂದ್ಯ ಗಾಂಧೀಜಿಯವರ ಹತ್ಯೆ ಆಯಿತು. ಆ ಕ್ಷಣವೇ ಶ್ರೀ ಗುರೂಜಿ ತಮ್ಮೆಲ್ಲ ಪ್ರವಾಸಗಳನ್ನು ರದ್ದುಗೊಳಿಸಿ ನಾಗಪುರಕ್ಕೆ ಹಿಂದಿರುಗಿದರು. ಪಂಡಿತ ನೆಹರೂ ಮತ್ತು ಸರದಾರ ಪಟೇಲರಿಗೆ ತಂತಿ ಮೂಲಕ ಕಳುಹಿಸಿದ ತಮ್ಮ ಶೋಕ ಸಂದೇಶದಲ್ಲಿ  "ವಿಭಿನ್ನ ಪ್ರವೃತ್ತಿಯ ಜನರನ್ನು ಒಂದೇ ಸೂತ್ರದಲ್ಲಿ ಪೋಣಿಸಿ ಅವರೆಲ್ಲರಿಗೂ ಯೋಗ್ಯ ಮಾರ್ಗದರ್ಶನ ಮಾಡಬಲ್ಲ ಕುಶಲ ಕರ್ಣಧಾರ" ಎಂದು ಮಹಾತ್ಮ ಗಾಂಧಿಯವರ ವ್ಯಕ್ತಿತ್ವದ ಬಗ್ಗೆ ತಮ್ಮ ಶ್ರದ್ಧೆಯನ್ನು ಪ್ರಕಟಿಸಿ ಅವರ ಹತ್ಯೆಯನ್ನು ಅಸಂದಿಗ್ಧ ಶಬ್ಧಗಳಲ್ಲಿ ಖಂಡಿಸಿದರು.೧೯೪೮ರ ಫೆಬ್ರವರಿ ೧ರ ರಾತ್ರಿ ಶ್ರೀ ಗುರೂಜಿಯವರನ್ನು ಬಂಧಿಸಲಾಯಿತು. ಫೆಬ್ರವರಿ ೪ರಂದು ಸರಕಾರವು ಸಂಘದ ಮೇಲೆ ಪ್ರತಿಬಂಧ ಹಾಕಿತು. ಶ್ರೀ ಗುರೂಜಿಯವರು ಆ ಕೂಡಲೇ ಸಂಘವನ್ನು ವಿಸರ್ಜಿಸಿದರು. ಇದರ ನಂತರ ಗುರೂಜಿಯವರು  ನೆಹರು ಮತ್ತು ಸರದಾರ ಪಟೇಲರಿಗೆ ಪ್ರೇಮ ಮತ್ತು ಉದಾರತೆಗಳಿಂದ ಕೂಡಿದ ದೀರ್ಘ ಪತ್ರವನ್ನು ಬರೆದು ಸಂಘದ ಮೇಲಿನ ಪ್ರತಿಬಂಧ ತೆಗೆಯುವಂತೆ ಕೇಳಿದರು.

ಸರಕಾರಿ ಆದೇಶಪತ್ರದಲ್ಲಿ ಗಾಂಧಿಹತ್ಯೆಯೇ ಅಲ್ಲದೆ ಅನೇಕ ತರಹದ ಘೋರ ಹಿಂಸಾಚಾರದ ಆರೋಪಗಳನ್ನು ಮಾಡಲಾಗಿತ್ತು.ದೇಶಾದ್ಯಂತ  ಸಾವಿರಾರು ಸ್ವಯಂಸೇವಕರನ್ನು ಬಂದೀಖಾನೆಗೆ ದೂಡಲಾಯಿತು. ದೇಶದೆಲ್ಲೆಡೆ ಕಾಂಗ್ರೆಸ್ಸಿಗರು, ಸಮಾಜವಾದಿಗಳು, ಕಮ್ಯುನಿಸ್ಟರಿಂದ ಸಂಘದ ಕಾರ್ಯಲಯಗಳು ಮತ್ತು ಸ್ವಯಂಸೇವಕರ ಮನೆಗಳ ಲೂಟಿ, ಬೆಂಕಿಹಚ್ಚುವ ಕೆಲಸಗಲೂ ನಡೆದವು.ಸರಕಾರೀ ಯಂತ್ರದಿಂದಲೂ ಒಂದೇ ಸಮನೆ ಸಂಘದ ಮೇಲೆ ವಿಷಕಾರಲಾಗುತ್ತಿತ್ತು. ಗಾಂಧಿ ಹತ್ಯೆ ಮಾಡಿದ ಗೋಡ್ಸೆ ಬ್ರಾಹ್ಮಣನಾದ್ದರಿಂದ ಮಹಾರಾಷ್ಟ್ರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬ್ರಾಹ್ಮಣರನ್ನು ಗುರಿಯಾಗಿಟ್ಟುಕೊಂಡು ಅವರ ಮನೆಗಳ ಲೂಟಿ, ಬೆಂಕಿಹಚ್ಚುವಿಕೆಗಳು ನಡೆದವು. ಈ ಅಗ್ನಿಕಾಂಡದಲ್ಲಿ ಉತ್ತರ ಕರ್ನಾಟಕದ 'ತೇರದಾಳ' ಗ್ರಾಮದಲ್ಲಿ ೬ ಜನರನ್ನು ಸಜೀವವಾಗಿ ಸುಡಲಾಯಿತು. ಗುರೂಜಿಯವರ ಮನೆಯ ಮೇಲೂ ಆಕ್ರಮಕರ ಗುಂಪು ದಾಳಿ ಮಾಡಿತು. ಈ ಆಕ್ರಮಣಕಾರರಿಗೆ ಸರಿಯಾದ ಪಾಠ  ಕಲಿಸುವ  ಶಕ್ತಿ ಸ್ವಯಂಸೇವಕರಲ್ಲಿ ಇರಲಿಲ್ಲ ಎಂದಲ್ಲ. ಆದರೆ  ದೇಶದ ಇಂತಹ ವಿಷಮ ಸಮಯದಲ್ಲಿ ರಾಷ್ಟ್ರೀಯ ಸಾಮಂಜಸ್ಯವನ್ನು ಉಳಿಸುವುದಕ್ಕಾಗಿ ಸಂಘದ  ಕಡೆಯಿಂದ 'ಏನೇ ಆಗಲಿ, ಶಾಂತರಾಗಿರಿ' ಎಂಬ ಸೂಚನೆಯನ್ನು ದೇಶದ ಎಲ್ಲ ಸ್ವಯಂಸೇವಕರಿಗೂ ಕೊಡಲಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಎಂತಹ ಶಾಂತಿ, ಸಂಯಮ, ಸೌಹಾರ್ದಪೂರ್ಣವಾಗಿ ವ್ಯವಹರಿಸಬೇಕೆಂಬ ಬಗ್ಗೆ ಶ್ರೀ ಗುರೂಜಿಯವರು ಒಂದು ದೀರ್ಘ ಹೇಳಿಕೆಯನ್ನೇ ಕೊಟ್ಟರು. ಕಾರ್ಯಾಲಯಕ್ಕೆ ಮುತ್ತಿಗೆ ಹಾಕಿದ್ದ ಗುಂಪನ್ನು ಚದುರಿಸಲು ಸಿದ್ಧರಾಗಿದ್ದ ದಂಡಧಾರಿ ಸ್ವಯಂಸೇವಕರಿಗೆ ಶಾಂತವಾಗಿ ಹಿಂದಿರುಗಲು ಆಜ್ಞೆಮಾಡಿ ತಮ್ಮ ಸಂಧ್ಯಾವಂದನೆಗೆಂದು ಒಳಗೆ ಹೊರಟುಹೋದರು. ತಮ್ಮ ಹತ್ತಿರದ ಸ್ವಯಂಸೇವಕರಿಗೆ  ಅವರು ಹೇಳಿದ್ದು- "

ಯಾವ ಸಮಾಜದ ಸೇವೆಗೆ ನಾನು ಕಟಿಬದ್ಧನಾಗಿರುವೆನೋ ಅದರ ರಕ್ತದ ಒಂದೇ ಒಂದು ಕಣವನ್ನೂ ನನ್ನ ಸಲುವಾಗಿ ಹರಿಸಲು ನಾನು ಅವಕಾಶ ಮಾಡಿಕೊಡುವುದಿಲ್ಲ”.

## 3.5 ಅಗ್ನಿ ಪರೀಕ್ಷೆಯಲ್ಲಿ ವಿಜಯಿ

ಸರಕಾರ ಶ್ರೀ ಗುರೂಜಿಯವರನ್ನು ಬಂಧಿಸಿ ಸಿವನಿ ಕಾರಾಗೃಹದಲ್ಲಿ ಇರಿಸಿತು.ಇಲ್ಲಿಂದಲೂ ಶ್ರೀ ಗುರೂಜಿಯವರು ನೆಹರು ಮತ್ತು ಪಟೇಲರಿಗೆ ಪತ್ರ ಬರೆದು ಸಂಘದ ಮೇಲಿನ ಪ್ರತಿಬಂಧವನ್ನು  ತೆಗೆಯುವಂತೆ ಕೇಳಿಕೊಂಡರು. ಆದರೆ ಆ ನಾಯಕರ ಮೇಲೆ ಈ ಪತ್ರಗಳಿಂದ ಯಾವುದೇ ಪರಿಣಾಮವಾಗಲಿಲ್ಲ. ಅವರು ಪ್ರತಿ ಪತ್ರಕ್ಕೆ ಉತ್ತರ ಬರೆಯುವಾಗಲೂ ಹೊಸ ಹೊಸ ಆರೋಪಗಳನ್ನು ಮಾಡತೊಡಗಿದರು. ಈ ಮಧ್ಯೆ ಕಾರಾಗೃಹದಿಂದ ಬಿಡುಗಡೆ ಹೊಂದಿ ಶ್ರೀ ಗುರೂಜಿ ದಿಲ್ಲಿಗೆ ಹೋದರು. ಅಲ್ಲಿ ನಾಯಕರೊಂದಿಗೆ ಮಾತುಕತೆಗೆ ಅವಕಾಶ ಕೊಡದೇ ಅವರನ್ನು ಪುನಃ  ಬಂಧಿಸಿ ಮಧ್ಯಪ್ರಾಂತದ ಬೈತೂಲ್ ಕಾರಗೃಹಕ್ಕೆ ಕಳಿಸಲಾಯಿತು. ಇಲ್ಲಿ ನಿವಾಸ ಮತ್ತು ಆಹಾರಗಳ ಅವ್ಯವಸ್ಥೆಯಿಂದಾಗಿ ಅವರ ಆರೋಗ್ಯ ಕೆಟ್ಟಿತು. ದಿಲ್ಲಿಯಲ್ಲಿರುವಾಗ ಶ್ರೀ ಗುರೂಜಿಯವರು ಪತ್ರಿಕೆಗಳಿಗೆ  ದೀರ್ಘ ಹೇಳಿಕೆ ಕೊಟ್ಟಿದ್ದರು. ಇದರಲ್ಲಿ ಸರಕಾರದ ಆರೋಪಗಳಿಗೆ ಮುಖಮುರಿಯುವಂತೆ ಉತ್ತರ ನೀಡಿದ್ದಲ್ಲದೆ ಸತ್ಯ ಮತ್ತು ನ್ಯಾಯಕ್ಕೆ ಆಗ್ರಹಿಸಿದರು. ಸಂಘದ ಮೇಲಿನ ಆರೋಪಗಳನ್ನು ರುಜುವಾತುಮಾಡಿ ಅಥವಾ ಪ್ರತಿಬಂಧ ತೆಗೆಯಿರಿ ಎಂಬ ಸವಾಲನ್ನು ಸರಕಾರಕ್ಕೆ ಹಾಕಿದರು. ದೇಶಾದ್ಯಂತ ಈ ಮಾತು ಮೊಳಗತೊಡಗಿತು.

## 3.6 ಅಭೂತಪೂರ್ವ ಸತ್ಯಾಗ್ರಹ

ತಮ್ಮ ಪ್ರೇಮಾದರಗಳೊಂದಿಗಿನ ವಿನಂತಿಗೆ ಆಡಲಿತದಲ್ಲಿರುವವರು ಕಣ್ಣು, ಕಿವಿ ಮುಚ್ಚಿಕೊಂಡು ಕುಳಿತಿರುವುದನ್ನು ನೋಡಿದ ಶ್ರೀ ಗುರೂಜಿಯವರು ತಮ್ಮ ಜೊತೆಯಲ್ಲಿದ್ದ ಸ್ವಯಂಸೇವಕರಿಗೆ ರಾಷ್ಟ್ರಜೀವನದಲ್ಲಿ ಸತ್ಯ ಮತ್ತು ನ್ಯಾಯಗಳ ಪ್ರತಿಷ್ಠಾಪನೆ ಮಾಡುವುದಕ್ಕಾಗಿ ಶಾಖೆಗಳನ್ನು ಪುನಃ ಪ್ರಾರಂಭಿಸಲು ಹೇಳಿದರು. ತಮ್ಮ ಈ ತೇಜಸ್ವಿ ಆವಾಹನೆಯಲ್ಲಿ ಗುರೂಜಿಯವರು ಸ್ವಯಂಸೇವಕರಿಗೆ “ಇದೊಂದು ಅಧರ್ಮದ ವಿರುದ್ಧ ಧರ್ಮದ, ಅನ್ಯಾಯದ ವಿರುದ್ಧ ನ್ಯಾಯದ, ಕ್ಷುದ್ರತೆಯ ವಿರುದ್ಧ ಉದಾರತೆಯ ಹೋರಾಟ. ನಮ್ಮ ವಿಜಯ ನಿಶ್ಚಿತ. ಏಕೆಂದರೆ ಧರ್ಮದೊಂದಿಗೆ ದೇವರಿದ್ದಾನೆ ಮತ್ತು ದೇವರಿರುವಲ್ಲಿ ವಿಜಯವಿರುತ್ತದೆ. ಆದ್ದರಿಂದ ಹೃದಾಯಾಕಾಶದಿಂದ ಜಗದಾಕಾಶದವರೆಗೆ ಭಾರತದ ಜಯಧ್ವನಿ ಮೊಳಗಿಸಿ ಮತ್ತು ಕಾರ್ಯವನ್ನು ಯಶಸ್ವಿಗೊಳಿಸಿ. ಭಾರತಮಾತಾ ಕೀ ಜಯ್ !” ಎಂದು ಕರೆ ನೀಡಿದರು.

ಸತ್ಯಾಗ್ರಹ ಎಂಬ ಹೆಸರಿನ ಈ ಹೋರಾಟದ ಪ್ರಾರಂಭ ( ೧೯೪೮ರ ಡಿಸೆಂಬರ್ ೯ ರಂದು ) ಆಗುತ್ತಿದ್ದಂತೆ ಇದೊಂದು ನಾಲ್ಕೈದು ಸಾವಿರ ಬಾಲಕರ ಹೋರಾಟ ಎಂದು ನಾಯಕರು ತಮಾಷೆ ಮಾಡಿದ್ದರು. ಆದರೆ ಯಾವುದೇ ಕಾಂಗ್ರಸ್ ಆಂದೋಲನಕ್ಕಿಂತಲೂ ಇದು ದೊಡ್ಡದಾಗಿತ್ತು. ೭೭,೦೯೦ ಸ್ವಯಂಸೇವಕರನ್ನು  ಬೇರೆ ಬೇರೆ ಸೆರೆಮನೆಗಳಲ್ಲಿ ಇಡಲಾಗಿತ್ತು. ಇದರ ಜೊತೆಯಲ್ಲಿ ಸ್ವಯಂಸೇವಕರ ಅಭೂತಪೂರ್ವ ಅಹಿಂಸಾತ್ಮಕ ನಡವಳಿಕೆಯನ್ನು, ಪೋಲಿಸರ ಬರ್ಬರ ಅತ್ಯಾಚಾರಗಳನ್ನು ಶಾಂತಿಯಿಂದ ಸಹಿಸಿಕೊಳ್ಳುವ ಅತುಲನೀಯ ಮನಃಸ್ಥೈರ್ಯವನ್ನೂ ಜನತೆ ನೋಡಿತು.

## 3.7 ವಿಶ್ವದಲ್ಲೇ ಸಾಟಿಯಿಲ್ಲದ ಉದಾಹರಣೆ

ಇದನ್ನೆಲ್ಲ ನೋಡುತ್ತಿದ್ದ ಕೆಲವು ತ್ರಯಸ್ಥ ವ್ಯಕ್ತಿಗಳು ಮುಂದೆ ಬಂದು ಸರಕಾರದ ಜೊತೆ ಮಾತುಕತೆ ನಡೆಸಲು ವಾತಾವರಣ ಅನುಕೂಲವಾಗುವುದಕ್ಕಗಿ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು. ಗುರೂಜಿಯವರು ಅದರಂತೆಯೇ ಸ್ವಯಂಸೇವಕರಿಗೂ ತಿಳಿಸಿದರು. ಈ ಮಧ್ಯಸ್ಥಿಕೆಗಾರರಲ್ಲಿ ಚನ್ನೈನ ಪ್ರಖ್ಯಾತ ಉದಾರವಾದಿ ಕಾನೂನು ತಜ್ಞ ಶ್ರೀ ಟಿ.ಆರ್. ವೆಂಕಟರಾಮಾಶಾಸ್ತ್ರಿಗಳಿದ್ದರು. ಮಧ್ಯಸ್ಥಿಕೆಯ ಎಲ್ಲ ಪ್ರಯತ್ನಗಳೂ ವಿಫಲವಾಗುತ್ತಿವೆ ಎನಿಸಿದಾಗ ಅವರು ಪತ್ರಿಕೆಗಳಿಗೆ ಕೊಟ್ಟ ತಮ್ಮ ಒಂದು ವಿಸ್ತೃತ ಹೇಳಿಕೆಯ ಕೊನೆಯಲ್ಲಿ “ ಈ ನಿರ್ಬಂಧ ಅನ್ಯಾಯದ್ದು, ನಾಗರಿಕರ ಮೂಲಭೂತ ಹಕ್ಕುಗಳ ಉಲ್ಲಂಘನೆ ಮತ್ತು ಅವಿವೇಕದಿಂದ ಕೂಡಿದ್ದು” ಎಂದು ಸ್ಪಷ್ಟವಾಗಿ ಹೇಳಿದ್ದರು.

ಕೊನೆಗೂ ಸರಕಾರಕ್ಕೆ “ತನ್ನ ನಡವಳಿಕೆ ಅನ್ಯಾಯದ್ದೆಂದು ಜನತೆಗೆಲ್ಲಾ ಸ್ಪಷ್ಟವಾಗತೊಡಗಿದೆ” ಎಂಬ ಅರಿವಾದಾಗ ಸಂಘವು ತನ್ನ ಲಿಖಿತ ಸಂವಿಧಾನವನ್ನು ಕೊಟ್ಟಿದೆ ಎಂಬ ಕಾರಣ ಕೊಟ್ಟು ಪ್ರತಿಬಂಧವನ್ನು ೧೨ ಜುಲೈ ೧೯೪೯ರಂದು ತೆಗೆದುಹಾಕಿತು. ಪ್ರತಿಬಂಧ ಹಾಕುವಾಗ ಸರಕಾರ ಗಾಂಧಿಹತ್ಯೆಯ ಆರೋಪದಿಂದ ಮೊದಲ್ಗೊಂಡು ಅನೇಕ ರೀತಿಯ ಆಪಾದನೆಗಳನ್ನು ಮಾಡಿತ್ತು. ಆದರೆ ಪ್ರತಿಬಂಧ ತೆಗೆಯುವಾಗ ಇದಕ್ಕೆ ಸಂಬಂಧವೇ ಇಲ್ಲದ ಬೇರೊಂದು ಕಾರಣ ಕೊಟ್ಟಿತೆಂಬುದನ್ನು ಗಮನಿಸಬೇಕು. ಶ್ರೀ ಗುರೂಜಿಯವರ ಸಹಿತ ಎಲ್ಲ ಸ್ವಯಂಸೇವಕರೂ ಬಿಡುಗಡೆಗೊಂಡರು. ಶ್ರೀ ಗುರೂಜಿಯವರಿಗೆ ಕಳಿಸಿದ ಸಂದೇಶದಲ್ಲಿ ಸರ್ದಾರ್ ಪಟೇಲರು “ ಸಂಘದ ಮೇಲಿನ ನಿರ್ಬಂಧ ಹಿಂತೆಗೆದುಕೊಳ್ಳಲ್ಪಟ್ಟಿದ್ದರಿಂದ ನನಗೆ ಆಗಿರುವ ಸಂತೋಷವನ್ನು ಆ ಸಮಯದಲ್ಲಿ ನನ್ನ ಜೊತೆಯಲ್ಲಿದ್ದವರು ಮಾತ್ರ ವರ್ಣಿಸಬಲ್ಲರು... ನಿಮಗೆ ನನ್ನ ಶುಭಕಾಮನೆಗಳು” ಎಂದಿದ್ದಾರೆ.

ಒಂದೆಡೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಕಾರಣದಿಂದ ಜನತೆಯ ಶ್ರದ್ಧೆಯಿಂದ ಅಧಿಕಾರಕ್ಕೇರಿಸಲ್ಪಟ್ಟವರ ರಾಜಶಕ್ತಿ; ಅದರ ಕೈಯಲ್ಲಿ ಸೈನ್ಯ ಮತ್ತು ಪೋಲಿಸರ ಅಪಾರ ಶಕ್ತಿ, ಪ್ರಚಾರ ಪ್ರಸಿದ್ಧಿಯ ಎಲ್ಲ ಸಾಧನಗಳು. ಇವೆಲ್ಲವನ್ನು ಉಪಯೋಗಿಸಿ ಒಬ್ಬ ಅತಿ ಸಾಮಾನ್ಯನಂತಿರುವ ವ್ಯಕ್ತಿಯನ್ನು ಹತ್ತಿಕ್ಕುವ ಪ್ರಯತ್ನ. ಆ ವ್ಯಕ್ತಿಗಾದರೋ ತನ್ನ ಸ್ವೀಕೃತ ಕಾರ್ಯದ ಸತ್ಯ, ನ್ಯಾಯಗಳ ವಿಜಯದ ಬಗ್ಗೆ ಅಚಲ ವಿಶ್ವಾಸ, ‘ಯತೋ ಧರ್ಮಃ ತತೋ ಜಯಃ’ ಎಂಬ ಜ್ಞಾನಿಗಳ ಮಾತಿನಲ್ಲಿ ಪೂರ್ಣಶ್ರದ್ಧೆ ಮತ್ತು ಕೆಲವೇ ಸಾವಿರ ಕಿಶೋರ - ತರುಣ ಸಮರ್ಪಿತ ಕಾರ್ಯಕರ್ತರ ಬಲ; ಉಳಿದ ಯಾವುದೇ ಸಾಧನ ಸಂಪತ್ತುಗಳ ಸುಳಿವೂ ಇಲ್ಲ. ಇಂತಹ ಎರಡು ಬಣಗಳ ಮಧ್ಯದ ಹೋರಾಟದಲ್ಲಿ ಆ ವ್ಯಕ್ತಿಗೇ ಗೆಲುವಾಗುವ ಉದಾಹರಣೆ ವಿಶ್ವದಲ್ಲಿ ಇನ್ನೊಂದಿಲ್ಲ.

ಈ ಎಲ್ಲ ಘಟನಾವಳಿಗಳನ್ನು  ಓದುವಾಗ ಸರಕಾರದಲ್ಲಿರುವ ವ್ಯಕ್ತಿಗಳಿಗೆ  ಸಂಘ ನಿಜವಾಗಿಯೂ ಅಪರಾಧಿ ಎಂಬ ಖಚಿತ ವಿಶ್ವಾಸವಿತ್ತೇ? ಎಂಬ ಸಂಶಯ ಬರುವುದು ಸಹಜ. ಇದಕ್ಕೆ ಅಂದಿನ ಗೃಹಮಂತ್ರಿ ಸರ್ದಾರ್ ಪಟೇಲರ ಅಭಿಪ್ರಾಯ ಉತ್ತರವಾಗುತ್ತದೆ. ಗಾಂಧೀಜಿಯವರ ಹತ್ಯೆಯ ಒಂದು ತಿಂಗಳಿನ ಒಳಗೆ ೧೯೪೮ರ ಫೆಬ್ರವರಿ ೨೭ರಂದು ಪ್ರಧಾನಿ ನೆಹರೂ ಅವರಿಗೆ ಬರೆದ ಪತ್ರದಲ್ಲಿ - “ಗಾಂಧಿ ಹತ್ಯಾಕಾಂಡದ ಬಗ್ಗೆ ನಾನೇ ಗಮನಕೊಟ್ಟು ಪೂರ್ತಿ ಮಾಹಿತಿ ಪಡೆದಿದ್ದೇನೆ. ಅದಕ್ಕೆ ಸಂಬಂಧಿಸಿದ ಎಲ್ಲ ಅಪರಾಧಿ ವ್ಯಕ್ತಿಗಳನ್ನು ಬಂಧಿಸಲಾಗಿದೆ. ಅವರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಒಬ್ಬನೇ ಒಬ್ಬ ವ್ಯಕ್ತಿಯೂ ಇಲ್ಲ” ಎಂದು ಹೇಳಿದ್ದರು.

## 3.8 ಅದ್ಭುತ ಮಾನಸಿಕ ಸ್ಥೈರ್ಯ

ಈ ಅಗ್ನಿ ಪರೀಕ್ಷೆಯಲ್ಲಿ ನಿಷ್ಕಲಂಕವಾಗಿ ಹೊರಬಂದ ಸಂಘದ ಬಗ್ಗೆ ಅಲ್ಲಿಯವರೆಗೆ ಹತ್ತಿಕ್ಕಲ್ಪಟ್ಟಿದ್ದ ಅಪಾರವಾದ ಜನಾದರವು ಒಮ್ಮೆಗೇ ಸ್ಫೋಟಗೊಂಡಂತಾಯಿತು.ಶ್ರೀ ಗುರೂಜಿಯವರ ಸ್ವಾಗತಕ್ಕಾಗಿ ದಿಲ್ಲಿಯಲ್ಲಿ ಸೇರಿದ್ದ ಪ್ರಚಂಡ ಜನಸಾಗರವನ್ನು ನೋಡಿದ ಬಿ.ಬಿ.ಸಿ. “ಶ್ರೀ ಗುರೂಜಿ ಭಾರತೀಯ ಕ್ಷಿತಿಜದಲ್ಲಿ ಉದಿಸಿದ ಪ್ರಕಾಶಮಾನವಾದ ನಕ್ಷತ್ರ. ಇಷ್ಟೊಂದು  ಜನರನ್ನು  ಆಕರ್ಷಿಸಬಲ್ಲ ಇನ್ನೊಬ್ಬ ವ್ಯಕ್ತಿಯೆಂದರೆ ಪಂಡಿತ ನೆಹರೂ ಮಾತ್ರ” ಎಂದು ವರ್ಣಿಸಿತು. ಶ್ರೀ ಗುರೂಜಿಯವರ ಈ ಭಾರತಯಾತ್ರೆ ೧೯೪೯ರ ಆಗಸ್ಟ್ ನಿಂದ ಪ್ರಾರಂಭವಾಗಿ ೧೯೫೦ರ ಜನವರಿವರೆಗೆ ನಡೆಯಿತು. ಆಗಸ್ಟ್ ೨೦ರ ಮೊದಲು ಸರದಾರ ಪಟೇಲರ ಅಸ್ವಸ್ಥತೆಯ ವಿಷಯ ತಿಳಿದಕೂಡಲೇ ಅವರನ್ನು ನೋಡಲು ಶ್ರೀ ಗುರೂಜಿ ಮುಂಬಯಿಗೆ ಹೋದರು. ಈ ಭೇಟಿಯಲ್ಲಿ ಸರದಾರ ಪಟೇಲರು ಕ್ರೈಸ್ತ ಮಿಶನರಿಗಳ ಬೆಳೆಯುತ್ತಿರುವ ಚಟುವಟಿಕೆಗಳನ್ನು ತಡೆಯುವುದಕ್ಕಾಗಿ ಹಿಂದು ಸಮಾಜದ ಪಚನಶಕ್ತಿ ಹೆಚ್ಚಿಸಬೇಕೆಂದರು. ಪಾಕಿಸ್ತಾನ ನಿರ್ಮಾಣದ ನಂತರದ ಸಮಸ್ಯೆಗಳು ಹಾಗೂ ಘಟನೆಗಳನ್ನು ಉಲ್ಲೇಖಿಸಿ “ ಹಳೆಯದನ್ನೆಲ್ಲ ಮರೆತು ದೇಶದ ಭವಿಷ್ಯವನ್ನು ಚಿಂತಿಸಬೇಕು” ಎಂದರು.
ದೇಶಾದ್ಯಂತ ಗುರೂಜಿಯವರ ಸ್ವಾಗತ ಕಾರ್ಯಕ್ರಮಗಳು ಉತ್ಸಾಹದಿಂದ ನಡೆಯುತ್ತಿದ್ದರೆ ಕೊಲ್ಲಾಪುರ - ಸಾಂಗ್ಲಿ ಯಾತ್ರೆಯಲ್ಲಿ ಇದಕ್ಕೆ ವಿರುದ್ಧವಾದ ಘಟನೆ ನಡೆಯಿತು. ಸಂಘದ ಬಗ್ಗೆ ವಿಪರೀತ ವಿರೋಧಿ ಭಾವನೆ ಹೊಂದಿದ್ದ ನೂರಾರು ಜನರು ರಸ್ತೆಯ ಎರಡೂ ಬದಿಗಳಲ್ಲಿ ಅಡಗಿ ಕುಳಿತಿದ್ದರು. ಗುರೂಜಿಯವರ ವಾಹನ ಅಲ್ಲಿಗೆ ಬರುತ್ತಿದ್ದಂತೆ ಅದರ ಮೇಲೆ ಆಕ್ರಮಣ ಮಾಡಿ ಅವರನ್ನು ಸಾಯಿಸುವ ಹೊಂಚು. ಆದರೆ ಗುರೂಜಿ ಅವರ ಕಾರು ಅದೇ ದಾರಿಯಲ್ಲಿ ಅತ್ಯಂತ ವೇಗವಾಗಿ ಹೊರಟುಹೋಯಿತು. ಆ ವೇಗಕ್ಕೆ  ಗುಂಡಾಗಳು ಹೆದರಿ ಚೆಲ್ಲಾಪಿಲ್ಲಿಯಾದರು. ಗುರೂಜಿಯವರ ಕಾರು ಸುರಕ್ಷಿತವಾಗಿ ಪಾರಾಯಿತು. ಇಂತಹ ಎಲ್ಲ ಪ್ರಸಂಗಗಳಲ್ಲಿಯೂ ಗುರೂಜಿಯವರು ಶಾಂತತೆಯ ಮೂರ್ತಿಯಂತೆಯೇ ಕುಳಿತಿರುತ್ತಿದ್ದರು.

## 3.9 ಸಮಾಜದೇವನ ಪರೀಕ್ಷೆ

ಮುಂದೊಮ್ಮೆ ಈ ಘಟನೆಯ ಉಲ್ಲೇಖ ಮಾಡುತ್ತಾ ತಮ್ಮ ಒಂದು ಪತ್ರಿಕಾಲೇಖನದಲ್ಲಿ ಶ್ರೀ ಗುರೂಜಿಯವರು “ಭಗವಂತ ತನ್ನ ಭಕ್ತರನ್ನು ಆನಂದದ ಸಮಯದಲ್ಲಿ ಮಾಡಿದಂತೆ, ಕಷ್ಟದ ಸಮಯದಲ್ಲೂ ಪರೀಕ್ಷೆ ಮಾಡುತ್ತಾನೆ. ಅದೇ ರೀತಿ ಹಿಂದುಸಮಾಜವೂ ತನ್ನ ಭಕ್ತರಾದ ನಮ್ಮನ್ನು ಎರಡೂ ಸಂದರ್ಭಗಳಲ್ಲಿ ಪರೀಕ್ಷೆ ಮಾಡಿದೆ. ಪರೀಕ್ಷೆಯಲ್ಲಿ ಉತ್ತೀರ್ಣನಾದ ಭಕ್ತನ ಮೇಲೆ ಭಗವಂತ ಪ್ರಸನ್ನನಾಗುವಂತೆ ಸಮಾಜವೂ ನಮ್ಮನ್ನು ಆಶೀರ್ವದಿಸುತ್ತದೆ” ಎಂದಿದ್ದಾರೆ. ಅದೇ ರೀತಿ ಆಯಿತು ಕೂಡಾ. ಕೆಲವು ವರ್ಷಗಳ ನಂತರ ಅದೇ ಸಾಂಗ್ಲಿ, ಕೊಲ್ಲಾಪುರ ಕ್ಷೇತ್ರದಲ್ಲಿ ಶ್ರೀ ಗುರೂಜಿಯವರ ಪ್ರವಾಸ ಆಯಿತು. ಈ ಮೊದಲು ಕಲ್ಲು ಹೊಡೆಯಲು ಬಂದಿದ್ದವರೇ ಈಗ ಹೂಮಳೆಗರೆಯಲು ಬಂದಿದ್ದರು. ಇಂತಹ ಅಭೂತಪೂರ್ವ ಸಂದರ್ಭದಲ್ಲಿ ಜನತೆಗೂ, ಸ್ವಯಂಸೇವಕರಿಗೂ ಶ್ರೀ ಗುರೂಜಿಯವರು ಮಾಡಿದ ಮಾರ್ಗದರ್ಶನ ವಿಶ್ವದ ಇತಿಹಾಸದಲ್ಲಿ ಅಮೂಲ್ಯವಾದದ್ದು. ಆಗ ತಾನೇ ಸ್ವಾತಂತ್ರ್ಯ ಪಡೆದಿದ್ದ ದೇಶದ ಸಂಧಿಕಾಲದಲ್ಲಿ  ರಾಷ್ಟ್ರಜೀವನಕ್ಕೆ ಅತ್ಯವಶ್ಯಕವಾಗಿರುವ ಸಮನ್ವಯ ಮತ್ತು ಸೌಹಾರ್ದದ ವಾತಾವರಣ ಇರಬೇಕೆಂಬುದಕ್ಕಾಗಿ ಪ್ರತಿಯೊಂದೂ ಕಡೆ ಅವರು “ಈ ಮೊದಲಿನ ಕಹಿ ಘಟನೆಗಳನ್ನೆಲ್ಲ ನಮ್ಮ ಮನಸ್ಸಿನಿಂದ ತೆಗೆದುಹಾಕೋಣ. ತಿನ್ನುತ್ತಿರುವಾಗ ನಮ್ಮ ಹಲ್ಲುಗಳೇ ನಾಲಿಗೆಯನ್ನು ಕಡಿಯಿತೆಂದು ಹಲ್ಲನ್ನು ತೆಗೆದುಹಾಕಲಾಗುತ್ತದೆಯೇ?” ಎಂದು ಹೇಳುತ್ತಿದ್ದರು.
ಸಾರಾಂಶದಲ್ಲಿ : ಒಂದು ಕಡೆ ಎಲ್ಲ ತರಹದ ಆತಂಕ, ಭಯ, ದಮನಚಕ್ರಗಳ ಮಧ್ಯದಲ್ಲಿ ಅವರು ಬಂಡೆಯಂತೆ ನಿಂತು ಮನಃಸ್ಥೈರ್ಯವನ್ನು ಪ್ರಕಟಿಸಿದರು.ಇನ್ನೊಂದು ಕಡೆ ಆ ಪ್ರಸಂಗ ಮುಗಿಯುತ್ತಲೇ ತಮ್ಮ ಕಡೆಯ ವಿಜಯ

ಮತ್ತು ಆನಂದೋತ್ಸವಗಳ ಮಧ್ಯೆಯೂ ಅದೇ ಮಾನಸಿಕ ಸಂಯಮವನ್ನು ತೋರಿದರು. ಈ ಎರಡೂ ಪ್ರಸಂಗಗಳಲ್ಲಿ ರಾಷ್ಟ್ರಹಿತವನ್ನೇ ಅವರು ಪ್ರಮುಖವಾಗಿ ಗಮನದಲ್ಲಿಟ್ಟಿದ್ದರು.
ಹೀಗೆ ಎರಡು ಪರಸ್ಪರ ವಿರುದ್ಧ ಸಂದರ್ಭಗಳಲ್ಲಿ ರಾಷ್ಟ್ರಹಿತದ ಅದ್ಭುತ ಉದಾಹರಣೆ ತೋರಿಸಿದ ನಿಜವಾದ ರಾಷ್ಟ್ರನಾಯಕ ಶ್ರೀ ಗುರೂಜಿ.

## 3.10 ಕಾಶ್ಮೀರವನ್ನು ರಕ್ಷಿಸುವಲ್ಲಿ

ರಾಷ್ಟ್ರನಾಯಕರಾಗಿ ರಾಷ್ಟ್ರದ ಸುರಕ್ಷೆ ಮತ್ತು ಹಿತಸಂವರ್ಧನೆಯಲ್ಲಿ ಅತ್ಯಂತ ಜಾಗರೂಕ ಪಾತ್ರ ಶ್ರೀ ಗುರೂಜಿಯವರದು. ದೇಶ ವಿಭಜನೆ ಆಗುತ್ತಿದ್ದಂತೆಯೇ ೧೯೪೭ರ ಅಕ್ಟೋಬರಿನಲ್ಲಿ ಪಾಕಿಸ್ತಾನ ಕಾಶ್ಮೀರದೊಳಗೆ ತನ್ನ ಸೈನ್ಯ ನುಗ್ಗಿಸಿತು. ಭಾರತೀಯ ಸೈನ್ಯದಲ್ಲಿದ್ದ ಉನ್ನತ ಬ್ರಿಟಿಷ್ ಸೇನಾಧಿಕಾರಿಗಳ ಸಹಾಯದೊಂದಿಗೆ ಕಾಶ್ಮೀರ ನುಂಗುವ ಸಂಚನ್ನು ಅದು ಹೂಡಿತ್ತು. ಆ ಪ್ರದೇಶದಲ್ಲಿದ್ದ ಜನಗಳ ಮೇಲೆ ಭೀಷಣ ದೌರ್ಜನ್ಯ ಪ್ರಾರಂಭವಾಯಿತು. ಪಾಕ್ ಸೈನ್ಯ ಕಾಶ್ಮೀರದ ಭೂಭಾಗವನ್ನು ವಶಪಡಿಸಿಕೊಳ್ಳತೊಡಗಿತು. ದೌರ್ಭಾಗ್ಯದಿಂದ ಆ ಸಮಯದಲ್ಲಿ ಕಾಶ್ಮೀರವನ್ನು ಭಾರತದಲ್ಲಿ ವಿಲೀನಗೊಳಿಸುವುದರ ಬಗ್ಗೆ ಅನೇಕ ರೀತಿಯ ಶಂಕೆಗಳಿಂದಾಗಿ ಅಲ್ಲಿನ ಮಹಾರಾಜರ ಮನಸ್ಸು ಡೋಲಾಯಮಾನವಾಗಿತ್ತು. ಈ ಸಮಯದಲ್ಲಿ ಸರ್ದಾರ ಪಟೇಲರಿಗೆ 'ರಾಜರನ್ನು ಭೆಟ್ಟಿಯಾಗಿ ಅವರ ಮನಸ್ಸನ್ನು ಭಾರತಕ್ಕೆ ಅನುಕೂಲವಾಗುವಂತೆ ಪರಿವರ್ತಿಸಲು ಸಮರ್ಥ ವ್ಯಕ್ತಿ ಶ್ರೀ ಗುರೂಜಿ ಮಾತ್ರ ಎನಿಸಿತು. ಅದಕ್ಕಾಗಿ ಶ್ರೀ ಗುರೂಜಿಯವರನ್ನು ಕಾಶ್ಮೀರಕ್ಕೆ ಕಳಿಸಲಾಯಿತು.
ಕಾಶ್ಮೀರದ ಮಹಾರಾಜ ಹರಿಸಿಂಹ ಮತ್ತು ಮಹಾರಾಣಿ ತಾರಾ ಇಬ್ಬರೂ ಕಾಶ್ಮೀರಿ ಶಾಲಿನ ಉಡುಗೊರೆ ನೀಡಿ ಶ್ರೀ ಗುರೂಜಿಯವರನ್ನು ಸ್ವಾಗತಿಸಿದರು. ೧೯೪೭ರ ಅಕ್ಟೋಬರ್ ೧೮ ರಂದು ಶ್ರೀ ಗುರೂಜಿಯವರು ಮಹಾರಾಜರೊಂದಿಗೆ ಭೇಟಿಯಾಗಿ ಅವರ ಮನಸ್ಸಿನ ಸಂದೇಹವನ್ನು ನಿವಾರಿಸಿ ಭಾರತದಲ್ಲಿ ತಮ್ಮ ರಾಜ್ಯವನ್ನು ವಿಲೀನಗೊಳಿಸಲು ಅವರನ್ನು ಸಿದ್ಧಗೊಳಿಸಿದರು. ಆನಂತರವೇ ಭಾರತೀಯ ಸೇನೆಯನ್ನು ಕಾಶ್ಮೀರಕ್ಕೆ ಕಳಿಸಲಾಯಿತು. ಭಾರತೀಯ ಸೇನೆ ಆಕ್ರಮಕರನ್ನು ಹಿಂದಕ್ಕೆ ಅಟ್ಟಿ ಪಾಕಿನ ಹಿಡಿತದಿಂದ ಕಾಶ್ಮೀರವನ್ನು ಮುಕ್ತಗೊಳಿಸುತ್ತಾ ಮುಂದುವರೆಯತೊಡಗಿತು. ಆದರೆ ನಮ್ಮ ಸೈನ್ಯ ಕಾಶ್ಮೀರವನ್ನು ಮುಕ್ತಗೊಳಿಸುವ ಮೊದಲೇ ಪಂಡಿತ ನೆಹರು ಯುದ್ಧ ವಿರಾಮ ಘೋಷಿಸಿದರು. ಕಾಶ್ಮೀರದ ದೊಡ್ಡಭಾಗ ಪಾಕಿಸ್ತಾನದ ವಶದಲ್ಲೇ ಉಳಿದುಹೋಯಿತು. ಆ ನಂತರ ಭಾರತ ಸರಕಾರ ಪಾಕ್ ಆಕ್ರಮಣದ ವಿಷಯವನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೆ ಒಯ್ದಾಗ ಶ್ರೀ ಗುರೂಜಿಯವರು ಎಚ್ಚರಿಕೆ ಕೊಟ್ಟರು -"ಇದೊಂದು ಆತ್ಮಘಾತುಕ ನಿರ್ಣಯ, ನಮಗೆ ನ್ಯಾಯದ ಬದಲು ತಪ್ಪು ನಿರ್ಣಯ ಕೊಡಲಾಗುತ್ತದೆ." ಹಾಗೇ ಆಯಿತು. ಈಗಲೂ ಆ ಪ್ರದೇಶ ಪಾಕಿಸ್ತಾನದ ಕೈಯಲ್ಲೇ ಇದೆ. ಅಲ್ಲಿಂದಲೇ ಅದು ಭಾರತದ ಮೇಲೆ ಉಗ್ರವಾದಿಗಳ ಮೂಲಕ ಅಘೋಷಿತ ಯುದ್ಧ ನಡೆಸುತ್ತಿದೆ.
೧೯೪೯ ರ ಕೊನೆಯಲ್ಲಿ ಪೂರ್ವಪಾಕಿಸ್ತಾನದಿಂದ ಲಕ್ಷಾಂತರ ಹಿಂದುಗಳು ನಿರಾಶ್ರಿತರಾಗಿ ಭಾರತಕ್ಕೆ ಬರತೊಡಗಿದರು. ಅವರ ಸಹಾಯಕ್ಕಾಗಿ ಶ್ರೀ ಗುರೂಜಿಯವರು "ವಾಸ್ತುಹಾರಾ ಸಹಾಯತಾ ಸಮಿತಿ" ಯನ್ನು ಪ್ರಾರಂಭಿಸಿದರು. ದೇಶದ ಜನರಿಗೆ ಸಹಾಯ ಮಾಡುವಂತೆ ಕರೆ ಕೊಟ್ಟರು. ಅದೇ ರೀತಿ ಅಸ್ಸಾಂನಲ್ಲಿ ಭೂಕಂಪವಾದಾಗಲೂ ದೇಶವಾಸಿಗಳಿಗೆ ಸಹಾಯ ಮಾಡಲು ಕರೆಕೊಟ್ಟರು.

# 4 ಸ್ಮೃತಿಮಂದಿರ : ಶ್ರೀ ಗುರೂಜಿಯವರ ಬಹುಮುಖ ಪ್ರತಿಭೆ

೧೯೪೦ ರ ಸಂಘಸ್ಥಾಪಕ ಡಾಕ್ಟರ್ ಜೀಯವರ ಅಂತ್ಯಸಂಸ್ಕಾರ ನಾಗಪುರದ ರೇಶಂಬಾಗ್ ಮೈದಾನದಲ್ಲಿ ಆಗಿತ್ತು. ಆ ಸ್ಥಳದಲ್ಲಿ ಅವರ ಒಂದು ಸಾಮಾನ್ಯ ಸಮಾಧಿ ನಿರ್ಮಿಸಲಾಗಿತ್ತು.ಸ್ವಯಂಸೇವಕರಿಗೂ ಉಳಿದವರಿಗೂ ಅದೊಂದು ಪ್ರೇರಣಾಸ್ಥಾನವಾಗಬೇಕು, ಅದಕ್ಕಾಗಿ ಅಲ್ಲಿ ಮಂದಿರದಂತಹ ಕಟ್ಟಡವೊಂದರ ನಿರ್ಮಾಣ ಆಗಬೇಕೆಂದು ಎಲ್ಲರ ಇಚ್ಛೆ ಇರುವುದು ಸ್ವಾಭಾವಿಕವೂ ಆಗಿತ್ತು. ಅದಕ್ಕಾಗಿ ಮಾಡಲಾದ ಸಮಿತಿಯ ಅಧ್ಯಕ್ಷರಾಗಿದ್ದರು ಶ್ರೀ ಗುರೂಜಿ. ಈ ನಿರ್ಮಾಣದ ಸಮಯದಲ್ಲಿ ಶ್ರೀ ಗುರೂಜಿಯವರ ಬಹುಮುಖ ಪ್ರತಿಭೆಯ ಹೊಸದೊಂದು ಮುಖ ಎಲ್ಲರಿಗೂ ತಿಳಿಯಿತು. ಭಾರತೀಯ ವಾಸ್ತು ಶಾಸ್ತ್ರದ ಸೂಕ್ಷ್ಮಜ್ಞಾನದ ಜೊತಯಲ್ಲಿ ಸೌಂದರ್ಯದೃಷ್ಟಿ, ಕಲಾತ್ಮಕ ಚಿಂತನೆ ಮತ್ತು ಸ್ಮೃತಿ ಮಂದಿರದ ಕಡೆ ನೋಡುವ ಅವರ ಚಿಂತನೆಯ ವಿಶೇಷ ಅನುಭವ ಎಲ್ಲರಿಗೂ ಆಯಿತು.

ಇದರ ಫಲವಾಗಿ ೧೯೬೨ ರ ಏಪ್ರಿಲ್ ೯ ರಂದು ಯುಗಾದಿಯ ಶುಭ ಮುಹೂರ್ತ ( ಡಾಕ್ಟರ್ ಜೀಯವರ ಜನ್ಮ ದಿನ)ದಂದು ಸ್ಮೃತಿಮಂದಿರದ ಉದ್ಘಾಟನೆ ಮಾಡಲಾಯಿತು. ಈ ಸಮಯದಲ್ಲಿ ದೇಶದ ಎಲ್ಲ ಕಡೆಗಳಿಂದಲೂ ಬಂದಿದ್ದ ಕಾರ್ಯಕರ್ತರು ಮತ್ತು ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡುತ್ತಾ ಶ್ರೀ ಗುರೂಜಿಯವರು ಹೇಳಿದ್ದು - "ಸ್ಮೃತಿಮಂದಿರ ನಿರ್ಮಾಣ ಎಂದರೆ ನಾವು ವ್ಯಕ್ತಿಪೂಜಕರು ಎಂದು ಅರ್ಥವಲ್ಲ. ನಾವೆಂದೂ ಡಾಕ್ಟರ್ ಜೀಯವರಿಗೆ ಜಯಕಾರ ಹಾಕಿಲ್ಲ. ಅವರ ಜೀವನದ ಸ್ಮರಣೆಯಿಂದ ನಮಗೆ ಧ್ಯೇಯದ ನೆನೆಪಾಗುತ್ತದೆ ಮತ್ತು ಅವರ ರಾಷ್ಟ್ರಭಕ್ತಿಯಿಂದ ಕೂಡಿದ ಅಂತರ್ಬಾಹ್ಯ ವಿಶುದ್ಧ ಜೀವನಾದರ್ಶ ನಮಗೆ ನೆನಪಾಗುತ್ತದೆ.ಇದರ ನೆನೆಪು ನಮ್ಮಲ್ಲಿ ಯಾವಾಗಲೂ ಜಾಗೃತವಾಗಿರಲಿ ಎಂಬ ಕಾರಣಕ್ಕಾಗಿ ಸ್ಮೃತಿಮಂದಿರ ಕಟ್ಟಲಾಗಿಯೇ ಹೊರತು ಪೂಜಾಸ್ಥಾನವಾಗಿ ಅಲ್ಲ".

## 4.1 ಮಾತೃ ವಿಯೋಗ : ಶಂಕರಾಚಾರ್ಯರಿಂದ ಸಾಂತ್ವನ

ಶ್ರೀ ಗುರೂಜಿಯವರ ಮೇಲೆ ಅವರ ತಾಯಿಯವರಿಗೆ ತುಂಬಾ ಪ್ರೀತಿ. ೧೯೬೨ ರಲ್ಲಿ ಅವರು ನಿಧನರಾದಾಗ (ತಂದೆಯವರು ಮೊದಲೇ ನಿಧನರಾಗಿದ್ದರು) ಗುರೂಜಿಯವರಿಗೆ ತುಂಬಾ ಆಘಾತ. ಈ ಸಮಯದಲ್ಲಿ ಅವರಿಗೆ ಕಂಚಿ ಕಾಮಕೋಟಿ ಮಠದ ಶಂಕರಾಚಾರ್ಯ ಪರಮಾಚಾರ್ಯರ ಸಂದೇಶದಿಂದ ಸಮಾಧಾನ ಸಿಕ್ಕಿತು. ಅದರಲ್ಲಿ " ತಮ್ಮ ಎಲುಬು ಚರ್ಮಗಳ ದೇಹಧಾರಿ ತಾಯಿಯವರ ದೇಹಾವಸಾನ ಆಗಿದೆ. ಆದರೆ ಅನಾದಿಕಾಲದಿಂದ ಅನಂತ ಕಾಲದವರೆಗೂ ನಿಮ್ಮಂತಹ ಕೋಟಿ-ಕೋಟಿ ಸುಪುತ್ರರಿಗೆ ಜನನಿಯಾಗಿರುವ ಪರಮ ಮಂಗಲಮಯಿಯಾದ ಭಾರತಮಾತೆ ಇದ್ದಾಳೆ. ತಾವಂತೂ ಎಲ್ಲವನ್ನೂ ಸಮರ್ಪಿಸಿ ನಿರಪೇಕ್ಷ ಭಾವದಿಂದ ಭಾರತಮಾತೆಯ ಸೇವೆಯಲ್ಲಿ ತೊಡಗಿದ್ದೀರಿ. ಆದ್ದರಿಂದ ತಮಗೆ ಮಾತೃವಿಯೋಗ ಆಗುವುದಿಲ್ಲ" ಎಂದು ಬರೆದಿದ್ದರು.

## 4.2 ಚೀನಾದ ಆಕ್ರಮಣ : ಭವಿಷ್ಯದರ್ಶಿ

ಚೀನಾವು ೧೯೫೦ ರ ಪ್ರಾರಂಭದಿಂದಲೇ ಭಾರತದ ಉತ್ತರ ಮತ್ತು ಈಶಾನ್ಯದ ಗಡಿಗಳಲ್ಲಿ ಗುಪ್ತವಾಗಿ ಸೈನಿಕರಿಗಾಗಿ ರಸ್ತೆ ನಿರ್ಮಾಣ, ಅಲ್ಲಿನ ಭೂಮಿಯನ್ನು ಕಬಳಿಸುವ ಕೆಲಸಗಳನ್ನು ಪ್ರಾರಂಭಿಸಿತ್ತು. ೧೯೫೦ ರಲ್ಲಿ ಪತ್ರಿಕೆಯ ಲೇಖನವೊಂದರಲ್ಲಿ ಶ್ರೀ ಗುರೂಜಿಯವರು "ಚೀನಾದ್ದು ವಿಸ್ತಾರವಾದೀ ಸ್ವಭಾವ. ಸದ್ಯದಲ್ಲಿಯೇ ಅದು ಭಾರತದ ಮೇಲೆ ಆಕ್ರಮಣ ಮಾಡಲಿದೆ"ಎಂದಿದ್ದರು. ಚೀನಾ ಟಿಬೆಟ್ ನಲ್ಲಿ ಸೈನಿಕ ಕಾರ್ಯಾಚರಣೆ ನಡೆಸುತ್ತಿದ್ದ ಸಂದರ್ಭ ಅದು. ಆ ದಿನಗಳಲ್ಲಿ ಗುರೂಜಿ ಅನೇಕ ಬಾರಿ "ಚೀನಾಕ್ಕೆ ಟಿಬೆಟ್ಟನ್ನು ಉಡುಗೊರೆಯಾಗಿ ಕೊಟ್ಟು ಭಾರತ ಭಾರೀ ತಪ್ಪು ಮಾಡಿದೆ. ಬ್ರಿಟಿಷರೂ ಮಾಡದ ತಪ್ಪನ್ನು ದೂರದರ್ಶಿತ್ವ ಇಲ್ಲದ ಭಾರತ ಸರ್ಕಾರ ಮಾಡಿದೆ" ಎಂದು ಎಚ್ಚರಿಕೆಯನ್ನು ಕೊಟ್ಟಿದ್ದರು.

ಆ ದಿನಗಳಲ್ಲಿ ಪಂ. ನೆಹರೂ ಚೀನಾದ ಪ್ರಧಾನಮಂತ್ರಿ ಚೌ ಎನ್ ಲಾಯ್ ಜೊತೆ ಕೈ ಕೈ ಸೇರಿಸಿ ದೇಶಾದ್ಯಂತ ಪ್ರವಾಸ ಮಾಡುತ್ತಿದ್ದರು. 'ಹಿಂದೀ-ಚೀನೀ ಭಾಯೀ ಭಾಯೀ' ಮತ್ತು ಪರಸ್ಪರ ಸೌಹಾರ್ದಪೂರ್ಣ ಸೋದರತ್ವದ 'ಪಂಚಶೀಲ' ದ ಘೋಷಣೆ ಹಾಕುತ್ತಿದ್ದರು. ಸಾಮಾನ್ಯ ಜನ ಈ ಘೋಷಣೆಗೆ ಮರುಳಾಗುತ್ತಿದ್ದುದು ಸ್ವಾಭಾವಿಕ. ಆದರೆ ಆ ಸಮಯದಲ್ಲಿ ಚೀನದ ಆಕ್ರಮಣದ ಸೂಚನೆಕೊಟ್ಟು ಎಚ್ಚರಿಕೆಯ ಘಂಟೆ ಬಾರಿಸಿದ ಏಕಮಾತ್ರ ನಾಯಕ ಶ್ರೀ ಗುರೂಜಿ. ಆನಂತರ ೧೯೬೨ರ ಅಕ್ಟೋಬರ್ ನಲ್ಲಿ ಚೀನಾವು ಅರುಣಾಚಲಪ್ರದೇಶದ ಮೇಲೆ ನೇರ ಆಕ್ರಮಣ ನಡೆಸಿ ೬೪,೦೦೦ ಚದರ ಕಿ.ಮೀ. ಪ್ರದೇಶವನ್ನು ವಶಪಡಿಸಿಕೊಂಡಿತು. ಆಗ ಪಂಡಿತ ನೆಹರೂ ತಾವು ಮೈಮರೆತಿದ್ದೆವೆಂದು ಒಪ್ಪಿಕೊಂಡರು. ಆಗಲೂ ಶ್ರೀ ಗುರೂಜಿ ಸುಮ್ಮನೆ ಕುಳಿತಿರಲಿಲ್ಲ. ಅವರು ದೇಶದ ಜನರ ಮನೋಬಲ ಎತ್ತರಿಸುವುದಕ್ಕಾಗಿ ಸರಕಾರಕ್ಕೆ ಎಲ್ಲ ರೀತಿಯ ಸಹಾಯ ಮಾಡಲು ಕರೆ ಕೊಡೂತ್ತಿದ್ದರು. ಅದೇ ಸಮಯದಲ್ಲಿ ಶ್ರೀ ಗುರೂಜಿಯವರು ದೇಶದ ಸುರಕ್ಷೆಯ ದೃಷ್ಟಿಯಿಂದ ಇನ್ನೊಂದು ಮಹತ್ವಪೂರ್ಣ ಸೂಚನೆ ಕೊಟ್ಟರು. ಭಾರತ ಸರ್ಕಾರವು ಕೂಡಲೇ ಪರಮಾಣು ಬಾಂಬ್ ತಯಾರಿಸಬೇಕೆಂದು ಸಾರ್ವಜನಿಕವಾಗಿ ಹೇಳಿದರು. ಆದರೆ ದೌರ್ಭಾಗ್ಯದಿಂದ ಸರ್ಕಾರ ಈ ಸೂಚನೆಯ ಕಡೆ ಗಮನವನ್ನೇ ಕೊಡಲಿಲ್ಲ . ಗಮನ ಕೊಟ್ಟಿದ್ದರೆ ಚೀನಾದ ಭಯದಿಂದ ಈ ಹೊತ್ತಿಗೆ ನಾವು ಮುಕ್ತರಾಗುತ್ತಿದ್ದೆವು.
ಚೀನೀ ಆಕ್ರಮಣ ಪ್ರಾರಂಭ ಆಗುತ್ತಿದ್ದಂತೆಯೇ ಶ್ರೀ ಗುರೂಜಿಯವರು ಮಾಡಿದ ಮಾರ್ಗದರ್ಶನದಂತೆಯೇ ಸ್ವಯಂಸೇವಕರು ಯುದ್ಧದ ಕಾರ್ಯಗಳಿಗೆ ಜನತೆಯ ಬೆಂಬಲ ಒದಗಿಸುವುದರಲ್ಲಿ ಮತ್ತು ಅವರ ಮನೋಬಲ ದೃಢಗೊಳಿಸುವುದರಲ್ಲಿ ತೊಡಗಿಕೊಂಡರು. ಅವರ ಸಾಮಯಿಕ ಸಹಕಾರದ ಮಹತ್ವವನ್ನು ಪಂ. ನೆಹರೂ ಕೂಡಾ ಒಪ್ಪಲೇಬೇಕಾಯಿತು. ೧೯೬೩ ರ ಗಣರಾಜ್ಯದಿನ ಪೆರೇಡಿನಲ್ಲಿ ಭಾಗವಹಿಸಲು ಕೆಲವು ಕಾಂಗ್ರಸ್ಸಿಗರ ವಿರೋಧವಿದ್ದರೂ ಸ್ವಯಂಸೇವಕರಿಗೆ ಅವರು ಆಹ್ವಾನಕೊಟ್ಟರು. ಸಂಘದ ಮೂರುಸಾವಿರ ಗಣವೇಷಧಾರಿ ಸ್ವಯಂಸೇವಕರು ಘೋಷವಾದ್ಯದ ತಾಳಕ್ಕೆ ಹೆಜ್ಜೆಹಾಕಿ ನಡೆಯುವುದು ಆ ದಿನದ ಕಾರ್ಯಕ್ರಮದ ಪ್ರಮುಖ ಆಕರ್ಷಣೆ ಆಗಿತ್ತೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

## 4.3 ನಿತ್ಯ ಪ್ರೇರಣೆಯ ಆ ಸ್ಮಾರಕ

೧೯೬೩ ರ ಮಕರ ಸಂಕ್ರಮಣದಂದು ಸ್ವಾಮಿ ವಿವೇಕಾನಂದ ಜನ್ಮ ಶತಾಬ್ದಿಯ ಶುಭ ಸಂದರ್ಭ. ಆಧ್ಯಾತ್ಮ ಆಧಾರಿತ ಭಾರತದ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ತಮ್ಮ ಸಿಂಹವಾಣಿಯಿಂದ ಭಾರತದಲ್ಲಷ್ಟೇ ಅಲ್ಲ, ವಿಶ್ವದ ವೇದಿಕೆಯಿಂದಲೂ ಮೊಳಗಿಸಿದ ವೀರ ಸನ್ಯಾಸಿ ಅವರು. ಅವರ ಈ ಅಮರ ಸಂದೇಶವನ್ನು ದೇಶದ ಮೂಲೆ ಮೂಲೆಗೆ ತಲುಪಿಸಲು ಸಂಘವು ನಿಶ್ಚಯಿಸಿತು. ಈ ಅಮರ ಸಂದೇಶವನ್ನು ದೇಶದ ಜನತೆಗೆ ನಿರಂತರವಾಗಿ

ಹರಡುತ್ತಿರುವ ಒಂದು ಶಾಶ್ವತ ಸಂಕೇತವಾಗಿ ಕನ್ಯಾಕುಮಾರಿಯ ದಕ್ಷಿಣದಲ್ಲಿರುವ (ವಿವೇಕಾನಂದರು ಧ್ಯಾನಸ್ಥರಾಗಿ ಭಾರತದ ಭವಿಷ್ಯದ ಬಗ್ಗೆ ಚಿಂತನೆ ನಡೆಸಿದ) ಬಂಡೆಯ ಮೇಲೆ ವಿವೇಕಾನಂದರ ಭವ್ಯ ಸ್ಮಾರಕ ನಿರ್ಮಿಸಲೂ ನಿಶ್ಚಯಿಸಲಾಯಿತು.

ಆ ದಿನಗಳಲ್ಲಿ ಸಂಘದ ಅಖಿಲ ಭಾರತ ಬೌದ್ಧಿಕ ಪ್ರಮುಖರಾಗಿದ್ದು, ಹಿಂದಿನ ಸರಕಾರ್ಯವಾಹರಾಗಿದ್ದ ಶ್ರೀ ಏಕನಾಥ ರಾನಡೆಯವರನ್ನು ಶ್ರೀ ಗುರೂಜಿಯವರು ಆ ಜವಾಬ್ದಾರಿಯಿಂದ ಮುಕ್ತಗೊಳಿಸಿ ಈ ಕಠಿಣ ಕೆಲಸ ಒಪ್ಪಿಸಿದರು. ಈ ಕಾರ್ಯಕ್ಕಾಗಿ ಸ್ವಯಂಸೇವಕರು ದೇಶಾದ್ಯಂತ ಹಣಸಂಗ್ರಹ ಮಾಡಿದರು. ಎಲ್ಲ ಪಕ್ಷಗಳೂ, ಸಂಘಟನೆಗಳೂ ಸರಕಾರಗಳೂ ಇದಕ್ಕೆ ಸಹಾಯ ಮಾಡಿದವು.
ಈಗಲೂ ರಾಷ್ಟ್ರೀಯ ಏಕತೆ ಮತ್ತು ಆಸ್ಮಿತೆಯ ಒಂದು ಉಜ್ವಲ ಪ್ರೇರಣಾಕೇಂದ್ರವಾಗಿ ಆ ಸ್ಮಾರಕ ನಿಂತಿದೆ. ಶ್ರೀ ಗುರೂಜಿಯವರ ಈ ಐತಿಹಾಸಿಕ ನಿರ್ಣಯವು ಆ ದಿನಗಳಲ್ಲಿ ಚೀನಾದ ಆಕ್ರಮಣದಿಂದ ಸೋಲಿನ ಅಳುಕನ್ನು ದೂರ ಸರಿಸಿ ರಾಷ್ಟ್ರಮಾನಸದಲ್ಲಿ ಪೌರುಷಪೂರ್ಣ ಆತ್ಮವಿಶ್ವಾಸವನ್ನು ತುಂಬುವುದಕ್ಕೆ ಸಹಕಾರಿಯಾಯಿತು.

## 4.4 ನೇಪಾಳದ ಜೊತೆ ಭಾವಬಂಧನ

ಶ್ರೀ ಗುರೂಜಿ ೧೯೬೩ರ ಶಿವರಾತ್ರಿಯ ಶುಭದಿನದಂದು ಭಗವಾನ್ ಪಶುಪತಿನಾಥನ ದರ್ಶನಕ್ಕಾಗಿ ನೇಪಾಲದ ಕಾಠ್ಮಂಡುವಿಗೆ ಹೋದರು.ಅಲ್ಲಿನ ಮಹಾರಾಜ ಮಹೇಂದ್ರರ ಜೊತೆ ಅವರ ಸೌಹಾರ್ದಪೂರ್ಣ ಭೇಟಿಯಾಯಿತು.ಆ ಸಮಯದಲ್ಲಿ ಅಲ್ಲಿನ ಪ್ರಧಾನಮಂತ್ರಿ ಶ್ರೀ ತುಲಸೀಗಿರಿಯವರೂ ಇದ್ದರು. ೧೯೬೨ ರ ಚೀನೀ ಯುದ್ಧದಲ್ಲಿ ಭಾರತ ನಿರ್ಣಾಯಕವಾಗಿ ಸೋತಿದ್ದರಿಂದ ನೇಪಾಳದ ಒಲವು ಚೀನಾದ ಕಡೆಗಿತ್ತು. ನೇಪಾಳದ  ರಾಜರ ಮನಸ್ಸಿನಲ್ಲಿ ಭಾರತದ ಬಗ್ಗೆ ಕೆಲವು ಅಸಮಾಧಾನಗಳು ಇದ್ದವು. ನೇಪಾಳದ ರಾಜರಿಗೆ ಈ ಎಲ್ಲಾ ವಿಷಯಗಳನ್ನು ದಿಲ್ಲಿಯ ಆಡಳಿತಗಾರರ ಗಮನಕ್ಕೆ ತರಲಾಗುವುದೆಂಬ ಆಶ್ವಾಸನೆ ಶ್ರೀ ಗುರೂಜಿ ಕೊಟ್ಟರು.ಕಾಠ್ಮಂಡುವಿನಿಂದ ಹಿಂದಿರುಗಿದ ಕೂಡಲೇ ಶ್ರೀ ಗುರೂಜಿಯವರು ಶ್ರೀ ಲಾಲಬಹದ್ದೂರ ಶಾಸ್ತ್ರಿ ಮತ್ತು ಪಂಡಿತ ನೆಹರೂ ಅವರಿಗೆ ಪತ್ರ ಬರೆದು ನೇಪಾಳದ ರಾಜರ ಜೊತೆಗಿನ ಮಾತುಕತೆಗಳನ್ನು ವಿಸ್ತಾರವಾಗಿ ತಿಳಿಸಿದರು. ಹಾಗೆಯೇ ನೇಪಾಳದ ಜೊತೆ ಭಾರತದ ಸಂಬಂಧವು ಸೌಹಾರ್ದ ಪೂರ್ಣವೂ ಸಮ್ಮಾನಪೂರ್ವಕವಾಗಿಯೂ ಇರಬೇಕಾದ ಅವಶ್ಯಕತೆಯನ್ನು ತಿಳಿಸಿದರು.ಚೀನಾದ ವಿಸ್ತಾರವಾದ ಹಿನ್ನೆಲೆಯಲ್ಲಿ ಭಾರತದ ನೀತಿ ಮತ್ತು ಉದ್ದೇಶಗಳಿಗೆ ಸಂಬಂಧಿಸಿದಂತೆ ನೇಪಾಳದ ರಾಜರಿಗೆ ವಿಶ್ವಾಸ ಹುಟ್ಟಿಸುವುದೂ ಅವಶ್ಯಕ ಎಂದರು.ಪಂಡಿತ ನೆಹರೂ ಕಡೆಯಿಂದ ಈ ಪತ್ರಕ್ಕೆ ಕೂಡಲೇ ೧ ಮಾರ್ಚ್ ೧೯೬೩ ಕ್ಕೆ ಉತ್ತರ ಬಂದಿತು. ಅದರಲ್ಲಿ ಶ್ರೀ ಗುರೂಜಿಯವರ ಅಧಿಕಾಂಶ ವಿಚಾರಗಳಿಗೆ ಸಹಮತಿ ವ್ಯಕ್ತಪಡಿಸಲಾಗಿತ್ತು. ಮುಂದೆ ೧೯೬೫ ರಲ್ಲಿ ಶ್ರೀ ಅಟಲಬಿಹಾರಿ ವಾಜಪೇಯಿ ಶ್ರೀ ಲಾಲಬಹದ್ದೂರ ಶಾಸ್ತ್ರಿಯವರನ್ನು ಭೇಟಿಯಾದಾಗ ಶಾಸ್ತ್ರಿಯವರು ‘ನನ್ನ ನೇಪಾಳದ ಪ್ರವಾಸಕ್ಕೆ ಬೇಕಾದ ಅನುಕೂಲಕರ ವಾತಾವರಣವನ್ನೂ, ನೇಪಾಳ-ಭಾರತ ಮೈತ್ರಿ ದೃಢಗೊಳಿಸುವ ನನ್ನ ಕೆಲಸದ ಮುಕ್ಕಾಲು ಪಾಲನ್ನೂ ಶ್ರೀ ಗುರೂಜಿ ತಮ್ಮ ನೇಪಾಳ ಪ್ರವಾಸದ ಸಂದರ್ಭದಲ್ಲಿ ಮೊದಲೇ ಮಾಡಿದ್ದರು’ ಎಂದರು.

## 4.5 ನಿರ್ಭೀತ ಅಸಂದಿಗ್ಧ ವಿಶ್ಲೇಷಣೆ

೧೯೬೫ರಲ್ಲಿ ಕಾಶ್ಮೀರದ ಮೇಲೆ ಪಾಕಿಸ್ತಾನ ಪುನಃ ಆಕ್ರಮಣ ಮಾಡಿತು. ಇದರ ಜೊತೆಯಲ್ಲಿ ಗುಜರಾತಿನವರೆಗಿನ ಸಂಪೂರ್ಣ ವಾಯುವ್ಯ ಗಡಿಯಲ್ಲಿ ಯುದ್ಧ ಪ್ರಾರಂಭವಾಯಿತು. ಪ್ರಧಾನಮಂತ್ರಿ ಶ್ರೀ ಲಾಲಬಹದ್ದೂರ ಶಾಸ್ತ್ರಿಯವರು ತುರ್ತು ಸಮಾಲೋಚನೆಗಾಗಿ ದೇಶದ ಪ್ರಮುಖ ರಾಜಕೀಯ ನಾಯಕರ ಜೊತೆ ಶ್ರೀ ಗುರೂಜಿಯವರನ್ನೂ ಆಮಂತ್ರಿಸಿದರು.ಮಹಾರಾಷ್ಟ್ರದಲ್ಲಿ ಪ್ರವಾಸದಲ್ಲಿದ್ದ ಶ್ರೀ ಗುರೂಜಿಯವರನ್ನು ದಿಲ್ಲಿಗೆ ಕರೆತರಲು ವಿಶೇಷ ವಿಮಾನವನ್ನು ಕಳಿಸಲಾಯಿತು.

ಸಮಾಲೋಚನೆಯಲ್ಲಿ ಭಾರತದ ಯುದ್ಧ ನೀತಿಯ ಮೂಲಸೂತ್ರ ಏನಿರಬೇಕೆಂಬ ಚರ್ಚೆ ಆಗುತ್ತಿತ್ತು. ಆಗ ಶ್ರೀ ಗುರೂಜಿಯವರು "ಕೇವಲ ಯುದ್ಧ ಸಾಮಾಗ್ರಿಗಳನ್ನು  ನಾಶಪಡಿಸುವುದಲ್ಲ, ಪಾಕಿಸ್ತಾನದ ಅಸ್ತಿತ್ವವನ್ನೇ ಅಳಿಸಿಹಾಕುವುದರಿಂದ ಮಾತ್ರ ನಮ್ಮ ದೇಶ  ಈ ಸಮಸ್ಯೆಯಿಂದ  ಶಾಶ್ವತವಾಗಿ ಮುಕ್ತಿ ಪಡೆಯಬಲ್ಲದು" ಎಂದು ನಿರ್ಭೀಕ ಮತ್ತು ಅಸಂದಿಗ್ಧ ಮಾತುಗಳಲ್ಲಿ ತಿಳಿಸಿದರು.ಅಲ್ಲದೆ ಅವರು "ಕಾಶ್ಮೀರದಲ್ಲಿಯೂ ಅನ್ಯ ಗಡಿ ಪ್ರದೇಶಗಳಲ್ಲಿಯೂ ನಮ್ಮ ಸೇನೆ ಮುಕ್ತಗೊಳಿಸಿದ ಪ್ರದೇಶಗಳನ್ನು ಭಾರತದ ವಶದಲ್ಲೇ ಇಟ್ಟುಕೊಳ್ಳಬೇಕು" ಎಂದೂ ಆಗ್ರಹಪೂರ್ವಕವಾಗಿ ತಿಳಿಸಿದರು.

## 4.6 ೧೯೭೧ – ನಮ್ಮ ಸೈನ್ಯದ ವಿಶ್ವದಾಖಲೆ

ಆದರೆ ಸರ್ಕಾರ ಹಾಗೇನೋ ಮಾಡಲಿಲ್ಲ. ಆದ್ದರಿಂದ ೧೯೭೧ರಲ್ಲಿ ಪುನಃ ಪಶ್ಚಿಮ ಪಾಕಿಸ್ತಾನದ ರಾಕ್ಷಸೀ ಅತ್ಯಾಚಾರೀ ಸೈನ್ಯ ಪೂರ್ವ ಪಾಕಿಸ್ತಾನದಲ್ಲಿ ಕ್ರೂರ ಅತ್ಯಾಚಾರ ನಡೆಸಿ ಅಲ್ಲಿನ ಒಂದು ಕೋಟಿ ಹಿಂದುಗಳನ್ನು ಭಾರತಕ್ಕೆ ಓಡಿಸಿತು. ಆ ಸಮಯದಲ್ಲಿ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಗಾಂಧಿಯವರ ದೃಢನಿಶ್ಚಯದ ಫಲವಾಗಿ ಭಾರತೀಯ ಸೇನೆ ಪೂರ್ವಪಾಕಿಸ್ತಾನಕ್ಕೆ ಪ್ರವೇಶಿಸಿತು. ನೋಡ ನೋಡುತ್ತಿದ್ದಂತೆಯೇ ಪಶ್ಚಿಮ ಪಾಕಿಸ್ತಾನದ ಸೇನೆಯ ರೆಕ್ಕೆ ಪುಕ್ಕ ಕತ್ತರಿಸಿ ಅದನ್ನು ಶರಣಾಗುವಂತೆ ಮಾಡಿತು. ಈವರೆಗಿನ ವಿಶ್ವದ ಯುದ್ಧ ಇತಿಹಾಸದಲ್ಲಿ ಯಾರೂ  ಕಂಡುಕೇಳಿರದ ಅಭೂತಪೂರ್ವ ವಿಜಯ

ಅದು.  ಪಶ್ಚಿಮ ಪಾಕಿಸ್ತಾನದ ೯೨,೦೦೦ ಸೈನಿಕರನ್ನು ಸೆರೆಹಿಡಿಯಲಾಯಿತು. ಭಾರತಕ್ಕೆ ಬಂದಿದ್ದ ಒಂದು ಕೋಟಿ ಹಿಂದುಗಳನ್ನು ಬಾಂಗ್ಲಾದೇಶದಲ್ಲಿ ಹಿಂದಿನಂತೆಯೇ ನೆಲೆನಿಲ್ಲಿಸಲಾಯಿತು.ಭಾರತದೊಂದಿಗೆ ಮೈತ್ರಿ ಇಟ್ಟುಕೊಳ್ಳುವ, ಮತಾಂಧ ಅಲ್ಲದ ಬಂಗ್ಲಾದೇಶ ಎಂಬ ಸ್ವತಂತ್ರ ದೇಶ ತಲೆ ಎತ್ತಿತು.

ಶ್ರೀ ಗುರೂಜಿಯವರು ರಕ್ಷಣಾಮಂತ್ರಿ ಶ್ರೀ ಜಗಜೀವನರಾಮರಿಗೆ ಬರೆದ ಪತ್ರದಲ್ಲಿ " ತಮ್ಮ ನೇತೃತ್ವದಲ್ಲಿ  ನಮ್ಮ ಸೇನೆ ಸಂಪೂರ್ಣ ವಿಜಯ ಪಡೆದಿದೆ. ಇದು ಸುವರ್ಣಾಕ್ಷರಗಳಲ್ಲಿ ಬರೆದಿಡಲು ಯೋಗ್ಯ" ಎಂದಿದ್ದರು.

ಮಾರ್ಚಿಯಲ್ಲಿ ನಡೆದ ಅಖಿಲ ಭಾರತೀಯ ಪ್ರತಿನಿಧಿ ಸಭಾ ಬೈಠಕ್ ನಲ್ಲಿ ಯುದ್ಧದಲ್ಲಿ ಗಳಿಸಿದ ವಿಜಯದ ಬಗ್ಗೆ ಪ್ರಶಂಸಾತ್ಮಕ ನಿರ್ಣಯವನ್ನು ಸ್ವೀಕರಿಸಲಾಯಿತು. ಪಾಕಿಸ್ತಾನೀ ನಾಯಕರು ಭಾರತವನ್ನು ವಿಭಜಿಸಿದ್ದರು. ಈಗ ಭಾರತವು ಪಾಕಿಸ್ತಾನವನ್ನು ವಿಭಜಿಸಿ ಅದರ ಸೇಡು ತೀರಿಸಿಕೊಂಡಿದೆ. ಭಾರತಕ್ಕೆ ಮಿತ್ರವಾಗಿರುವ ದೇಶವೊಂದರ ನಿರ್ಮಾಣವಾಗಿದೆ ಎಂದು ಭಾರತೀಯರು ಸಂತಸಪಟ್ಟರು. ಕೆಲವು ದಿನಗಳನಂತರ ತಮ್ಮ ಕೆಲವು ಮಿತ್ರರೊಂದಿಗೆ ಮಾತನಾಡುವಾಗ ಗುರೂಜಿಯವರು ಹೇಳಿದ್ದು - "ಈಗ ಮಿತ್ರದೇಶವಾಗಿರುವ ಬಾಂಗ್ಲಾದೇಶ ಮುಂದೆ ಮತಾಂಧ ಇಸ್ಲಾಮೀ ದೇಶವಾಗಿ ಬದಲಾಗಿ ಭಾರತಕ್ಕೆ ಶತ್ರುವಾಗಬಹುದು. ಆಗ ಭಾರತಕ್ಕೆ ಎರಡೂ ಕಡೆ ಹರಡಿರುವ ಒಂದೇ ಶತ್ರುದೇಶದ  ಬದಲು  ಎರಡು ಸ್ವತಂತ್ರ ಶತ್ರುದೇಶಗಳಿರುತ್ತವೆ. ಎರಡೂ ಕಡೆ ಶತ್ರು ದೇಶಗಳಿರುವುದು ಭಾರತದ ಸುರಕ್ಷೆಯ ದೃಷ್ಟಿಯಿಂದ ಇನ್ನಷ್ಟು ಅಪಾಯಕಾರಿ". ಭಾರತದೊಂದಿಗಿನ ಬಂಗ್ಲಾದೇಶದ ಈಗಿನ ಶತ್ರುತ್ವದ ಆಚರಣೆ ನೋಡಿದಾಗ ಗುರೂಜಿಯವರ ಭವಿಷ್ಯವಾಣಿ ಎಷ್ಟು ವಾಸ್ತವವಾದದ್ದು ಎಂಬುದು ಅರಿವಿಗೆ ಬರುತ್ತದೆ.

# 5 ಸ್ವತಂತ್ರ ಭಾರತದಲ್ಲಿ ಸಂಘದ ಪಾತ್ರ

ದೇಶವಿಭಜನೆಯಾಗಿ ಪಾಕ್ಕಿಸ್ತಾನ ಪ್ರತ್ಯೇಕವಾದ ನಂತರ ಹಿಂದು-ಮುಸ್ಲಿಮರ ಜಗಳ, ದಂಗೆಗಳ ಮೂಲಕಾರಣವೇ ಇಲ್ಲದಿರುವಾಗ ಇನ್ನು ಸಂಘದ ಅವಶ್ಯಕತೆಯಾದರೂ ಏನು? ಈ ರೀತಿಯ ಪ್ರಶ್ನೆಗಳ ಚರ್ಚೆ ೧೯೪೮ ರ ನಂತರ ಜನರ ಮಧ್ಯೆ ಬಲವಾಗಿ ನಡೆಯುತ್ತಿತ್ತು. ಶ್ರೀ ಗುರೂಜಿಯವರು ಈ ಬಗ್ಗೆ ಸ್ಪಷ್ಟ ಮಾರ್ಗದರ್ಶನ ಮಾಡುತ್ತಾ “ಯಾರದ್ದೋ ಜೊತೆಯಲ್ಲಿ ಹೊಡೆದಾಡುವುದಕ್ಕಾಗಿ ಸಂಘದ ನಿರ್ಮಾಣ ಆಗಿಲ್ಲ.ರಾಷ್ಟ್ರೀಯ ಚಾರಿತ್ರ್ಯದ ನಿರ್ಮಾಣವೇ ಸಂಘದ ಪ್ರಮುಖ ಕಾರ್ಯ,.......ಮಹಮ್ಮದ್ ಪೈಗಂಬರ್ ಜನ್ಮವೇ ಆಗಿರದಿದ್ದರೂ ಹಿಂದು ಸಮಜದ ಅಸಂಘಟಿತ ಸ್ಥಿತಿ ಈಗಿನಂತೆಯೇ ಇದ್ದಿದ್ದರೆ ಆಗಲೂ ಹಿಂದುಸಂಘಟನೆಯ ಸಂಘದ ಕಾರ್ಯ ನಡೆಯುತ್ತಿತ್ತು” ಎಂದರು.

## 5.1 ಸರ್ವಸ್ಪರ್ಶಿ ಸ್ವದೇಶೀ ಜೀವನ ಪದ್ಧತಿ

ದೇಶ ಸ್ವತಂತ್ರವಾದ ಕೂಡಲೇ ಅಲ್ಲಿನ ಜನರ ಮನಸ್ಥಿತಿಯಲ್ಲಿ ಯೋಗ್ಯವಾದ ಪರಿವರ್ತನೆಗಳನ್ನು ತರಬೇಕಾದದ್ದು ಅಲ್ಲಿನ ರಾಷ್ಟ್ರನಾಯಕರ ಪ್ರಮುಖ ಕಾರ್ಯ. ನವೋದಿತ ಸ್ವತಂತ್ರ ಭಾರತದ ಮಾನಸಿಕ ಸ್ಥಿತಿಯನ್ನು ಶ್ರೀ ಗುರೂಜಿ ಚೆನ್ನಾಗಿ ತಿಳಿದಿದ್ದರು.ಬ್ರಿಟಿಷ್ ಆಡಳಿತಗಾರರು ಭಾರತವನ್ನು ರಾಜನೈತಿಕವಾಗಿ, ಆರ್ಥಿಕವಾಗಿ ಮಾತ್ರವಲ್ಲದೆ ಭಾರತೀಯ ಮಾನಸಿಕತೆಯನ್ನೇ ಗುಲಾಮೀಮಯಮಾಡಲು ತುಂಬಾ ಪ್ರಯತ್ನಪಟ್ಟರು. ಅದರಲ್ಲಿ ಸಾಕಷ್ಟು ಯಶಸ್ವಿಯೂ ಆದರು. ನಮ್ಮ ಸ್ವಾತಂತ್ರ್ಯ ಸೇನಾನಿಗಳೂ ಈ ಅಪಾಯವನ್ನು ಗಮನಿಸಿದ್ದರು. ಸ್ವದೇಶೀ, ಗೋರಕ್ಷೆ, ಸ್ವಭಾಷಾ, ಹಿಂದಿ ಇತ್ಯಾದಿ ವಿಷಯಗಳ ಬಗ್ಗೆ ಪ್ರಚಾರಮಾಡಿ ಈ ಆತ್ಮಘಾತುಕ ಮಾನಸಿಕತೆಯನ್ನು ದೂರಮಾಡುವ ಪ್ರಯತ್ನವನ್ನು ಅವರೆಲ್ಲ ಮಾಡಿದ್ದರು. ಪೂಜ್ಯ ಡಾಕ್ಟರ್ ಜೀಯವರ ನಂತರ ಶ್ರೀ ಗುರೂಜಿಯವರೂ ಈ ಎಲ್ಲಾ ವಿಷಯಗಳ ಮೂಲಕ ಜನಜಾಗೃತಿಗಾಗಿ ಸಂಘದಿಂದ ಅನೇಕ ವಸ್ತುಗಳ ಬಗ್ಗೆ ಆಗ್ರಹಿಸುವುದು ಮಾತ್ರವಲ್ಲ, ನಿತ್ಯಜೀವನದ ಎಲ್ಲ ವಿಷಯಗಳಲ್ಲಿಯೂ - ಆಮಂತ್ರಣ, ಅಭಿನಂದನಾ ಪತ್ರಗಳು ಸ್ವಭಾಷೆಯಲ್ಲಿ, ಜನ್ಮದಿನಾಚರಣೆ ನಮ್ಮ ಹಿಂದು ಪದ್ಧತಿಯಂತೆ - ಹೀಗೆ ಎಲ್ಲ ಸಣ್ಣಸಣ್ಣ ವಿಷಯಗಳ ಬಗ್ಗೆಯೂ ಅವರ ಆಗ್ರಹ ಇರುತ್ತಿತ್ತು.

ಡಾಕ್ಟರ್ ಜೀಯವರ ಕಾಲದಿಂದಲೇ ಸಂಘವು ಹಿಂದಿಯನ್ನು ತನ್ನ ಪ್ರಚಾರ-ಪ್ರಸಾರದ ಮಾಧ್ಯಮವಾಗಿ ಮಾಡಿಕೊಂಡಿತ್ತು. ಇದರ ಜೊತೆಯಲ್ಲಿಯೇ ಎಲ್ಲ ಭಾರತೀಯ ಭಾಷೆಗಳ ಜನನಿ (ವಿಶ್ವದ ಎಲ್ಲ ಭಾಷೆಗಳ ಜನನಿಯೂ ಹೌದು) ಸಂಸ್ಕೃತಕ್ಕೆ ಮಹತ್ವ ಕೊಡತೊಡಗಿತು. ಈ ದೃಷ್ಟಿಯಂದ ಸಂಘದ ಆಜ್ಞೆಗಳು, ಪ್ರಾರ್ಥನೆ, ಏಕಾತ್ಮತಾ ಸ್ತೋತ್ರ, ಏಕಾತ್ಮತಾ ಮಂತ್ರ, ಭೋಜನ ಮಂತ್ರ ಎಲ್ಲವೂ ಸಂಸ್ಕೃತದಲ್ಲಿಯೇ ರಚಿಸಲ್ಪಟ್ಟಿವೆ. ನಿಧಾನವಾಗಿ ಘೋಷ್ ನಲ್ಲಿಯೂ ಆವರೆಗೆ ಪ್ರಚಲಿತವಾಗಿದ್ದ ಆಂಗ್ಲರಾಗಗಳು ಮತ್ತು ರಚನೆಗಳ ಜಾಗದಲ್ಲಿ ಭಾರತೀಯ ರಾಗಗಳ ಬಳಕೆ ಪ್ರಾರಂಭವಾಯಿತು. ಅದಕ್ಕೆ ಪೋಷಕವಾಗಿ ಸಂಸ್ಕೃತದಲ್ಲಿ ಹೊಸ ಘೋಷ್ ರಚನೆಗಳನ್ನು ಮಾಡಲಾಗಿದೆ. ಸ್ವಯಂಸೇವಕರು ನಡೆಸುತ್ತಿರುವ ಎಲ್ಲ ವಿದ್ಯಾಲಯಗಳಲ್ಲಿ ಅಲ್ಲಲ್ಲಿನ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಿದೆ. ಈಗ ‘ವಿದ್ಯಾಭಾರತಿ’ ಯ ಹೆಸರಿನಲ್ಲಿ ೨೦,೦೦೦ ಕ್ಕೂ ಹೆಚ್ಚು ಶಿಶುಮಂದಿರಗಳಿಂದ ಮೊದಲ್ಗೊಂಡು ಹತ್ತು, ಹನ್ನೆರಡನೇ ತರಗತಿಗಳವರೆಗಿನ ಶಿಕ್ಷಣ ನೀಡುವ ವಿದ್ಯಾಲಯಗಳು ದೇಶಾದ್ಯಂತ ಇವೆ.

## 5.2 ಶ್ರದ್ಧಾಬಿಂದು ಗೋರಕ್ಷಣೆಗಾಗಿ

ಭಾರತದಲ್ಲಿ ಪ್ರಾಚೀನಕಾಲದಿಂದಲೂ ಗೋವಂಶವನ್ನು ಶ್ರದ್ಧಾಬಿಂದುವಾಗಿ ಪೂಜ್ಯವೆಂದು ಭಾವಿಸುವ ಪರಂಪರೆ ಇದೆ. ಸ್ವಾತಂತ್ರ್ಯ ಸೇನಾನಿಗಳೆಲ್ಲರೂ ಗೋರಕ್ಷಣೆಯನ್ನು ಒಂದು ಮುಖ್ಯ ವಿಷಯ ಮಾಡಿದ್ದರು. ಶ್ರೀ ಗುರೂಜಿಯವರೂ ಈ ವಿಷಯವನ್ನೆತ್ತಿಕೊಂಡು ಅಖಿಲ ಭಾರತ ಮಟ್ಟದಲ್ಲಿ "ಗೋಹತ್ಯಾ ನಿಷೇಧ ಸಮಿತಿ" ರಚಿಸಿದ್ದರು. ಅದರಲ್ಲಿ ದೇಶದ ಪ್ರಮುಖ ಗೋಭಕ್ತರು, ಸಾಧುಸಂತರೂ ಇದ್ದರು. ಈ ಬೇಡಿಕೆಯ ಸಮರ್ಥನೆಯಾಗಿ ಸ್ವಯಂಸೇವಕರು ದೇಶಾದ್ಯಂತ ೧.೭೫ ಕೋಟಿ ವಯಸ್ಕರ ಹಸ್ತಾಕ್ಷರ ಮಾಡಿದ್ದರು. ೮೧,೫೨೪ ಗ್ರಾಮ-ನಗರಗಳಲ್ಲಿ ಇದಕ್ಕಾಗಿ ಸಹಿಸಂಗ್ರಹ ನಡೆದಿತ್ತು. ಅದೆಲ್ಲವನ್ನು ದಿನಾಂಕ ೭.೧೨.೧೯೫೨ ರಂದು ೨೨ ಎತ್ತಿನಗಾಡಿಗಳಲ್ಲಿ ತಂದು ದಿಲ್ಲಿಯಲ್ಲಿ ಅಂದಿನ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರಿಗೆ ಒಪ್ಪಿಸಲಾಯಿತು. ಆ ಶಿಷ್ಯಮಂಡಲದ ಪ್ರಮುಖರಾಗಿ ಶ್ರೀ ಗುರೂಜಿಯವರೇ ಇದ್ದರು. ಅಖಿಲ ಭಾರತ ಮಟ್ಟದಲ್ಲಿ ಕಾನೂನು ಮಾಡುವ ಮನಃಸ್ಥಿತಿಯಲ್ಲಿ ಕೇಂದ್ರ ಸರಕಾರವಂತೂ ಇರಲಿಲ್ಲ. ಆದರೆ ಕೆಲವು ರಾಜ್ಯಗಳು ಗೋಹತ್ಯಾ ನಿಷೇಧ ಕಾನೂನನ್ನು ಜಾರಿಗೆ ತಂದವು.

## 5.3 ಭಾಷಾವಾರು ಪ್ರಾಂತಗಳ ಬಗ್ಗೆ ಅಪಾಯದ ಘಂಟೆ

ಆ ದಿನಗಳಲ್ಲಿ ಭಾಷಾವಾರು ಪ್ರಾಂತಗಳ ರಚನೆಯ ಬಗ್ಗೆ ಚರ್ಚೆ ಜೋರಾಗಿತ್ತು. ಈ ರೀತಿಯ ರಚನೆಯಲ್ಲಿ ಇರುವ ಅಪಾಯದ ಉಲ್ಲೇಖ ಮಾಡುತ್ತಾ ಶ್ರೀ ಗುರೂಜಿಯವರು ಹೇಳಿದ್ದು - "ಇದರಿಂದ ಮುಂದೆ ಭಾಷಾ ದುರಭಿಮಾನ ಬೆಳೆಯುತ್ತದೆ. ನೆರೆಹೊರೆ ರಾಜ್ಯಗಳ ಮಧ್ಯೆ ವಿವಾದ ಪ್ರಾರಂಭವಾಗಿ ಪರಸ್ಪರ ತೀವ್ರ ವಿರೋಧ ತಲೆ ಎತ್ತುತ್ತದೆ." ಈ ವಿಷಯದ ಬಗ್ಗೆ ಒಂದು ಪ್ರಭಾವೀ ಲೇಖನವನ್ನು ಬರೆದು ದೇಶದ ಆಡಲಿತ ನಡೆಸುವ ನಾಯಕರಿಗೆ " ಧೈರ್ಯಮಾಡಿ ಒಂದೇ ಏಕಾತ್ಮ ಶಾಸನವನ್ನು ಸ್ವೀಕರಿಸಿರಿ" ಎಂದು ಕರೆಕೊಟ್ಟರು. ಅಮೆರಿಕಾವನ್ನು ಒಂದು ಅಖಂಡದೇಶವನ್ನಾಗಿ ಮಾಡಲು ಅಬ್ರಾಹಂ ಲಿಂಕನ್ನನು ವಹಿಸಿದ ಐತಿಹಾಸಿಕ ಪಾತ್ರವನ್ನು ನೆನೆಪಿಸಿದರು. ಆದರೆ ದೌರ್ಭಾಗ್ಯದಿಂದ ರಾಷ್ಟ್ರದ ಅಖಂಡತೆಗಾಗಿ ಆ ಅತಿ ಮಹತ್ವಪೂರ್ಣ ಹೆಜ್ಜೆಯಿಡಲು ಅವಶ್ಯಕ ಮನೋಬಲ ನಾಯಕರಿಗೆ ಇರಲಿಲ್ಲ. ಇದರ ದುಷ್ಪರಿಣಾಮವನ್ನು ಈಗ ನಾವು ನೋಡುತ್ತಿದ್ದೇವೆ. ಕಾವೇರಿ ನೀರಿನ ಹಂಚಿಕೆಗಾಗಿ ಕರ್ನಾಟಕ ಮತ್ತು ತಮಿಳುನಾಡುಗಳ ನಡುವೆ ಹಾಗೂ ನರ್ಮದಾ ನೀರಿನ ಬಗ್ಗೆ ಗುಜರಾತ್ ಮತ್ತು ಮಧ್ಯಪ್ರದೇಶಗಳ ನಡುವಿನ ವಿರಸ, ಇದೇ ರೀತಿ ಉತ್ತರದಲ್ಲಿ ಪಂಜಾಬ್ ಹರಿಯಾಣಾಗಳ ಮಧ್ಯೆ ಗಡಿ ಮತ್ತು ಜಲವಿವಾದ ಇದೆ.

ಭಾಷಾವಾರು ಪ್ರಾಂತ ರಚನೆಯ ಸಮಯದಲ್ಲಿ ಪಂಜಾಬೀ ಸೂಬಾದ ಹೆಸರಿನಲ್ಲಿ ಪಂಜಾಬಿನಲ್ಲಿ ಒಂದು ವಿವಾದ ತಲೆ ಎತ್ತಿತು. ಪಂಜಾಬಿನಲ್ಲಿರುವ ಪಂಜಾಬಿ ಮಾತನಾಡುವ ಸಿಖ್ಖೇತರ ಹಿಂದುಗಳು ತಮ್ಮ ಮಾತೃಭಾಷೆ ಹಿಂದಿ ಎಂದು ಬರೆಸಬೇಕೆಂದು ಆರ್ಯಸಮಾಜ ಕರೆಕೊಟ್ಟಿತ್ತು. ಆದರೆ ಶ್ರೀ ಗುರೂಜಿ ಆಗ ಸ್ಪಷ್ಟವಾಗಿ ಹೇಳಿದ್ದರು - "ಪಂಜಾಬಿ, ಹಿಂದಿ ಎಲ್ಲವೂ ನಮ್ಮ ರಾಷ್ಟ್ರೀಯ ಭಾಷೆಗಳೇ. ಆದ್ದರಿಂದ ಪಂಜಾಬಿನ ಸಿಖ್ಖೇತರ ಹಿಂದುಗಳು ಕೂಡಾ ಪ್ರಾಮಾಣಿಕವಾಗಿ ತಮ್ಮ ಮಾತೃಭಾಷೆ ಪಂಜಾಬಿ ಎಂದೇ ಬರೆಸಬೇಕು." ಇದರಿಂದಾಗಿ ಆರ್ಯಸಮಾಜಿಗಳೇನೋ ಕೋಪಗೊಂಡರು. ಆದರೆ ಈಗಲೂ ಸಿಖ್ ಬಂಧುಗಳಲ್ಲಿ ಸಂಘದ ಪ್ರಾಮಾಣಿಕತೆಯ ಕಾರಣ ಸಂಘದ ಬಗ್ಗೆ ಆದರದ ಭಾವನೆ ಇದೆ.

## 5.4 ಗೋವಾ ಮುಕ್ತಿ

೧೯೫೫ ರಲ್ಲಿ ಘೋರ ಹಿಂದುವಿರೋಧಿ ಪೋರ್ಚುಗಲ್ ಹಿಡಿತದಿಂದ ಗೋವಾವನ್ನು ಮುಕ್ತಗೊಳಿಸುವುದರಲ್ಲಿ ಸ್ವಯಂಸೇವಕರು ದೊಡ್ಡ ಸಂಖ್ಯೆಯಲ್ಲಿಯೇ ಭಾಗವಹಿಸಿದ್ದರು. ಆ ಸಮಯದಲ್ಲಿ ಪ್ರಕಟವಾದ ಒಂದು ಪತ್ರಕದಲ್ಲಿ ಶ್ರೀ ಗುರೂಜಿ "ಗೋವಾದಲ್ಲಿ ಪೊಲೀಸ್ ಕಾರ್ಯಾಚರಣೆ ನಡೆಸಲು ಇದು ಸುವರ್ಣಾವಕಾಶ. ಇದರಿಂದ ಗೋವಾ ಮುಕ್ತವಾಗುವದು ಮಾತ್ರವಲ್ಲ, ನಮ್ಮ ರಾಷ್ಟ್ರದ ಪ್ರತಿಷ್ಠೆಯೂ ಹೆಚ್ಚುತ್ತದೆ" ಎಂದಿದ್ದರು.

## 5.5 ಒಂದು ಹೊಸ ಬೆಳವಣಿಗೆ

ಬ್ರಹ್ಮದೇಶದಿಂದ World fellowship of Buddhist ಸಂಸ್ಥೆಯ ಅಧ್ಯಕ್ಷ ನ್ಯಾಯಮೂರ್ತಿ 'ಉ-ಥಾಂಟ್-ಋನ್' ಶ್ರೀ ಗುರೂಜಿಯವರನ್ನು ಭೇಟಿಯಾದರು. ಅವರು ಮುಕ್ತಮನದಿಂದ ಹೇಳಿದ ಮಾತು ಇದು. "ಭಗವಾನ್ ಬುದ್ಧನು ಸನಾತನಧರ್ಮದ ಪ್ರಚಾರವನ್ನೇ ಮಾಡಿದನು ಮತ್ತು ಬೌದ್ಧಧರ್ಮವು ಹಿಂದುಧರ್ಮದಲ್ಲಿ ಒಳಗೊಂಡೇ ಇದೆ".

## 5.6 ಡಾ || ಅಂಬೇಡ್ಕರರ ವಿಧಾಯಕ ದೃಷ್ಟಿಕೋಣ

೧೯೫೬ ರ ವಿಜಯದಶಮಿಯ ದಿನ ನಾಗಪುರದಲ್ಲಿ ಡಾ|| ಅಂಬೇಡ್ಕರರ ನೇತೃತ್ವದಲ್ಲಿ ಲಕ್ಷಾಂತರ ಅನುಸೂಚಿತ ಜಾತಿಗೆ ಸೇರಿದ ಮಹಾರ ಬಂಧುಗಳು ಬೌದ್ಧಮತ ಸ್ವೀಕರಿಸಿದರು. ಈ ಬಗ್ಗೆ ಶ್ರೀ ಗುರೂಜಿಯವರ ಪ್ರತಿಕ್ರಿಯೆ ಗಮನಿಸಬೇಕಾದದ್ದು: ಅಜ್ಞಾನ ಮತ್ತು ದುಃಖದಲ್ಲಿ ಮುಳುಗಿರುವ ನಮ್ಮ ಹಿಂದು ಸಮಾಜದ ಒಂದು ದೊಡ್ಡ ಭಾಗವನ್ನು ಅವಮಾನಿತ ಅವಸ್ಥೆಯಿಂದ ಮೇಲೆತ್ತಿ ಅದಕ್ಕೆ ಆತ್ಮಸಮ್ಮಾನ ಕೊಡಿಸುವ ಅಸಾಮಾನ್ಯ ಪ್ರಯತ್ನವನ್ನು ಅವರು ಮಾಡಿದ್ದಾರೆ. ನಮ್ಮ ರಾಷ್ಟ್ರಕ್ಕೆ ಈ ಮೂಲಕ ಅವರು ಉಪಕಾರ ಮಾಡಿದ್ದಾರೆ."
ಈ ಸಂಬಂಧವಾಗಿ ಇನ್ನೊಂದು ಮುಖ್ಯ ವಿಷಯವನ್ನು ನೆನೆಪಿಟ್ಟುಕೊಳ್ಳಬೇಕು. ಬಾಲ್ಯದಲ್ಲಿಯೇ ಬಾಬಾಸಾಹೇಬ ಅಂಬೇಡ್ಕರರು ಹಿಂದುಧರ್ಮದ ಪವಿತ್ರ ಸಂಸ್ಕಾರಗಳನ್ನು ಪಡೆದುಕೊಂಡಿದ್ದರು. ಹಿಂದುಸಮಾಜದ ಮೇಲ್ವರ್ಗದ ಬಂಧುಗಳಿಂದ ಅಸ್ಪೃಶ್ಯ ಬಂಧಗಳಿಗೆ ಸಮಾನತೆ ಮತ್ತು ಸಮ್ಮಾನಗಳು ಸಿಗುವಂತೆ ಮಾಡಲು ತುಂಬಾ ವರ್ಷಗಳವರೆಗೆ ಅವರು ಪ್ರಯತ್ನಿಸಿದರು. ಆದರೆ ದೌರ್ಭಾಗ್ಯದಿಂದ ಈ ಪ್ರಯತ್ನಗಳಲ್ಲಿ ವಿಫಲರಾದ ಕಾರಣ ಅವರು ಹಿಂದು ಧರ್ಮದಿಂದ ಹೊರಹೋಗುವ ವಿಚಾರ ಮಾಡತೊಡಗಿದರು. ಈಸಾಯೀ ಮತ್ತು ಮುಸಲ್ಮಾನ ನಾಯಕರು ಅವರಿಗೆ ತಮ್ಮ ಮತ ಸ್ವೀಕರಿಸಬೇಕೆಂದು ಆಸೆ ತೋರಿಸತೊಡಗಿದರು. ಆಗ ಅದನ್ನು ತಿರಸ್ಕರಿಸುತ್ತಾ ಬಾಬಾಸಾಹೇಬರು "ಈಸಾಯಿ ಮತಸ್ವೀಕಾರ ಎಂದರೆ (ಆ ದಿನಗಳಲ್ಲಿ) ಬ್ರಿಟಿಷರ ಕೈ ಬಲಪಡಿಸಿದಂತಾಗುತ್ತದೆ. ಇಸ್ಲಾಮಿನಲ್ಲಂತೂ ಮಾನವ ಸ್ವಾತಂತ್ರ್ಯದ ನೆರಳೂ ಇಲ್ಲ" ಎಂದರು.

ಮುಂದೆ ಗಾಂಧೀಜಿಯವರಿಗೆ ಬರೆದ ಪತ್ರದಲ್ಲಿ "ನಾನೀಗ ತೆಗೆದುಕೊಳ್ಳಲಿರುವ ನಿರ್ಣಯದಿಂದ ಭಾರತೀಯ ಸಂಸ್ಕೃತಿ ಪರಂಪರೆಗಳಿಗೆ ಕಿಂಚಿತ್ತೂ ಹಾನಿ ಆಗುವುದಿಲ್ಲ ಎಂದು ನಿಮಗೆ ವಚನ ಕೊಡುತ್ತೇನೆ" ಎಂದು ತಿಳಿಸಿದ್ದರು.

## 5.7 ಇಂದೂರಿನ ಶಿಬಿರ : ಸಾಮಯಿಕ ಮಾರ್ಗದರ್ಶನ

ಸಂಘದ ಪ್ರಮುಖ ಕಾರ್ಯಕರ್ತರಿಗೆ ಸಂಘದ ಬಗ್ಗೆ ಕಾಲಕಾಲಕ್ಕೆ ಯೋಗ್ಯ ಮಾರ್ಗದರ್ಶನ ಸಿಗಬೇಕೆಂಬುದಕ್ಕಾಗಿ (೧೯೫೪ರ ಸಿಂಧಿ ಬೈಠಕ್ ನಂತರ) ೧೯೬೦ರಲ್ಲಿ ಇಂದೋರ್ ನಲ್ಲಿ ಕಾರ್ಯಕರ್ತರ ಎರಡನೆಯ ಶಿಬಿರ ನಡೆಯಿತು. ಇದರಲ್ಲಿ ಸಂಘದ ವಿಭಾಗ ಸ್ತರದ ಕಾರ್ಯಕರ್ತರ ಜೊತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದ ಪ್ರಮುಖ ಕಾರ್ಯಕರ್ತರೂ ಭಾಗವಹಿಸಿದ್ದರು. ಅಲ್ಲಿ ಶ್ರೀ ಗುರೂಜಿಯವರಿಂದ ಪ್ರತಿದಿನ ವಿಚಾರ ಮಂಡನೆ ಮತ್ತು ಕಾರ್ಯಕರ್ತರಿಂದ ಮುಕ್ತ ಚರ್ಚೆ ನಡೆಯುತ್ತಿತ್ತು. ಇದರಲ್ಲಿ ಸಂಘದ ನಿತ್ಯ ಮತ್ತು ನೈಮಿತ್ತಿಕ ಕಾರ್ಯದ ಎರಡೂ ರೂಪಗಳನ್ನು ಸ್ಪಷ್ಟ ಪಡಿಸುತ್ತಾ ಶ್ರೀ ಗುರೂಜಿಯವರು "ಯಾವುದೇ ಪರಿಸ್ಥಿತಿಯಲ್ಲಿಯೂ ದೈನಂದಿನ ಶಾಖೆಯ ಕಾರ್ಯಕ್ರಮಗಳಲ್ಲಿ ಶಿಥಿಲತೆ ಬರಬಾರದು" ಎಂದರು. ವರ್ಣವ್ಯವಸ್ಥೆಗೆ ಸಂಬಂಧಪಟ್ಟಂತೆ ಅವರು ಹೇಳಿದ್ದು - "ಮರವೊಂದು ಬೆಳೆಯುತ್ತಿರುವಾಗ ಅದರ ಒಣಗಿರುವ ಕೊಂಬೆಗಳು ಉದುರಿ ಆ ಜಾಗದಲ್ಲಿ ಹೊಸ ಕೊಂಬೆಗಳು ಹುಟ್ಟಿಕೊಳ್ಳುತ್ತವೆ. ಅದೇ ರೀತಿ ಸಮಾಜದಲ್ಲಿ ಒಂದುಕಾಲದಲ್ಲಿದ್ದ ವರ್ಣವ್ಯವಸ್ಥೆಯಲ್ಲಿ ಬದಲಾವಣೆ ಬಂದು ಸಮಾಜ ತನಗೆ ಬೇಕಾದಂತೆ ಹೊಸ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತದೆ. ಇದು ಸಮಾಜದ ವಿಕಾಸಪ್ರಕ್ರಿಯೆಯ ಸ್ವಾಭಾವಿಕರೀತಿ". ಮುಂದೆ ಶ್ರೀ ಗುರೂಜಿಯವರು ಕಾರ್ಯಕರ್ತರಿಗೆ ಸಂಘದ ಅನುಶಾಸನದ ಕಲ್ಪನೆ ಮತ್ತು ಸಂಘಕಾರ್ಯದ ಸ್ವರೂಪವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ತಿಳಿಸಿದರು.

## 5.8 ರಾಜಕಾರಣದೊಂದಿಗೆ ಸಂಬಂಧವಿಲ್ಲ

ರಾಷ್ಟ್ರಜೀವನದ ವಿಭಿನ್ನ ಕ್ಷೇತ್ರಗಳನ್ನು ಹಿಂದುತ್ವದಿಂದ ಪ್ರಭಾವಿತಗೊಳಿಸುವುದಕ್ಕಾಗಿ ಶ್ರೀ ಗುರೂಜಿಯವರು ಕೆಲವು ಪ್ರಮುಖ ಪ್ರಚಾರಕರನ್ನು ಆ ಕ್ಷೇತ್ರಗಳೀಗೆ ಕೊಟ್ಟಿದ್ದರು. ಡಾ|| ಶ್ಯಾಮಾಪ್ರಸಾದ ಮುಖರ್ಜಿಯವರು ಮೊದಲೇ ಬಂಗಾಲದಲ್ಲಿ ಸ್ಥಾಪಿಸಿದ್ದ ಜನಸಂಘಕ್ಕೆ ಅಖಿಲ ಭಾರತೀಯ ಸ್ವರೂಪ ಕೊಡುವುದಕ್ಕಾಗಿ ಕಾರ್ಯಕರ್ತರನ್ನು ಕೇಳಲು ಶ್ರೀ ಗುರೂಜಿಯವರ ಬಳಿ ಬಂದರು.ಶ್ರೀ ಗುರೂಜಿಯವರು ಅವರಿಗೆ ಸಹಕಾರಿಗಳಾಗಿ ದೀನದಯಾಳ ಉಪಾಧ್ಯಾಯ, ಅಟಲಬಿಹಾರಿ ವಾಜಪೇಯಿ, ನಾನಾಜಿ ದೇಶಮುಖ್ ಮುಂತಾದ ಪ್ರಮುಖ ಪ್ರಚಾರಕರನ್ನು ಕೊಟ್ಟರು. ಆ ಸಮಯದಲ್ಲಿ ಅವರಿಗೆ "ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ರಾಜಕಾರಣಕ್ಕೆ ಎಳೆಯಬಾರದು. ಏಕಂದರೆ ಅದು ಯಾವುದೇ ರಾಜಕೀಯ ಪಕ್ಷದ ಅಧೀನದಲ್ಲಿ ಕೆಲಸ ಮಾಡುವುದಿಲ್ಲ. ಅದರ ನಿಜವಾದ ಕೆಲಸ ರಾಷ್ಟ್ರದ ಸಾಂಸ್ಕೃತಿಕ ಜೀವನವನ್ನು ಬೆಳೆಸುವುದು" ಎಂದು ಶ್ರೀ ಗುರೂಜಿಯವರು ಸ್ಪಷ್ಟಪಡಿಸಿದ್ದರು. ಡಾ|| ಮುಖರ್ಜಿಯವರು ಸಂಘದ ಈ ದೃಷ್ಟಿಯನ್ನು ಸಂತೋಷದಿಂದ ಒಪ್ಪಿದರು ಮತ್ತು ತಾವು ಹಿಂದುರಾಷ್ಟ್ರದ ಆದರ್ಶಗಳೊಂದಿಗೆ ಪೂರ್ಣ ಸಹಮತ ಹೊಂದಿದ್ದೇವೆಂದರು.

ಇದೇ ರೀತಿ ಶ್ರೀ ಗುರೂಜಿಯವರು ಕಾರ್ಮಿಕ ಕ್ಷೇತ್ರಕ್ಕೆ ಕಳಿಸಲ್ಪಟ್ಟ ದತ್ತೋಪಂತ ಠೇಂಗಡಿಯವರಿಗೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರಿಗೆ, ಶಿಕ್ಷಣ ಕ್ಷೇತ್ರದ ಕಾರ್ಯಕರ್ತರಿಗೆ ಅವರವರ ಕ್ಷೇತ್ರಕ್ಕೆ ಬೇಕಾದ ಮಾರ್ಗದರ್ಶನ ನೀಡಿದರು.

## 5.9 ಹಿಂದು ಸಮಾಜಕ್ಕೊಂದು ಅಪೂರ್ವ ಕೊಡುಗೆ

ಶ್ರೀ ಗುರೂಜಿಯವರೇ ವಿಶೇಷ ಗಮನಕೊಟ್ಟು ಪ್ರಾರಂಭಿಸಿದ ಕ್ಷೇತ್ರವೆಂದರೆ ವಿಶ್ವ ಹಿಂದು ಪರಿಷತ್ತು. ಧಾರ್ಮಿಕ ಮನೋಭಾವದ ಜಾಗೃತಿಯ ಅನಿವಾರ್ಯತೆಯನ್ನು ಪೂರೈಸುವುದಕ್ಕಾಗಿ ಈ ವೇದಿಕಯನ್ನು ಸ್ಥಾಪಿಸುವ ವಿಚಾರ

ಅವರಿಗಿತ್ತು. ಇದರ ಶುಭಾರಂಭ ಮುಂಬಯಿಯಲ್ಲಿರುವ ಸ್ವಾಮಿ ಚಿನ್ಮಯಾನಂದರ ಸಾಂದೀಪಿನಿ ಆಶ್ರಮದಲ್ಲಿ ಆಯಿತು. ಈ ಬೈಠಕ್ ನಲ್ಲಿ ಸಿಖ್ಖ ಪಂಥದ ಪ್ರಮುಖ ಮಾ|| ತಾರಾಸಿಂಹ, ದಲಾಯಿ ಲಾಮಾ, ಜೈನ ಆಚಾರ್ಯರು, ಕನ್ಹಯ್ಯಲಾಲ ಮುನ್ಶಿ ಮೊದಲಾದವರ ಜೊತೆ ಅನ್ಯಾನ್ಯ ಸಂತರೂ ಇದ್ದರು. ೧೯೬೬ ರಲ್ಲಿ ತೀರ್ಥರಾಜ ಪ್ರಯಾಗದ ಕುಂಭಮೇಳದ ಶುಭ ಸಂದರ್ಭದಲ್ಲಿ ವಿಶ್ವ ಹಿಂದು ಸಮ್ಮೇಳನದಲ್ಲಿ ಇದು ವಿಧಿವತ್ತಾಗಿ ಸ್ಥಾಪನೆ ಆಯಿತು. ದಿನಾಂಕ ೨೨,೨೩,೨೪, ಜನವರಿ ೧೯೬೬ ರ ಈ ಮೂರು ದಿನಗಳ ಸಮ್ಮೇಳನದಲ್ಲಿ ಪ್ರಪಂಚದೆಲ್ಲೆಡೆಯಿಂದ ಭಾಗವಹಿಸಲು ಬಂದಿದ್ದ ಪ್ರತಿನಿಧಿ ಬಂಧುಗಳಿಗೆ ಅಭೂತಪೂರ್ವ ಉತ್ಸಾಹ ಮತ್ತು ಹಿಂದು ಏಕಾತ್ಮತೆಯ ಅನುಭವವಾಯಿತು. ಪ್ರಯಾಗದಲ್ಲಿ ವಿಶ್ವಹಿಂದು ಪರಿಷತ್ತಿನ ಮಾರ್ಗದರ್ಶನಕ್ಕಾಗಿ ಶ್ರೀ ಗುರೂಜಿಯವರು ಕೆಲವು ಪ್ರಮುಖ ಸೂತ್ರಗಳನ್ನು ಮುಂದಿಟ್ಟರು.

### 5.10 ನ ಹಿಂದುಃ ಪತಿತೋ ಭವೇತ್

೧೯೬೬ರಲ್ಲಿ ಪ್ರಯಾಗದ ಕುಂಭಮೇಳ ಇನ್ನೊಂದು ದೃಷ್ಟಿಯಿಂದಲೂ ಮಹತ್ವದ್ದು. ಶತಶತಮಾನಗಳಿಂದ ಹಿಂದುಸಮಾಜದ ಮನಸ್ಸಿನಲ್ಲಿ ಒಮ್ಮೆ ಯಾರದರೂ ಹಿಂದುಧರ್ಮವನ್ನು ಬಿಟ್ಟು ಮುಸಲ್ಮಾನನೋ ಕ್ರೈಸ್ತನೋ ಆಗಿಬಿಟ್ಟರೆ ಅವನಿಗೆ ಪುನಃ ಹಿಂದುಧರ್ಮದಲ್ಲಿ ಪ್ರವೇಶವಿಲ್ಲ ಎಂಬ ವಿಕೃತಭಾವನೆಯಿಂದಾಗಿ ಹಿಂದುಸಮಾಜದಿಂದ ಅಹಿಂದುಗಳಾಗುವ ಏಕಮುಖೀ ಪ್ರವಾಹ ಹರಿಯುತ್ತಲೇ ಇತ್ತು. ಇದರಿಂದಾಗಿ ಹಿಂದುಗಳ ಸಂಖ್ಯೆ ಕಡಿಮೆಯಾಗಿ ಅಹಿಂದುಗಳ ಸಂಖ್ಯೆ ಹೆಚ್ಚತೊಡಗಿತು.ಪ್ರಯಾಗ ಸಮ್ಮೇಳನದಲ್ಲಿ ವಿಶ್ವ ಹಿಂದು ಪರಿಷತ್ತಿನ ವೇದಿಕೆಯಿಂದ ಶಂಕರಾಚಾರ್ಯರೂ ಒಳಗೊಂಡಂತೆ ಎಲ್ಲಾ ಸಂಪ್ರದಾಯಗಳ ಧರ್ಮಾಚಾರ್ಯರೂ ಏಕಕಂಠದಿಂದ - "ಅಹಿಂದುಗಳನ್ನು ತಮ್ಮ ಮೂಲ ಹಿಂದುಧರ್ಮಕ್ಕೆ ಕರೆತರುವುದು ಹಿಂದುಗಳೆಲ್ಲರ ಪವಿತ್ರ ಕರ್ತವ್ಯ" ಎಂದು ಘೋಷಿಸದರು.

ಅದೇ ಸಮಯದಲ್ಲಿ 'ಶುದ್ಧಿ' ಶಬ್ದದ ಬದಲಿಗೆ 'ಪರಾವರ್ತನ' ಎಂಬ ಶಬ್ದ ಬಳಕೆಗೆ ಬಂದಿತು.ಮುಂದೆ ಪೂ.ಪೇಜಾವರ ಶ್ರೀಗಳು ಇದಕ್ಕೆ 'ನ ಹಿಂದುಃ ಪತಿತೋ ಭವೇತ್ (ಹಿಂದು ಎಂದೂ ಪತಿತನಾಗುವುದಿಲ್ಲ)' ಎಂಬ ಮಂತ್ರ ರೂಪವನ್ನು ಕೊಟ್ಟರು. ಹಿಂದುವೊಬ್ಬ ಮುಸಲ್ಮಾನ ಅಥವಾ ಕ್ರಿಶ್ಚಿಯನ್ ಆದರೆ ಅವನು ಸದಾಕಾಲಕ್ಕೂ ಭ್ರಷ್ಟ, ಪತಿತನಾಗುತ್ತಾನೆ. ಅವನನ್ನು ನಮ್ಮ ಧರ್ಮಕ್ಕೆ ಹಿಂದೆ ತರಲಾಗುವುದಿಲ್ಲ ಎಂಬ ಭ್ರಮೆಯನ್ನು ದೂರಮಾಡುವುದೇ ಈ ಮಂತ್ರದ ಉದ್ದೇಶ.

೧೯೭೬ರಲ್ಲಿ ಶ್ರೀಗುರೂಜಿಯವರ ೬೭ನೇ ಜನ್ಮದಿನದ ಸಂದರ್ಭದಲ್ಲಿ ದೇಶಾದ್ಯಂತ ವ್ಯಾಪಕವಾಗಿ ಜನಜಾಗರಣ ಮತ್ತು ಶ್ರೀಗುರೂಜಿಯವರಿಗೆ ಶ್ರದ್ಧಾನಿಧಿ ಸಮರ್ಪಣೆಯ ಕಾರ್ಯಕ್ರಮಗಳು ನಡೆದವು. ಆ ಸಮಯದಲ್ಲಿ ಅವರು ಎಲ್ಲಕಡೆ ತಮ್ಮ ಭಾಷಣಗಳಲ್ಲಿ ಮತಾಂತರಿತ ಹಿಂದು ಧರ್ಮದ ಪ್ರವಾಹದಲ್ಲಿ ಸಮರಸರಾಗಲು ಕರೆ ನೀಡಿದರು. ೧೯೭೨ರಲ್ಲಿ ಶ್ರೀ ಗುರೂಜಿಯವರು ಪೂಜ್ಯ ಪೇಜಾವರ ಸ್ವಾಮೀಜಿಯವರನ್ನು ಭೇಟಿ ಮಾಡಿದ್ದರು. ಆ ಸಮಯದಲ್ಲೂ ಸ್ವಾಮಿಜಿಯವರಿಗೆ ಈ ದಿಕ್ಕಿನಲ್ಲಿ ಪ್ರಯತ್ನಿಸಲು ಮನವಿ ಮಾಡಿದರು.

### 5.11 ಅಖಂಡಭಾರತ ಆಗುತ್ತದೆ

ಅದೇ ಸಮಯದಲ್ಲಿ ಸ್ವಾಮೀಜಿ ಗುರೂಜಿಯವರೊಡನೆ "ನಮ್ಮ ದೇಶ ಮತ್ತೊಮ್ಮೆ ಅಖಂಡವಾಗುತ್ತದೆಯೇ?" ಎಂದು ಕೇಳಿದರು. ಶ್ರೀ ಗುರೂಜಿಯವರು ಕೊಟ್ಟ ಉತ್ತರ - "ನಾವು ಸ್ನಾನಮಾಡುವಾಗ ಪ್ರತಿದಿನವೂ ಹೇಳುವ ಗಂಗೇಚ ಯಮುನೇಚೈವ .......... ಶ್ಲೋಕದಲ್ಲಿ ಸಿಂಧುವನ್ನು ನೆನೆಪಿಸಿಕೊಳ್ಳುತ್ತೇವೆ. ಇದರ ಅರ್ಥ ಸಿಂಧುವಿನ ಆಚೆಗಿರುವ ಎಲ್ಲಾ ಪ್ರದೇಶಗಳೂ ನಮ್ಮದೇ".ಸ್ವಾಮೀಜಿ ಕೇಳಿದರು "ಇದು ಯಾವಾಗ ಆಗುತ್ತದೆ?" ಶ್ರೀ

ಗುರೂಜಿಯವರು “ಹಿಂದು ಸಮಾಜವು ಅಸಂಘಟಿತವಾದ ಕಾರಣ ನಮ್ಮ ದೇಶ ವಿಭಜಿತವಾಯಿತು. ಒಮ್ಮೆ ಹಿಂದು ಸಮಾಜ ಸುಸಂಘಟಿತ ಮತ್ತು ಸಾಮರ್ಥ್ಯಶಾಲಿಯಾದರೆ ಭಾರತ ಅಖಂಡವಾಗುವ ದಿನ ದೂರ ಇಲ್ಲ” ಎಂದರು.

## 5.12 ವನವಾಸಿಗಳೆಲ್ಲರೂ ಹಿಂದುಗಳೇ

ಈಶಾನ್ಯ ಭಾರತದಲ್ಲಿ ಅನೇಕ ಗಿರಿಜನ ಜಾತಿಗಳ ಬಂಧುಗಳ ಮಧ್ಯೆ ಅವರು ಗೋಮಾಂಸ ತಿನ್ನುವುದರಿಂದಾಗಿ ಹಿಂದುಗಳಲ್ಲ ಎಂದು ಕ್ರೈಸ್ತ ಮಿಶನರಿಗಳು ಒಂದೇ ಸಮ ಪ್ರಚಾರ ಮಾಡುತ್ತಿದ್ದರು. ೧೯೬೭ರಲ್ಲಿ ಅಸ್ಸಾಂ ಪ್ರಾಂತದ ಗೌಹಾಟಿಯಲ್ಲಿ ವಿಶ್ವ ಹಿಂದು ಪರಿಷತ್ತಿನ ಸಮ್ಮೇಳನ ನಡೆಯಿತು.ಅಲ್ಲಿ ದ್ವಾರಕಾಪೀಠದ ಶಂಕರಾಚಾರ್ಯರು ಮತ್ತು ಅಸ್ಸಾಂ ನ ಅನೇಕ ವೈಷ್ಣವ ಪೀಠಾಧೀಶರು ಉಪಸ್ಥಿತರಿದ್ದರು. ಶ್ರೀ ಗುರೂಜಿಯವರು ಅವರೆಲ್ಲರೊಡನೆ ಮಾತನಾಡಿದರು. “ ಎಲ್ಲ ಜನಜಾತಿಗಳವರೂ ಮೂಲಭೂತವಾಗಿ ಹಿಂದುಗಳೇ. ದೀರ್ಘಕಾಲದವರೆಗೆ ಉಳಿದ ಹಿಂದು ಸಮಾಜ, ಸಂಸ್ಕೃತಿಗಳ ಜೊತೆ ಅವರ ಸಂವಾದ, ಸಂಪರ್ಕಗಳು ತುಂಡಾದವು. ಆದ್ದರಿಂದ ಹಿಂದುಧರ್ಮದ ಸರಿಯಾದ ಕಲ್ಪನೆ ಅವರಿಗೆ ಸಿಗಲಿಲ್ಲ. ಆದ್ದರಿಂದ ಅವರೆಲ್ಲೇನೂ ತಪ್ಪಿಲ್ಲ” ಎಂದು ಅವರನ್ನು ಒಪ್ಪಿಸಿದರು.
ಆ ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ದ್ವಾರಕಾ ಪೀಠಾಧೀಶರು “ಜನಜಾತಿ ಬಂಧುಗಳಾದ ನೀವೆಲ್ಲರೂ ಹಿಂದುಗಳೇ. ಈ ಪರ್ವತ ಪ್ರದೇಶಗಳಲ್ಲಿ ಗೋಮಾಂಸವನ್ನು ಬಿಟ್ಟು ಬೇರೆ ಯಾವುದೇ ಸುಲಭದ ಆಹಾರ ನಿಮಗೆ ಸಿಗುತ್ತಿರಲಿಲ್ಲ. ಹಾಗಾಗಿ ಗೋಮಾಂಸ ತಿನ್ನುವುದು ನಿಮಗೆ ಅನಿವಾರ್ಯವಾಯಿತು. ಇದರಲ್ಲಿ ನಿಮ್ಮದೇನು ತಪ್ಪಿಲ್ಲ” ಎಂದು ಘೋಷಣೆ ಮಾಡಿದರು. ಈ ಘೋಷಣೆ ಕೇಳಿ ಎಲ್ಲ ಜನಜಾತಿಗಳ ನಾಯಕರಿಗೂ ಪ್ರತಿನಿಧಿಗಳಿಗೂ ಸಂತೋಷವಾಯಿತು.ಕ್ರೈಸ್ತರ ಅಪಪ್ರಚಾರವನ್ನು ಎದುರಿಸುವ ವಿಶ್ವಾಸ ಅವರಲ್ಲಿ ಜಾಗೃತವಾಯಿತು.

## 5.13 ವನವಾಸಿ ಬಂಧುಗಳ ವಿಕಾಸಕ್ಕಾಗಿ

ವನವಾಸಿ ಬಂಧುಗಳಲ್ಲಿ ತಮ್ಮ ಪರಂಪರಾಗತ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಬಗ್ಗೆ ಸ್ವಾಭಿಮಾನ ಜಾಗೃತವಾಗಬೇಕು ಮತ್ತು ಅವುಗಳ ರಕ್ಷಣೆಯ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಆ ಬಂಧುಗಳ ಸರ್ವಾಂಗೀಣ ವಿಕಾಸವೂ ಆಗಬೇಕು. ಸಮಗ್ರ ಭಾರತೀಯ ಸಮಾಜದಲ್ಲಿ ಅವರು ಸಮರಸರಾಗಬೇಕು. ಈ ದೃಷ್ಟಿಯಿಂದ ವನವಾಸಿ ಕಲ್ಯಾಣ ಆಶ್ರಮದ ಸ್ಥಾಪನೆ ಮತ್ತು ಅದರ ಬೆಳವಣಿಗೆಯ ಬಗ್ಗೆ ಶ್ರೀ ಗುರೂಜಿಯವರೇ ಸ್ವತಃ ಗಮನ ಕೊಟ್ಟರು.

## 5.14 ‘ ಹಿಂದವಃ ಸೋದರಾಃ ಸರ್ವೇ’

೧೯೬೯ರಲ್ಲಿ ಕರ್ನಾಟಕದ ಉಡುಪಿಯಲ್ಲಿ ನಡೆದ ವಿಶ್ವ ಹಿಂದು ಪರಿಷತ್ತಿನ ಸಮ್ಮೇಳನವು  ಹಿಂದುಸಮಾಜ ಪುನರುಜ್ಜೀವನದ ಒಂದು ಐತಿಹಾಸಿಕ ಸಂದರ್ಭವಾಯಿತು. ವೇದಿಕೆಯ ಮೇಲೆ ಹಿಂದುಧರ್ಮದ ಜೈನ, ಬೌದ್ಧ, ಸಿಖ್, ವೀರಶೈವ ಮೊದಲಾದ ಎಲ್ಲ ಸಂಪ್ರದಾಯಗಳ (ಹರಿಜನ ಪೀಠಾಧೀಶರೂ ಸೇರಿದಂತೆ) ಧರ್ಮಾಚಾರ್ಯ, ಶಂಕರಾಚಾರ್ಯರೂ ಇದ್ದರು. ಕರ್ನಾಟಕದ್ಯಂತದಿಂದ ಬಂದ ೧೫,೦೦೦ ಪ್ರತಿನಿಧಿಗಳು ಸಭೆಯಲ್ಲಿದ್ದರು. ಅವರೆಲ್ಲರ ಮುಂದೆ ಎಲ್ಲ ಧರ್ಮಾಚಾರ್ಯರ ಸಂಯುಕ್ತ ಆದೇಶದಂತೆ “ಹಿಂದುಧರ್ಮದಲ್ಲಿ ಅಸ್ಪೃಶ್ಯತೆಗೆ ಸ್ಥಾನವಿಲ್ಲ” ಎಂಬ ಆಶಯದ ಸುದೀರ್ಘ ನಿರ್ಣಯ ಸ್ವೀಕರಿಸಲಾಯಿತು. ಈ ಸಂದೇಶವನ್ನು ಪೇಜಾವರ ಮಠಾಧೀಶ ಪೂಜ್ಯ ವಿಶ್ವೇಶತೀರ್ಥ ಸ್ವಾಮಿಗಳೂ ಸೂತ್ರರೂಪದಲ್ಲಿ “ಹಿಂದವಃ ಸೋದರಾಃ ಸರ್ವೇ’ ಎಂಬ ಮಂತ್ರವಾಗಿ ಕೊಟ್ಟರು. ಈ

ನಿರ್ಣಯ ಆಗುತ್ತಿದ್ದಂತೆಯೇ ಗುರೂಜಿ ಆನಂದಭಾಷ್ಪ ಹರಿಸಿದರು. ಅವರ ಸೂಚನೆಯಂತೆ ಸಭೆ ಧರ್ಮಾಚಾರ್ಯರಿಗೆ ಪ್ರಚಂಡ ಜಯಘೋಷದೊಂದಿಗೆ ಅಭಿನಂದನೆ ಸಲ್ಲಿಸಿತು. ಅದರಲ್ಲಿ ಸ್ವತಃ ಶ್ರೀ ಗುರೂಜಿಯವರ ಧ್ವನಿಯೂ ಸೇರಿತ್ತು. ಮಾನ್ಯ ಯಾದವರಾವ್ ಜೀಯವರ ಅನಿಸಿಕೆ: “ಅದು ಶ್ರೀ ಗುರೂಜಿಯವರ ಜೀವನದ ಸರ್ವೋಚ್ಚ ಆನಂದದ ಕ್ಷಣ”.

## 6 ಅನುಪಮ ಪತ್ರವ್ಯವಹಾರ

ಶ್ರೀ ಗುರೂಜಿಯವರಿಂದ ಸಂಘಕ್ಕೂ ದೇಶಕ್ಕೂ, ಒಂದಲ್ಲ ಒಂದು ರೀತಿಯಲ್ಲಿ ನಿರಂತರವಾಗಿ ಅಮೂಲ್ಯ ಮಾರ್ಗದರ್ಶನ ಸಿಗುತ್ತಲೇ ಇತ್ತು. ಇದರ ಜೊತಯಲ್ಲಿ ಅವರು ದೇಶದ ಅನ್ಯಾನ್ಯ ಶ್ರೇಷ್ಠ ಸಜ್ಜನರೊಂದಿಗೆ, ಸಂಸ್ಥೆಗಳೊಂದಿಗೆ ಸಂಘದ ಹಿತೈಷಿಗಳೊಂದಿಗೆ ದೇಶವಿದೇಶಗಳಲ್ಲಿರುವ ಸ್ವಯಂಸೇವಕರೊಂದಿಗೆ ವ್ಯಾಪಕರೀತಿಯಲ್ಲಿ ಪತ್ರವ್ಯವಹಾರ ಮಾಡುತ್ತಿದ್ದರು. ಅವರು  ತಮ್ಮ ಕೈಗಳಿಂದಲೇ ಪತ್ರ ಬರೆಯುತ್ತಿದ್ದರು. ಕೆಲವನ್ನು ಮಾತ್ರ ತಮ್ಮ ಸಹಾಯಕ ಡಾ|| ಆಬಾಜಿ ಥತ್ತೆಯವರ ಮೂಲಕ ಬರೆಸುತ್ತಿದ್ದರು. ಅವರ ಪತ್ರಗಳು ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟಿರುತ್ತಿದ್ದವು. ಬಹುಶಃ ಮಹಾತ್ಮಗಾಂಧಿಯವರನ್ನು  ಬಿಟ್ಟರೆ ತಮ್ಮ ಜೀವಿತಾವಧಿಯಲ್ಲಿ  ಇಷ್ಟು ದೊಡ್ಡ ಪ್ರಮಾಣದಲ್ಲಿ ಇಷ್ಟು ವಿಷಯಗಳಲ್ಲಿ ಪತ್ರವ್ಯವಹಾರ ಮಾಡಿದ ಇನ್ನೊಬ್ಬ ಮಹಾಪುರುಷರಿಲ್ಲ. ಅದೇ ರೀತಿ ವರ್ಷಕ್ಕೆರಡು ಬಾರಿ ದೇಶದ ಎಲ್ಲಾ ಭಾಗಗಳಿಗೂ ಅನೇಕ ವರ್ಷಗಳವರೆಗೆ ಪ್ರವಾಸ ಮಾಡಿದ ಬೇರೆ ಮಹಾಪುರುಷರೂ ಇಲ್ಲ.

# 7 ಸಂಧ್ಯಾಕಾಲದ ಪ್ರಾರಂಭ

ಕೊನೆಗೂ ಈ ಅತಿಮಾನವೀಯ ಪರಿಶ್ರಮಗಳ ಪ್ರಭಾವ ಶ್ರೀ ಗುರೂಜಿಯವರ ಶರೀರದ ಮೇಲೆ ಆಯಿತು. ಅವರಿಗೆ ೬೦ ವರ್ಷ ಆಗುವಾಗ ಅವರ ಆರೋಗ್ಯ ನಿಧಾನವಾಗಿ ಕುಸಿಯತೊಡಗಿತು. ೧೯೭೦ ರ ಮೇ ತಿಂಗಳಿನಲ್ಲಿ ಅವರ ಎದೆಯ ಮೇಲೆ ಒಂದು ಗಂಟು ಕಾಣಿಸಿಕೊಂಡಿತು. ಅದು ಕರ್ಕರೋಗ(ಕ್ಯಾನ್ಸರ್)ದ್ದು ಎಂದು ತಿಳಿಯಿತು. ಆದರೂ ಮೊದಲೇ ನಿಶ್ಚಯವಾದ ಮೇ, ಜೂನ್ ತಿಂಗಳುಗಳ ಪ್ರವಾಸ ಪೂರ್ಣ ಆದ ನಂತರವೇ ಚಿಕಿತ್ಸೆ ಆಗಬೇಕೆಂದು ಶ್ರೀ ಗುರೂಜಿ ನಿಶ್ಚಯಿಸಿದರು. ಜುಲೈ ೧ ರಂದು ಮುಂಬಯಿಯ ಪ್ರಖ್ಯಾತ ಟಾಟಾ ಕ್ಯಾನ್ಸರ್ ಚಿಕಿತ್ಸಾಲಯದಲ್ಲಿ ಡಾ||ಪ್ರಫುಲ್ಲ ದೇಸಾಯಿ ಶ್ರೀ ಗುರೂಜಿಯವರಿಗೆ ಶಸ್ತ್ರಚಿಕಿತ್ಸೆ ನಡೆಸಿದರು. ಡಾ|| ದೇಸಾಯಿಯವರಿಗೆ  ಸಂಘದ ಪರಿಚಯ ಮೊದಲು ಇರಲಿಲ್ಲ. ಅವರು ಶ್ರೀ ಗುರೂಜಿಯವರ ಬಗ್ಗೆ "ಶ್ರೀ ಗುರೂಜಿ ೬೫ ವರ್ಷದ ವಯಸ್ಸಿನಲ್ಲಿ ಇಷ್ಟು ಆಳವಾದ ಮತ್ತು ದೀರ್ಘವಾದ ಶಸ್ತ್ರಚಿಕಿತ್ಸೆಯನ್ನು ಹೇಗೆ ಸಹಿಸಿಕೊಳ್ಳುತ್ತಾರೆ ಎಂಬ ಪ್ರಶ್ನೆ ನನ್ನ ಮನಸ್ಸಿನಲ್ಲಿತ್ತು. ಆದರೆ ಅದನ್ನು ಸಹಿಸುವಲ್ಲಿ ಅವರು ತೋರಿದ ಶಾಂತಿ, ಸಹನೆ ಮತ್ತು ನೀಡಿದ ಸಹಕಾರ ಅದ್ಭುತವಾಗಿತ್ತು. ಮರುದಿನವೇ ಅವರು ನಡೆದಾಡತೊಡಗಿದರು" ಎಂದು ಬರೆದಿದ್ದಾರೆ. ಶ್ರಿ ಗುರೂಜಿ ಡಾಕ್ಟರೊಡನೆ ಶಸ್ತ್ರಚಿಕಿತ್ಸೆಯ ನಂತರ ತಾವು ಎಷ್ಟು ಸಮಯ ಬದುಕಬಹುದು ಎಂದು ಕೇಳಿದ್ದರು. ಡಾಕ್ಟರರ ಉತ್ತರ ಕೇಳಿದ ಶ್ರೀ ಗುರೂಜಿ " ಒಳ್ಳೆಯದು ! ಇನ್ನೂ ತುಂಬಾ ಸಮಯ ಉಳಿದಿದೆ. ಈ ಅವಧಿಯಲ್ಲಿ ನಾನು ತುಂಬಾ ಕೆಲಸ ಮಾಡಬೇಕಾಗಿದೆ" ಎಂದರು. ಆಗಾಗ ಡಾ|| ದೇಸಾಯಿ ಶ್ರೀ ಗುರೂಜಿಯವರನ್ನು ಪರೀಕ್ಷಿಸುತ್ತಿದ್ದರು. ಕ್ರಮೇಣ ನಿತ್ಯಕ್ರಮದಂತೆ ಪತ್ರಲೇಖನ, ಶಾಖಾಭೇಟಿ, ಸ್ವಯಂಸೇವಕರ ಜೊತೆ  ಒಡನಾಟ ಮೊದಲಾದ ಕಾರ್ಯಕ್ರಮಗಳು ಪುನರಾರಂಭವಾದವು.

## 7.1 ಠಾಣೆ ಶಿಬಿರದಲ್ಲಿ ಚಿಂತನೆ

ಗುರೂಜಿಯವರ ಪ್ರವಾಸ ನಡೆಯುತ್ತಲೇ ಇತ್ತು. ೧೯೭೧ ರ ಕೊನೆಯಲ್ಲಿ ಹೆಚ್ಚು ಅನಾರೋಗ್ಯದಿಂದ ಇದ್ದರು. ಗುರೂಜಿಯವರಿಗೆ ತಮ್ಮ ಅಂತ್ಯಕಾಲ ಸಮೀಪಿಸಿದೆ ಎನಿಸಿತು. ಹಿಂದುಪರಂಪರೆಗೆ ಅನುಗುಣವಾಗಿ ಪ್ರಮುಖ ಕಾರ್ಯಕರ್ತರೆಲ್ಲರೊಡನೆ ಕೊನೆಯ ಬಾರಿ ಮಾತುಕತೆ ನಡೆಸಬೇಕೆಂದು ಅವರು ನಿಶ್ಚಯಿಸಿದರು. ಅದರಂತೆಯೇ ಮಹಾರಾಷ್ಟ್ರದ ಠಾಣೆ ನಗರದಲ್ಲಿ ಪೂಜ್ಯ ಪಾಂಡುರಂಗಶಾಸ್ತ್ರೀ ಆಠವಲೆಯವರ 'ತತ್ವಜ್ಞಾನವಿದ್ಯಾಪೀಠ' ದಲ್ಲಿ ಈ ಕಾರ್ಯಕ್ರಮ ನಡೆಯಿತು. ಸಂಘಕಾರ್ಯ ಮತ್ತು ರಾಷ್ಟ್ರಜೀವನದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯಮಾಡುತ್ತಿರುವ ಪ್ರಮುಖ ಕಾರ್ಯಕರ್ತರ ಈ ಅಭ್ಯಾಸವರ್ಗದಲ್ಲಿ  ಶ್ರೀ ಗುರೂಜಿಯವರು ಉಪಸ್ಥಿತರಿದ್ದರು. ಈ ವರ್ಗದಲ್ಲಿ 'ಹಿಂದು' ಶಬ್ದದ ಬದಲು ಭಾರತೀಯ ಅಥವಾ ಇನ್ನೂ ಯಾವುದಾದರೂ ಶಬ್ದ ಬಳಸುವುದರಿಂದ ಸಾಂಪ್ರದಾಯಿಕತೆಯ ಆರೋಪ ಬರುವುದಿಲ್ಲ ಎಂಬ ಸಲಹೆ ಬಂದಿತು. ಗುರೂಜಿಯವರು ಹಿಂದು ವಿಚಾರದ ಭಾವಾತ್ಮಕ ಸ್ವರೂಪವನ್ನು ವಿವರಿಸಿ ಎಲ್ಲಾ ಸಮಸ್ಯೆಗಳ ಸಮಾಧಾನವನ್ನು ಇತಿಹಾಸ, ತರ್ಕ ಮತ್ತು ಪ್ರತ್ಯಕ್ಷ ಅನುಭವಗಳ ಆಧಾರದ ಮೇಲೆ ವಿವರಿಸಿದರು. ಇದರ ಜೊತೆಯಲ್ಲಿ ಬೇರೆ ವಿಚಾರಗಳ ಬಗ್ಗೆಯೂ ಆಳವಾಗಿ ಮತ್ತು ತುಲನಾತ್ಮಕವಾಗಿಯೂ ತಿಳಿಸಿದರು. ಮಾನವ ಕಲ್ಯಾಣಕ್ಕಾಗಿ, ಮಾನವನಿಗೆ ಅತ್ಯಧಿಕ ಶಾಶ್ವತ ಸುಖ ನೀಡಲು ಹಿಂದು ವಿಚಾರವೇ ಸಮರ್ಥವಾಗಿದೆ ಎಂಬುದನ್ನೂ ವಿಸ್ತಾರವಾಗಿ ತಿಳಿಸಿದರು.

## 7.2 ಸರ್ವತ್ರ ವಿಜಯ

ಠಾಣೆ ವರ್ಗದ ನಂತರ ಶ್ರೀ ಗುರೂಜಿಯವರ ಪ್ರವಾಸ ಮುಂದುವರೆಯಿತು. ೧೯೭೩ ರ ಫೆಬ್ರವರಿ ೪ ರಂದು ಬೆಂಗಳೂರಿನಲ್ಲಿ ಅವರ ಅಂತಿಮ ಸಾರ್ವಜನಿಕ ಸಮಾರಂಭದಲ್ಲಿ ಪೂರ್ಣ ಒಂದು ಗಂಟೆ ನಿಂತುಕೊಂಡೇ ಆಂಗ್ಲಭಾಷೆಯಲ್ಲಿ ನಿರರ್ಗಳ ಭಾಷಣ ಮಾಡಿದರು. ಅವರ ಭಾಷಣ ಕೇಳಿದ ಯಾರಿಗೂ ಶ್ರೀ ಗುರೂಜಿಯವರ ಜೀವನ  ಇನ್ನು ಕೆಲವೇ ದಿನಗಳದ್ದು ಎಂದು ಅನ್ನಿಸಲೇ ಇಲ್ಲ.

ನಂತರ ನಾಗಪುರದಲ್ಲಿ ಮಾರ್ಚ್ ೨೫ ರಂದು ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಅವರ ಅಂತಿಮ ಭಾಷಣ ಆಯಿತು. ತಮ್ಮ ಸಂಪೂರ್ಣ ಶಕ್ತಿಯನ್ನು  ಕ್ರೋಡೀಕರಿಸಿ ಮಾತನಾಡುವ ಅವರ ಪ್ರಯತ್ನ ನೋಡಿದವರಿಗೆ ಅವರು ಬೇಗ ಮಾತು ಮುಗಿಸುವುದು ಒಳ್ಳೆಯದು  ಅನಿಸುತ್ತಿತ್ತು. ಅಂತಹ ಸ್ಥಿತಿಯಲ್ಲೂ ಅವರು ೪೦ ನಿಮಿಷ ಮಾತನಾಡಿದರು. ತಮ್ಮ ಭಾಷಣದಲ್ಲಿ ಅವರು “ನಮ್ಮ ವಿಭಿನ್ನ ರೀತಿಯ ಕಾರ್ಯಗಳ  ಉದ್ದೇಶ ನಮ್ಮ ರಾಷ್ಟ್ರವನ್ನು ಶ್ರೇಷ್ಠ ಮತ್ತು ವಿಶ್ವಮಾನ್ಯವನ್ನಾಗಿ ಮಾಡುವುದು” ಎಂದರು. ‘ವಾತವರಣ ಹೇಗೇ ಇರಲಿ, ಹಿಂದು ಶಬ್ದಕ್ಕೆ ಎಲ್ಲ ಕಡೆ ಮಾನ್ಯತೆ ಸಿಗುತ್ತದೆ ಎಂಬ ವಿಶ್ವಾಸದೊಂದಿಗೆ ಕೆಲಸ ಮಾಡಿ’ ಎಂದು ಒತ್ತಿ ಹೇಳಿದರು.ಕೊನೆಯಲ್ಲಿ “ವಿಜಯ ಹೀ ವಿಜಯ ಹೈ (ಸರ್ವತ್ರ ವಿಜಯ ಸಿಗಲಿದೆ)” ಎಂದು ತಮ್ಮ ಮಾತನ್ನು ಮುಗಿಸಿದರು.

## 7.3 ಪೂರ್ವ ಸಂಕೇತ

ಮೇ ತಿಂಗಳಿನಲ್ಲಿ ನಾಗಪುರದಲ್ಲಿ ತೃತೀಯ ವರ್ಷದ ಸಂಘ ಶಿಕ್ಷಾ ವರ್ಗ ನಡೆಯುತ್ತಿತ್ತು. ಗುರೂಜಿಯವರು ವರ್ಗಕ್ಕೆ ಹೋಗುವುದು ಸಾಧ್ಯವಿರಲಿಲ್ಲ. ಆದ್ದರಿಂದ ಅವರ ಇಚ್ಛೆಯಂತೆಯೇ ಸ್ವಯಂಸೇವಕರನ್ನು  ಪ್ರಾಂತಶಃ ಭೇಟಿ ಮಾಡಲು ಕಾರ್ಯಾಲಯಕ್ಕೆ ಕರೆಯಲಾಗುತ್ತಿತ್ತು. ಅಲ್ಲಿ ಪರಿಚಯದ ನಂತರ ಸ್ವಯಂಸೇವಕರಿಗೆ , ಮನಸ್ಸು ಹಾಕಿ ದೃಢತೆಯಿಂದ ಸಂಘ ಕಾರ್ಯ ಮಾಡಲು ಕಳಕಳಿಯಿಂದ ಹೇಳುತ್ತಿದ್ದರು. ಇದು ಮೇ ೧೬ ರಿಂದ ೨೫ರವರೆಗೆ ನಡೆಯಿತು. ನಂತರ ಅದು ಸಾಧ್ಯವಾಗಲಿಲ್ಲ.ಆಮೇಲೆ ವಿವಿಧ ಪ್ರಾಂತಗಳಿಂದ ಸಂಘದ ಕಾರ್ಯಕರ್ತರು, ವಿವಿಧ ಕ್ಷೇತ್ರಗಳ ಪ್ರಮುಖರು ಕಾರ್ಯಾಲಯಕ್ಕೆ ಬಂದು ಶ್ರೀ ಗುರೂಜಿಯವರ ಆರೋಗ್ಯದ ಬಗ್ಗೆ ವಿಚಾರಿಸುವವರ ಪ್ರವಾಹ ನಿರಂತರವಾಗಿ ಇರುತ್ತಿತ್ತು. ರಾಷ್ಟ್ರಸೇವಿಕಾ ಸಮಿತಿಯ ಪ್ರಮುಖ ಸಂಚಾಲಿಕಾ ವಂದನೀಯ ಮೌಸೀ ಕೇಳಕರ್ ನೋಡಲು ಜೂನ್ ೩ ರಂದು ಬಂದಾಗ ಶ್ರೀ ಗುರೂಜಿ ಅರ್ಥಪೂರ್ಣವಾಗಿ ಹೇಳಿದರು: “ನಾನೀಗ ಪೂರ್ಣವಾಗಿ ಸಿದ್ಧನಿದ್ದೇನೆ” . ಜೂನ್ ೪ ರ ರಾತ್ರಿ ಜೊತೆಯಲ್ಲಿದ್ದವರು ಎಣ್ಣೆ ಹಚ್ಚಲು ಎಣ್ಣೆಯ ಬಾಟ್ಲಿ ತಂದರು. ಆದರೆ ಬಾಟ್ಲಿಯಲ್ಲಿ ಎಣ್ಣೆ ಇರಲ್ಲಿಲ್ಲ. ಅದನ್ನು ನೋಡಿ ಶ್ರೀ ಗುರೂಜಿ ನಗುತ್ತಾ “ಎಣ್ಣೆ ಮುಗಿದಿದೆಯಲ್ಲವೇ?ಒಳ್ಳೆಯದಾಯಿತು. ನಾಳೆ ಯಾರು ಎಣ್ಣೆ ಹಚ್ಚಿಕೊಳ್ಳುತ್ತಾರೆ?” ಎಂದರು. ಜೂನ್ ೫ ರ ಬೆಳಿಗ್ಗೆ ಅವರು ಸ್ನಾನ ಮಾಡಿದರು. ಸಂಧ್ಯಾವಂದನೆ ಮುಗಿಸಿದರು. ಕೊನೆಗೆ ರಾತ್ರಿ ೯.೦೫ ಕ್ಕೆ ಅವರ ಅಂತಿಮ ಶ್ವಾಸ ಹೊರಬಂತು. ಅವರ ಆತ್ಮವು ದೇಹದ ಬಂಧನದಿಂದ ಮುಕ್ತವಾಯಿತು.

## 7.4 ಅವರ್ಣನೀಯ ದುಃಖದ ಕ್ಷಣ

ದಿನಾಂಕ ೬ ರ ಬೆಳಿಗ್ಗೆ ನಾಗಪುರದ ಮಹಾಲ್ ಕಾರ್ಯಲಯದ ಎದುರು ಅವರ ಅಂತಿಮ ದರ್ಶನಕ್ಕಾಗಿ ಬಂದವರಿಗೆ ದುಃಖ ತಡೆಯಲಾಗುತ್ತಿರಲಿಲ್ಲ. ಶ್ರೀ ಗುರೂಜಿಯವರು ಬರೆದು ಲಕೋಟೆಯಲ್ಲಿ ಇಟ್ಟಿದ್ದ ೩ ಪತ್ರಗಳನ್ನು ತೆರೆದು ಓದಲಾಯಿತು. ಮಹಾರಾಷ್ಟ್ರದ ಪ್ರಾಂತ ಸಂಘಚಾಲಕ್ ಶ್ರೀ ಬಾಬಾಸಾಹೇಬ ಭಿಡೆಯವರು ಮೊದಲ ಪತ್ರ ಓದಿದರು. ಅದರಲ್ಲಿ ಶ್ರೀ ಬಾಳಾಸಾಹೇಬ್ ದೇವರಸರಿಗೆ ಸರಸಂಘಚಾಲಕ ಜವಾಬ್ದಾರಿ ವಹಿಸಲಾಗಿತ್ತು. ಉಳಿದೆರಡು ಪತ್ರಗಳನ್ನು ಶ್ರೀ ಬಾಳಾಸಾಹೇಬ ದೇವರಸರೇ ಓದಿದರು. ಎರಡನೇ ಪತ್ರದಲ್ಲಿ ಸಾಂಕೇತಿಕವಾಗಿ "ಸಂಘದ ಸಂಸ್ಥಾಪಕ ಡಾಕ್ಟರ್ ಹೆಡಗೇವಾರರಿಗಲ್ಲದೇ ಇನ್ನೂ ಯಾರಿಗೂ ಸ್ಮಾರಕ ರಚಿಸುವುದು ಸರಿಯಲ್ಲ" ಎಂದು ತಿಳಿಸಿದ್ದರು. ಮೂರನೇ ಪತ್ರದಲ್ಲಿ ಅತ್ಯಂತ ವಿನಮ್ರರಾಗಿ ಬರೆದಿದ್ದರು - "ನನ್ನಿಂದ ತಿಳಿದೋ ತಿಳಿಯದೆಯೋ ಯಾರಿಗಾದರೂ ನೋವಾಗಿದ್ದರೆ ನಾನು ಕೈ ಮುಗಿದು ಅವರ ಕ್ಷಮೆ ಕೇಳುತ್ತೇನೆ." ಈ ವಾಕ್ಯ ಕೇಳಿದ ಸಾವಿರಾರು ಜನರಿಗೆ ದುಃಖ ಉಮ್ಮಳಿಸಿ ಬಂತು. ಕಣ್ಣುಗಳು ಒದ್ದೆಯಾದವು. ಸ್ವತಃ ಬಾಳಾಸಾಹೇಬರ ಕಂಠ ತುಂಬಿಬಂತು. ಈ ಪತ್ರದಲ್ಲಿ ಸಂತ ತುಕಾರಾಮರ ಒಂದು ಅಭಂಗವನ್ನು ಉಲ್ಲೇಖ ಮಾಡಿದ್ದರು. ಅದರ ಭಾವಾರ್ಥ ಹೀಗಿದೆ :

**"ಹೇ ಸಂತಗಣ ನನ್ನ ಈ ಅಂತಿಮ ಕೋರಿಕೆ ದಯಮಾಡಿ**
**ಪ್ರಭುವಿಗೆ ತಲುಪಿಸಿ ಅವನಿಗೆ ನನ್ನ ನೆನಪಳಿಸದಿರಲೆಂದು**
**ಹೆಚ್ಚೇನು ಹೇಳಲಿ?ಅವನಿಗೆಲ್ಲವೂ ತಿಳಿದಿದೆ**
**ತುಕಾರಾಮ ಪ್ರಭುಚರಣದಲ್ಲಿ ತಲೆಯಿಟ್ಟು ಬೇಡುವೆ**
**ನಿನ್ನ ಕೃಪಾಶ್ರಯ ನನ್ನ ಮೇಲೆ ಸದಾ ಇರಲಿ"**.

ನಂತರ ಶ್ರೀ ಗುರೂಜಿಯವರ ದೇಹವನ್ನು ನಾಗಪುರದ ರೇಶಂಬಾಗ್ ನ ಡಾ|| ಹೆಡಗೇವಾರರ ಸಮಾಧಿಯ ಮುಂದೆ ಶ್ರೀಗಂಧದ ಚಿತೆಯ ಮೇಲಿಟ್ಟು, ಅಗ್ನಿ ಸ್ಪರ್ಶ ಮಾಡಲಾಯಿತು. ಚಿತೆಯಿಂದ ಏಳುತ್ತಿದ್ದ ಅಗ್ನಿಜ್ವಾಲೆಯಲ್ಲಿ ಶ್ರೀ ಗುರೂಜಿಯವರ ಶರೀರವೂ ಶ್ರೀ ಗಂಧದ ಕಟ್ಟಿಗೆಯಂತೆಯೇ ಪಂಚಭೂತಗಳಲ್ಲಿ ವಿಲೀನವಾಯಿತು. ಆಮೇಲೆ ಭಗವದ್ಧ್ವಜಾರೋಹಣ ಆಗಿ ಸಾವಿರಾರು ಗದ್ಗದ ಕಂಠಗಳಿಂದ ಸಂಘದ ಪ್ರಾರ್ಥನೆ ಅಯಿತು. 'ಭಾರತಮಾತಾ ಕೀ ಜಯ್' ಹೇಳಿದ ನಂತರ ಶಾಖಾ ವಿಕಿರ ಆಯಿತು. ಸ್ವಯಂಸೇವಕರೂ ನಾಗರೀಕರೂ ಭಾರವಾದ ಹೃದಯಗಳೊಂದಿಗೆ ತಮ್ಮ ಮನೆಗಳಿಗೆ ಹಿಂದಿರುಗಿದರು.

ಈಗ ರೇಶಂಬಾಗ್ ನಲ್ಲಿ ಇಬ್ಬರು ಚೈತನ್ಯರೂಪಿ ಮಹಾಪುರುಷರಾದರು. ಒಬ್ಬರು ಸ್ಮೃತಿಮಂದಿರದ ಮೇಲ್ಭಾಗದಲ್ಲಿ ಮೂರ್ತಿರೂಪದಲ್ಲಿ ಕುಳಿತ ಪೂ. ಡಾ|| ಹೆಡಗೇವಾರ್.

ಇನ್ನೊಬ್ಬರು ಚಂದನದ ಚಿತೆಯ ಮೇಲೆ ಸಮಿಧೆಯಂತೆ ಉರಿದ ದಧೀಚಿ ಶ್ರೀ ಗುರೂಜಿ ಸ್ಮೃತಿ ಚಿಹ್ನೆಯ ರೂಪದಲ್ಲಿ. ಡಾಕ್ಟರ್ ಜೀಯವರ ಮುಖಮಂಡಲದ ಭಾವನೆ ಹೇಳುತ್ತದೆ. – "ನನ್ನ ಆಯ್ಕೆ ಸಾರ್ಥಕವಾಯಿತು ! ಶ್ರೀ ಗುರೂಜಿಯವರು ಸಂಘದ ಹಿರಿಮೆಯನ್ನು ವಿಶ್ವವ್ಯಾಪಿಗೊಳಿಸಿದರು."

ಶ್ರೀ ಗುರೂಜಿಯವರ ಸ್ಮೃತಿಯಲ್ಲಿ ಅನೇಕ ಸಂತರು ಮತ್ತು ಪ್ರಮುಖರು ಶ್ರದ್ಧಾಸುಮನಗಳನ್ನು ಅರ್ಪಿಸಿದರು. ಆಚಾರ್ಯ ವಿನೋಬಾಭಾವೆಯವರು "ಶ್ರೀ ಗುರೂಜಿಯವರಲ್ಲಿ ಸಂಕುಚಿತತೆ ಎಂಬುದೇ ಇರಲಿಲ್ಲ. ಅವರು ಶುದ್ಧ ರಾಷ್ಟ್ರೀಯ ವಿಚಾರಗಳಿಂದಲೇ ಕೆಲಸ ಮಾಡುತ್ತಿದ್ದರು. ಅವರು ಇಸ್ಲಾಂ , ಕ್ರೈಸ್ತ ಇತ್ಯಾದಿ ಮತಗಳನ್ನು ಆದರದಿಂದ ನೋಡುತ್ತಿದ್ದರು ಮತ್ತು ಭಾರತದಲ್ಲಿ ಯಾರೂ ಪ್ರತ್ಯೇಕವಾಗಿ ಇರಬಾರದೆಂದು ಅಪೇಕ್ಷೆಪಡುತ್ತಿದ್ದರು". ಎಂದಿದ್ದಾರೆ. ಪುರಿಯ ಜಗದ್ಗುರು ಶಂಕರಾಚಾರ್ಯರು "ಅವರೋರ್ವ ಬಿಳಿ ವಸ್ತ್ರದಲ್ಲಿರುವ ಸಂತ" ಎಂದರು. ಜೈನಮುನಿ ಆಚಾರ್ಯ ಸುಶೀಲ ಕುಮಾರಜೀಯವರು ಹೇಳಿದ್ದು "ಅವರೊಬ್ಬ ಸಾಂಸ್ಕೃತಿಕ ಮಹಾಮಾನವ". ಇನ್ನೋರ್ವ ಜೈನ ಸಂತ ಆಚಾರ್ಯ ತುಳಸಿಯವರು ಹೇಳಿದ್ದು "ಶ್ರೀ ಗುರೂಜಿಯವರು ಶ್ರೇಷ್ಠ ಸಮಾಲೋಚಕ ಮತ್ತು ಗುಣಗ್ರಾಹಿ ಆಗಿದ್ದರು". ಸಂಸತ್ತಿನಲ್ಲಿ ರಾಷ್ಟ್ರಪತಿ ಶ್ರೀ ವಿ.ವಿ.ಗಿರಿ, ಲೋಕಸಭಾ ಅಧ್ಯಕ್ಷ ಶ್ರೀ ಗುರುದಯಾಲ್ ಸಿಂಹ ಧಿಲ್ಲೋನ್ ಮುಂತಾದವರೂ ಶ್ರೀ ಗುರೂಜಿಯವರ ಗುಣಗಾನ ಮಾಡಿದ್ದಾರೆ. ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು " ಸದನದ ಸದಸ್ಯರಾಗಿರದ ಒಬ್ಬಪ್ರತಿಷ್ಠಿತ ವ್ಯಕ್ತಿ ಶ್ರೀ ಗೋಳವಲಕರ್ ಇನ್ನಿಲ್ಲ,. ಅವರು ವಿದ್ವಾಂಸರಾಗಿದ್ದರು. ದೃಢನಂಬಿಕೆಯ ವ್ಯಕ್ತಿಯಾಗಿದ್ದರು. ತಮ್ಮ ಪ್ರಭಾವೀ ವ್ಯಕ್ತಿತ್ವ ಮತ್ತು ವಿಚಾರಗಳ ಬಗ್ಗೆ ಅಖಂಡ ನಿಷ್ಠೆಯ ಕಾರಣದಿಂದಾಗಿ ರಾಷ್ಟ್ರಜೀವನದಲ್ಲಿ ಅವರಿಗೆ ಮಹತ್ವದ ಸ್ಥಾನವಿತ್ತು" ಎಂದರು. "ಅವರೊಬ್ಬ ಕರ್ಮಯೋಗಿ ಹಾಗೂ ಆತ್ಮಜ್ಞಾನಿ ಆಗಿದ್ದರು" ಎಂದರು ಕಾಂಗ್ರೆಸ್ಸಿನ ಶ್ರೀ ಶ್ಯಾಮನಂದನ ಮಿಶ್ರ. "ಅವರು ರಾಷ್ಟ್ರಕಾರ್ಯಕ್ಕಾಗಿ ದೇಶಭಕ್ತಿ, ಸಮರ್ಪಣೆ ಮತ್ತು ಸೇವಾ ಭಾವನೆಗಳನ್ನು ಸಾವಿರಾರು ತರುಣರಲ್ಲಿ ತುಂಬಿದರು" ಎಂದರು ಸಮಾಜವಾದಿ ನೇತಾ ಶ್ರೀ ಸುಮರ ಗುಹಾ. ಇನ್ನೊಬ್ಬ ನಾಯಕ ಶ್ರೀ ಎಸ್. ಎಂ. ಜೋಷಿಯವರು " ಶ್ರೀ ಗುರೂಜಿ ಓರ್ವ ತಪಸ್ವಿ" ಎಂದರು. ಅಕಾಲಿ ನಾಯಕ ಜತ್ಥೇದಾರ ಸಂತೋಷ ಸಿಂಹರು "ಶ್ರೀ ಗುರೂಜಿ ಮಹಾಪುರುಷರಾಗಿದ್ದರು. ಅವರಂಥವರು ಅಮರರಾಗುತ್ತಾರೆ. ಅವರ ದೇಹಾವಸಾನದಿಂದಾಗಿ ಸಿಖ್ ಸಮುದಾಯಕ್ಕೆ ತುಂಬಾ ನಷ್ಟವಾಗಿದೆ " ಎಂದರು. ಮಾರ್ಕ್ಸ್ವಾದಿ ಪಾರ್ಟಿಯ ಶ್ರೀ ತಕೀ ರಹಮಾನ್ ಹೇಳಿದ್ದು "ನಾನೆಂದೂ ಶ್ರೀ ಗುರೂಜಿಯವರನ್ನು ಕಂಡಿಲ್ಲ. ಆದರೂ ದೇಶದ ಉಜ್ವಲಭವಿಷ್ಯದ ಅವರ ಆದರ್ಶಗಳಲ್ಲಿ ವಿಶ್ವಾಸ ಇಟ್ಟಿರುವವರಲ್ಲಿ ಗುರೂಜಿಯವರ ಪ್ರೇರಣಾ ಶಕ್ತಿಯನ್ನು ನಾನು ಗುರುತಿಸಿದ್ದೇನೆ". ಕಾಂಗ್ರೆಸ್ ನಾಯಕ ಶ್ರೀ ಹಪೀಜುದ್ದೀನ್ ಖುರೇಶಿ ಹೇಳುತ್ತಾರೆ: "ಅವರೊಬ್ಬ ನಿಜವಾದ ಮಹಾಪುರುಷ. ಅವರು ಮುಸ್ಲಿಂ ವಿರೋಧಿ ಆಗಿರಲಿಲ್ಲ. ಮುಸ್ಲಿಂ ವಿರೋಧದ ಹೆಸರಿನಲ್ಲಿ ಈಗಲೂ ಮುಸಲ್ಮಾನರನ್ನು ಸಂಘದ ಹೆಸರು ಹೇಳಿ ಹೆದರಿಸಲಾಗುತ್ತಿದೆ." ಶ್ರೀ ಜಯಪ್ರಕಾಶ ನಾರಯಣರು - "ಶ್ರೀ ಗುರೂಜಿ ಆಧ್ಯಾತ್ಮಿಕ ಮಹಾಪುರುಷ. ಅವರು ಶುದ್ಧ ರಾಷ್ಟ್ರೀಯ ವಿಚಾರಗಳಿಂದ ಸಾವಿರಾರು ನವಯುವಕರನ್ನು ಜಾಗೃತಗೊಳಿಸಿದರು" ಎಂದಿದ್ದಾರೆ.

ದೇಶದ ಎಲ್ಲಾ ಪತ್ರಿಕೆಗಳೂ ಗುರೂಜಿಯವರ ಅಸಾಮಾನ್ಯ ವ್ಯಕ್ತಿತ್ವದ ಬೇರೆ ಬೇರೆ ಮುಖಗಳ ಮೇಲೆ ಬೆಳಕು ಚೆಲ್ಲಿದವು,. ಇವಲ್ಲದೆ ರಾಷ್ಟ್ರಸೇವಿಕಾ ಸಮಿತಿಯ ಸಂಚಾಲಿಕಾ ಶ್ರೀಮತಿ ಮೌಸೀ ಕೇಳಕರ್, ಭಾರತೀಯ ಜನಸಂಘದ ಅಧ್ಯಕ್ಷ ಶ್ರೀ ಲಾಲಕೃಷ್ಣ ಅಡವಾಣಿ, ಶ್ರೀ ಅಟಲಬಿಹಾರಿ ವಾಜಪೇಯಿ ಮೊದಲಾದವರೂ ಗುರೂಜಿಯವರ ಸ್ಮೃತಿಯಲ್ಲಿ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

## ೨ ಆಧುನಿಕ ಭಗೀರಥ - ಆಧುನಿಕ ಗಂಗೆ

ಸಾರಾಂಶದಲ್ಲಿ ನವ ರಾಷ್ಟ್ರಜೀವನದ ಪ್ರವರ್ತಕನಂತೆ ತಮ್ಮ ಅಸಾಮಾನ್ಯ ವ್ಯಕ್ತಿತ್ವ ಮತ್ತು ಕತೃರ್ತ್ವಗಳ ಮೂಲಕ ರಾಷ್ಟ್ರಜೀವನಕ್ಕೆ ಅನುಪಮ ಮಾನಸಿಕ ಶಕ್ತಿಯನ್ನು ಕೊಟ್ಟಿರುವ ಶ್ರೀ ಗುರೂಜಿಯವರ ಬಗ್ಗೆ ಸಂಘದ ಹಿರಿಯ ಕಾರ್ಯಕರ್ತ ಶ್ರೀ ಬಾಬೂರಾವ್ ವೈದ್ಯರು ಹೇಳಿದ್ದು - "ಭಗೀರಥನು ಕಠಿಣ ತಪಸ್ಸಿನಿಂದ ಸ್ವರ್ಗದಲ್ಲಿ ಹರಿಯುತ್ತಿದ್ದ ಗಂಗೆಯನ್ನು ಭೂಮಿಗೆ ತಂದನು. ಅದರಿಂದ ಭಾರತ ಸಮೃದ್ಧ ಸುಭಿಕ್ಷ ದೇಶವಾಯಿತು. ಹಾಗೆಯೇ ಪೂಜ್ಯ ಡಾಕ್ಟರ್ ಜೀಯವರು ಮೋಕ್ಷದ ದಾರಿ ಹಿಡಿದಿದ್ದ ಪೂಜ್ಯ ಶ್ರೀ ಗುರೂಜಿಯವರ ಜೀವನ ಪ್ರವಾಹವನ್ನು ತಡೆದು ಭಾರತೀಯರ ಕಲ್ಯಾಣಕ್ಕಾಗಿ ಭೂಮಿಗೆ ತಂದರು; ತಾವೇ ಪ್ರಾರಂಭಿಸಿದ ಹಿಂದು ಸಮಾಜವನ್ನು ಸಂಘಟಿಸುವ, ಸಶಕ್ತಗೊಳಿಸುವ ಕಾರ್ಯವನ್ನು ಆ ಮೂಲಕ ಸಫಲತೆಯ ದಿಕ್ಕಿನಲ್ಲಿ ನಡೆಸಿದರು.